24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 112 | ನವದೆಹಲಿ | ಬೆಲೆ ₹10 | ಅಕ್ಟೋಬರ್, 18, 2026, ಭಾನುವಾರ

## ಒಳಪುಟಗಳಲ್ಲಿ

ತಿಹಾರ್ ಜೈಲಿನಲ್ಲಿ ಸಿಜೆಪಿ ನಾಯಕರಿಗೆ ಹೈ ಸೆಕ್ಯುರಿಟಿ - ಪು.4

ರಾಜಕೀಯವಾಗಿ ಎದುರಿಸಲು ಸಾಧ್ಯವಾಗದೆ ಕೆಲವರಿಂದ ಸ್ಟಿಂಗ್ ಮೂಲಕ ಗೊಂದಲ ಸೃಷ್ಟಿ: ಬಸವರಾಜ ಬೊಮ್ಮಾಯಿ -ಪು.6

# ಗಳಿಸಿದ ಜ್ಞಾನಮೌಲ್ಯ ಸರಿದಾರಿ ತೋರುವ ದಿಕ್ಸೂಚಿಯಾಗಲಿ: ಸಿಜೆಐ

## ಕಾನೂನು ಶಿಕ್ಷಣ ಕ್ರಿಮಿನಲ್, ಸಾಂವಿಧಾನಿಕ ಕಾನೂನು ಕಲಿಕೆಗೆ ಸೀಮಿತವಲ್ಲ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್

**ಬೆಂಗಳೂರು, ಅ.17:** **ಕೆಲವೊಮ್ಮೆ ರಾಜಿ ಮಾಡಿಕೊಳ್ಳುವ ಪ್ರಲೋಭನೆ ಎದುರಾಗಬಹುದು ಮತ್ತು ಇತರರು ಅಡ್ಡದಾರಿಗಳನ್ನು ಹಿಡಿಯಬಹುದು. ಅಂತಹ ಸಂದರ್ಭಗಳಲ್ಲಿ ಎನ್‌ಎಲ್‌ಎಸ್‌ಐಯುನಲ್ಲಿ ಪಡೆದ ಜ್ಞಾನ ಮತ್ತು ಮೌಲ್ಯಗಳು ಸರಿಯಾದ ದಾರಿಯನ್ನು ತೋರಿಸುವ ದಿಕ್ಸೂಚಿಯಾಗಬೇಕು ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.**

ಪದವೀಧರರು ಕೇವಲ ವೃತ್ತಿಯೊಂದಕ್ಕೆ ಪ್ರವೇಶಿಸುತ್ತಿಲ್ಲ, ಬದಲಿಗೆ ಜನರ ಸೇವೆ ಮಾಡುವ ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ರಕ್ಷಿಸುವ ಮಹತ್ತರ ಜವಾಬ್ದಾರಿಯನ್ನು ಹೊರುತ್ತಿದ್ದಾರೆ ಎಂದು ಸಿಜೆಐ ಹೇಳಿದರು.

ಕಾನೂನು ನಿಮ್ಮ ತಾಳ್ಮೆಗೆ ಸವಾಲೊಡ್ಡುತ್ತದೆ, ನಿಮ್ಮ ನೈತಿಕತೆಯನ್ನು ಪರೀಕ್ಷಿಸುತ್ತದೆ ಮತ್ತು ನಿಮ್ಮ ಧೈರ್ಯದ ಆಳವನ್ನು ಬೇಡುತ್ತದೆ. ಆದರೆ ಅದು ಸೇವೆಯ ವಿಶಿಷ್ಟ ಸಂತೋಷವನ್ನೂ ನೀಡುತ್ತದೆ. ಅನ್ಯಾಯವನ್ನು ಸರಿಪಡಿಸಿದ ತೃಪ್ತಿ, ಸ್ವಾತಂತ್ರ್ಯವನ್ನು ರಕ್ಷಿಸಿದ ಹೆಮ್ಮೆ ಮತ್ತು ಸಂವಿಧಾನವನ್ನು ಎತ್ತಿಹಿಡಿದ ಗೌರವವನ್ನು ಕಾನೂನು ವೃತ್ತಿ ನಿಮಗೆ ನೀಡುತ್ತದೆ ಎಂದು ಹೇಳಿದರು.

ವಿಶ್ವವಿದ್ಯಾಲಯದ ಎಲ್‌ಎಲ್‌ಬಿ ಪದವೀಧರೆ ದಿವಂಗತ ಊರ್ವಶಿ ಕೃಷ್ಣಾತ್ರ ಅವರನ್ನು ಸಿಜೆಐ ಸ್ಮರಿಸಿದರು. ಅವರು ಇಂದು ಘಟಿಕೋತ್ಸವದಲ್ಲಿ ಉಪಸ್ಥಿತರಿದ್ದು ಪದವಿ ಸ್ವೀಕರಿಸಬೇಕಿತ್ತು ಎಂದು ವಿಷಾದಿಸಿದ ಅವರು, ಸಭೆಯ ಪರವಾಗಿ ಅವರ ಕುಟುಂಬ ಮತ್ತು ಸ್ನೇಹಿತರಿಗೆ ಸಂತಾಪ ಸೂಚಿಸಿದರು.

ವಿದ್ಯಾರ್ಥಿಗಳ ಪೋಷಕರ ತ್ಯಾಗ ಮತ್ತು ನಂಬಿಕೆಯನ್ನು ಶ್ಲಾಘಿಸಿದ ಅವರು, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ, ಸವಾಲೊಡ್ಡಿ, ಬೆಂಬಲಿಸಿದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕೊಡುಗೆಯನ್ನೂ ಪ್ರಶಂಸಿಸಿದರು.

ಸಿಜೆಐ ಸೂರ್ಯಕಾಂತ್ ಮತ್ತು ಮಿಶ್ರಾ ಅವರು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವ ಪ್ರಸ್ತಾವಿತ ನಿರ್ಧಾರದ ಕುರಿತು ವಿವಾದ ಉಂಟಾದ ಬೆನ್ನಲ್ಲೇ ಈ ರದ್ದತಿ ನಡೆದಿತ್ತು. ಘಟಿಕೋತ್ಸವದಲ್ಲಿ ಅವರ ಭಾಗವಹಿಸುವಿಕೆಗೆ ವಿದ್ಯಾರ್ಥಿಗಳು, ಪದವಿ ಪಡೆಯಲಿರುವ ವಿದ್ಯಾರ್ಥಿಗಳು ಮತ್ತು ಹಳೆಯ ವಿದ್ಯಾರ್ಥಿಗಳು ಸೇರಿದಂತೆ 700ಕ್ಕೂ ಹೆಚ್ಚು ಮಂದಿ ಆಕ್ಷೇಪ ವ್ಯಕ್ತಪಡಿಸಿದ್ದರು.

ಇದಕ್ಕೂ ಮೊದಲು ಹೈದರಾಬಾದ್‌ನ ನ್ಯಾಷನಲ್ ಅಕಾಡೆಮಿ ಆಫ್ ಲೀಗಲ್ ಸ್ಟಡೀಸ್ ಅಂಡ್ ರಿಸರ್ಚ್ (ನಲ್ಸಾರ್) ವಿಶ್ವವಿದ್ಯಾಲಯದಲ್ಲೂ ಘಟಿಕೋತ್ಸವದಲ್ಲಿ ಸಿಜೆಐ ಸೂರ್ಯಕಾಂತ್ ಅವರ ಉಪಸ್ಥಿತಿಗೆ ವಿದ್ಯಾರ್ಥಿಗಳು ವಿರೋಧ ವ್ಯಕ್ತಪಡಿಸಿದ್ದರಿಂದ ವಿವಾದ ಉಂಟಾಗಿತ್ತು.



## ಪ್ರಶ್ನಿಸುವ ಮೂಲಭೂತ ಸ್ವಾತಂತ್ರ್ಯ ಇರುವುದೇ ನಿಜವಾದ ಪ್ರಜಾಪ್ರಭುತ್ವದ ಲಕ್ಷಣ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

**ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ 34ನೇ ಘಟಿಕೋತ್ಸವ**

**ಬೆಂಗಳೂರು, ಅ.17:** ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರದ ಹೊಣೆಗಾರಿಕೆಯೇ ಬುನಾದಿಯಾಗಿದೆ. ಎಲ್ಲರೂ ಸರ್ಕಾರಕ್ಕೆ ಕುರುಡಾಗಿ ತಲೆಬಾಗುವುದೇ ಪ್ರಜಾಪ್ರಭುತ್ವದ ಬಲವಲ್ಲ, ಬದಲಿಗೆ ಪ್ರತಿಯೊಬ್ಬ ನಾಗರಿಕನಿಗೂ ಅಧಿಕಾರದಲ್ಲಿರುವವರನ್ನು ಪ್ರಶ್ನಿಸುವ ಮೂಲಭೂತ ಸ್ವಾತಂತ್ರ್ಯ ಇರುವುದೇ ನಿಜವಾದ ಪ್ರಜಾಪ್ರಭುತ್ವದ ಲಕ್ಷಣ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಳಿದ್ದಾರೆ.

ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ 34ನೇ ವಾರ್ಷಿಕ ಘಟಿಕೋತ್ಸವದಲ್ಲಿ ಭಾಗವಹಿಸಿ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸರ್ಕಾರದೊಂದಿಗೆ ಏಕಾಭಿಪ್ರಾಯ ಹೊಂದಿರಬೇಕು ಎಂದೇನಿಲ್ಲ. ಪ್ರತಿಯೊಬ್ಬ ನಾಗರಿಕನಿಗೂ ಸರ್ಕಾರವನ್ನು ಪ್ರಶ್ನಿಸುವ ಹಕ್ಕಿದೆ. ನೀವೇ ಜವಾಬ್ದಾರರು, ನೀವೇ ಹೊಣೆಗಾರರು ಹಾಗೂ ಸಂವಿಧಾನವು ನಿಮಗೆ ನೀಡಿರುವ ಹಕ್ಕುಗಳು ಮತ್ತು ಸರಿಪಡಿಸುವ ಶಕ್ತಿ ನಿಮ್ಮ ಬಳಿಯಿದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದ್ದಾರೆ.

ಇಂದಿನ ದಿನಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಗಳು ವಿವಿಧ ಪರೀಕ್ಷೆಗಳನ್ನು ಎದುರಿಸುತ್ತಿದ್ದು, ಸಾಂಸ್ಥಿಕ ವ್ಯವಸ್ಥೆಗಳು ಭಾರಿ ಒತ್ತಡಕ್ಕೆ ಸಿಲುಕಿವೆ. ಹೀಗಾಗಿ ಸಮಾಜಕ್ಕೆ ಪ್ರಶ್ನಿಸುವ, ಚರ್ಚಿಸುವ, ವಿಚಾರಗಳನ್ನು ಸವಾಲಿಗೆ ಒಡ್ಡುವ ಮತ್ತು ಅದಕ್ಕೆ ಸೂಕ್ತ ಪರಿಹಾರಗಳನ್ನು ಒದಗಿಸುವ ಯುವಜನರ ತುರ್ತು ಅಗತ್ಯವಿದೆ ಎಂದು ಹೇಳಿದ್ದಾರೆ.

ಯಾವುದೇ ಕಾರಣಕ್ಕೂ ಪ್ರಶ್ನೆಗಳನ್ನು ಕೇಳಲು ಹಿಂಜರಿಯಬೇಡಿ. ಆದರೆ ಆ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಜವಾಬ್ದಾರಿಯನ್ನು ಹೊರಲೂ ಸಿದ್ಧರಾಗಿರಿ. ಕಾನೂನು ವೃತ್ತಿಪರರು ಸಾಂವಿಧಾನಿಕ ನೈತಿಕತೆಯ ಕಾವಲುಗಾರರಾಗಿ ಕಾರ್ಯನಿರ್ವಹಿಸಬೇಕು ಎಂದು ಅವರು ಯುವ ಕಾನೂನು ಪದವೀಧರರಿಗೆ ಕಿವಿಮಾತು ಹೇಳಿದ್ದಾರೆ. ಭಾರತಕ್ಕೆ ಕೇವಲ ಹೆಚ್ಚಿನ ಸಂಖ್ಯೆಯ ವಕೀಲರ ಅಗತ್ಯವಿಲ್ಲ; ಬದಲಿಗೆ ಪ್ರಾಮಾಣಿಕತೆ, ಕರುಣೆ ಹಾಗೂ ಧೈರ್ಯವಿರುವ ವಕೀಲರು ಬೇಕಾಗಿದ್ದಾರೆ. ಕೇವಲ ಕಾನೂನನ್ನು ತಿಳಿದುಕೊಳ್ಳುವುದು ವ್ಯಕ್ತಿಯನ್ನು ವೃತ್ತಿಪರರನ್ನಾಗಿ ಮಾಡುತ್ತದೆ, ಆದರೆ ನ್ಯಾಯದ ಮೌಲ್ಯವನ್ನು ಅರ್ಥಮಾಡಿಕೊಳ್ಳುವುದು ಅವರನ್ನು ನಾಯಕರನ್ನಾಗಿ ರೂಪುಗೊಳಿಸುತ್ತದೆ ಎಂದು ತಿಳಿಸಿದರು.

## ಎಲ್.ಕೆ. ಅಡ್ವಾಣಿಗೆ ಎದೆಸೋಂಕು ಆಸ್ಪತ್ರೆಗೆ ದಾಖಲು



**ನವದೆಹಲಿ, ಅ.17:** ಬಿಜೆಪಿಯ ಹಿರಿಯ ನಾಯಕ ಹಾಗೂ ಮಾಜಿ ಉಪಪ್ರಧಾನಿ ಲಾಲ್ ಕೃಷ್ಣ ಅಡ್ವಾಣಿ (98) ಅವರಿಗೆ ಎದೆ ಸೋಂಕು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ದೆಹಲಿಯ ಇಂದ್ರಪ್ರಸ್ಥ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಆರೋಗ್ಯ ಸ್ಥಿರವಾಗಿದ್ದು, ವೈದ್ಯರ ತಂಡ ನಿರಂತರವಾಗಿ ನಿಗಾ ವಹಿಸಿದೆ ಎಂದು ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ.

ಅಡ್ವಾಣಿ ಅವರನ್ನು ಶುಕ್ರವಾರ ಸಂಜೆ ಸುಮಾರು 7.30ರ ವೇಳೆಗೆ ಆಸ್ಪತ್ರೆಗೆ ಕರೆತರಲಾಗಿತ್ತು. ಬಳಿಕ ಅವರನ್ನು ಶ್ವಾಸಕೋಶ ವಿಭಾಗಕ್ಕೆ ದಾಖಲಿಸಿ ಚಿಕಿತ್ಸೆ ಆರಂಭಿಸಲಾಗಿದೆ. ವೈದ್ಯರು ಅಗತ್ಯ ವೈದ್ಯಕೀಯ ಪರೀಕ್ಷೆಗಳನ್ನು ನಡೆಸುತ್ತಿದ್ದು, ಅವರ ಆರೋಗ್ಯದ ಮೇಲೆ ನಿಕಟ ನಿಗಾ ಇರಿಸಿದ್ದಾರೆ.

ಆಸ್ಪತ್ರೆಯ ಮಾಹಿತಿ ಪ್ರಕಾರ, ಅಡ್ವಾಣಿ ಪ್ರಸ್ತುತ ತೀವ್ರ ನಿಗಾ ಘಟಕದಲ್ಲಿ ವೈದ್ಯಕೀಯ ಮೇಲ್ವಿಚಾರಣೆಯಲ್ಲಿದ್ದಾರೆ. ಹಿರಿಯ ನರವಿಜ್ಞಾನ ಸಲಹೆಗಾರ ಡಾ. ವಿನೀತ್ ಸೂರಿ ಅವರ ಆರೈಕೆಯಲ್ಲಿ ಚಿಕಿತ್ಸೆ ಮುಂದುವರಿದಿದೆ. ಸದ್ಯ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಆಸ್ಪತ್ರೆ ತಿಳಿಸಿದೆ.

ಕೇಂದ್ರ ಆರೋಗ್ಯ ಸಚಿವ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಶನಿವಾರ ಆಸ್ಪತ್ರೆಗೆ ಭೇಟಿ ನೀಡಿ ಅಡ್ವಾಣಿ ಅವರ ಆರೋಗ್ಯದ ಕುರಿತು ಮಾಹಿತಿ ಪಡೆದುಕೊಂಡರು. ಅಡ್ವಾಣಿ ಅವರ ಶೀಘ್ರ ಚೇತರಿಕೆಗಾಗಿ ಹಲವು ರಾಜಕೀಯ ನಾಯಕರು ಹಾರೈಸಿದ್ದಾರೆ.

## ಕಬ್ಬು ಬೆಳೆಗಾರರ ಸಮಸ್ಯೆ ನಿವಾರಣೆಗೆ ಕೇಂದ್ರದ ಮೇಲೆ ಒತ್ತಡ: ಸಿಎಂ

**ಬೆಳಗಾವಿ, ಅ.17:** ಕಬ್ಬು ಬೆಳೆಗಾರರ ಸಮಸ್ಯೆ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಕೇಂದ್ರ ಸರಕಾರವೂ ಸಮಿತಿ ರಚಿಸಿದ್ದು, ವಿವಿಧ ರಾಜ್ಯಗಳೊಂದಿಗೆ ಚರ್ಚೆ ನಡೆಸುತ್ತಿದೆ. ರೈತರ ಬೇಡಿಕೆಗಳ ಈಡೇರಿಕೆಗೆ ನಮ್ಮ ಕಡೆಯಿಂದಲೂ ಒತ್ತಡ ಹೇರಲಾಗುತ್ತಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.



ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳಿಗೆ ಶಿವಕುಮಾರ್ ಅವರು ಶನಿವಾರ ಪ್ರತಿಕ್ರಿಯೆ ನೀಡಿದರು.

ಸಾವಿರಾರು ರೈತರು ಹೋರಾಟ ನಡೆಸುತ್ತಿದ್ದಾರೆ. ಅವರ ಕಷ್ಟಗಳು ಮತ್ತು ಸಮಸ್ಯೆಗಳ ಬಗ್ಗೆ ಅರಿವಿದೆ. ಈ ಹಿಂದೆ ಸರಕಾರದ ಪ್ರತಿನಿಧಿಗಳನ್ನು ಕಳುಹಿಸಿ ಮಾತುಕತೆ ನಡೆಸಿದ್ದೇವೆ. ದಿಲ್ಲಿಯಲ್ಲಿಯೂ ಚರ್ಚೆ ನಡೆದಿದೆ ಎಂದರು.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ನಮ್ಮ ರಾಜ್ಯದವರೇ ಆಗಿದ್ದರೂ, ಸಮಸ್ಯೆ ಕರ್ನಾಟಕಕ್ಕೆ ಮಾತ್ರ ಸೀಮಿತವಾದ ಸಮಸ್ಯೆಯಲ್ಲ. ಹೀಗಾಗಿ, ಅವರು ಬೇರೆ ಬೇರೆ ರಾಜ್ಯಗಳ ಪ್ರತಿನಿಧಿಗಳೊಂದಿಗೂ ಮಾತುಕತೆ ನಡೆಸುತ್ತಿದ್ದಾರೆ. ರೈತರ ಬೇಡಿಕೆಗಳ ಈಡೇರಿಕೆಗೆ ನಾವು ಒತ್ತಾಯಿಸುತ್ತಿದ್ದೇವೆ ಎಂದು ಹೇಳಿದರು.

ರೈತರು, ಕಾರ್ಖಾನೆಗಳ ಜತೆ ಚರ್ಚಿಸಿ ತೀರ್ಮಾನ "ಸಕ್ಕರೆ ಕಾರ್ಖಾನೆಗಳ ಮಾಲೀಕರಿಗೂ ಅವರದೇ ಆದ ಸಮಸ್ಯೆಗಳಿವೆ. ಅವರೊಂದಿಗೂ ಸಭೆ ನಡೆಸಲು ಉದ್ದೇಶಿಸಲಾಗಿತ್ತು. ಆದರೆ, ಕಾರಣಾಂತರಗಳಿಂದ ಸಭೆ ನಡೆಯಲಿಲ್ಲ. ರೈತರ ಸಮಸ್ಯೆಗಳನ್ನು ಆಲಿಸುವ ಜತೆಗೆ ಕಾರ್ಖಾನೆಗಳ ಸಮಸ್ಯೆಗಳನ್ನೂ ತಿಳಿದುಕೊಂಡು, ಏನು ಮಾಡಬಹುದು ಎಂಬುದರ ಬಗ್ಗೆ ಚರ್ಚಿಸಿ, ಮುಂದಿನ ಕ್ರಮ ಕೈಗೊಳ್ಳುತ್ತೇವೆ" ಎಂದು ಹೇಳಿದರು.

10–12 ವರ್ಷಗಳಿಂದ ಸಕ್ಕರೆ ಬೆಲೆ ಏರಿಕೆ ಸಮಸ್ಯೆ ಇದೆ. ಸಕ್ಕರೆ ಬೆಲೆ ಹೆಚ್ಚಳದ ಬಗ್ಗೆ ಕೇಳಿದಾಗ, "ಕಳೆದ 10ರಿಂದ 12 ವರ್ಷಗಳಿಂದ ಈ ಸಮಸ್ಯೆ ಮುಂದುವರಿದಿದೆ. ಈ ವಿಚಾರದಲ್ಲಿ ಸಂಬಂಧಪಟ್ಟವರೊಂದಿಗೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು" ಎಂದರು.

## ಗುಲಾಬಿ ಮೆಟ್ರೋ ಉದ್ಘಾಟನೆಗೆ ಆಹ್ವಾನಿಸಿ ಪ್ರಧಾನಿ ಮೋದಿಗೆ ಸಿಎಂ ಡಿ.ಕೆ.ಶಿವಕುಮಾರ್ ಪತ್ರ

**ಬೆಂಗಳೂರು, ಅ.17:** ಬಹುನಿರೀಕ್ಷಿತ ನಮ್ಮ ಮೆಟ್ರೋದ ಗುಲಾಬಿ ಮಾರ್ಗದ ಮೊದಲ ಹಂತದ ಉದ್ಘಾಟನೆಗೆ ಸಿದ್ಧತೆ ಚುರುಕುಗೊಂಡಿದ್ದು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪತ್ರ ಬರೆದಿದ್ದಾರೆ. ಕಾಳೇನ ಅಗ್ರಹಾರದಿಂದ ತಾವರೆಕೆರೆ ವರೆಗಿನ 7.5 ಕಿಲೋಮೀಟರ್ ಉದ್ದದ ಎತ್ತರಿಸಿದ ಮೆಟ್ರೋ ಮಾರ್ಗವನ್ನು ಉದ್ಘಾಟಿಸಲು ದಿನಾಂಕ ನಿಗದಿಪಡಿಸುವಂತೆ ಪ್ರಧಾನಿಯವರಿಗೆ ಮನವಿ ಮಾಡಿದ್ದಾರೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಈ ತಿಂಗಳ ಕೊನೆಯ ವಾರ ಅಥವಾ ನವೆಂಬರ್ ಮೊದಲ ವಾರದಲ್ಲಿ ಗುಲಾಬಿ ಮಾರ್ಗ ಸಾರ್ವಜನಿಕರ ಸಂಚಾರಕ್ಕೆ ಮುಕ್ತವಾಗುವ ನಿರೀಕ್ಷೆಯಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಸಮಯಾವಕಾಶದ ಆಧಾರದ ಮೇಲೆ ಉದ್ಘಾಟನಾ ದಿನಾಂಕ ಅಂತಿಮಗೊಳ್ಳುವ ಸಾಧ್ಯತೆಯಿದೆ. ಒಂದು ವೇಳೆ ಪ್ರಧಾನಿ ಕಾರ್ಯಕ್ರಮಕ್ಕೆ ಆಗಮಿಸಲು ಸಾಧ್ಯವಾಗದಿದ್ದರೆ, ನವೆಂಬರ್ 1ರ ಕನ್ನಡ ರಾಜ್ಯೋತ್ಸವದಂದು ಮಾರ್ಗವನ್ನು ಲೋಕಾರ್ಪಣೆ ಮಾಡುವ ಪರ್ಯಾಯ ಚಿಂತನೆಯೂ ನಡೆದಿದೆ ಎನ್ನಲಾಗಿದೆ.



■ **ಅಕ್ಟೋಬರ್ ಕೊನೆಯ ವಾರ ಅಥವಾ ನವೆಂಬರ್ ಮೊದಲ ವಾರದಲ್ಲಿ ಸಂಚಾರಕ್ಕೆ ಮುಕ್ತಗೊಳ್ಳುವ ನಿರೀಕ್ಷೆ**

## ಕಬ್ಬು ಬೆಳೆಗಾರರ ಬೇಡಿಕೆ ಈಡೇರಿಸಲು ಸರ್ಕಾರ ಬದ್ಧ: ಪ್ರಲ್ಹಾದ ಜೋಶಿ

**ನವರಾತ್ರಿ ನಂತರ ರಾಜ್ಯಕ್ಕೆ ಭೇಟಿ ನೀಡಲಿದೆ ಕೇಂದ್ರದ ಉನ್ನತ ಮಟ್ಟದ ಸಮಿತಿ**



**ಹುಬ್ಬಳ್ಳಿ, ಅ.17:** ಸಕ್ಕರೆ ಎಂಎಸ್‌ಪಿ ಅಂದರೆ ಮಿನಿಮಮ್ ಸಪೋರ್ಟ್ ಪ್ರೈಸ್ ಅಲ್ಲ, ಅದು ಮಿಲ್ಲರ್‌ಗಳ ಕನಿಷ್ಠ ಮಾರಾಟ ದರ ಸರ್ಕಾರ ನಿಗದಿಪಡಿಸಿದ 31 ರೂಪಾಯಿಗಿಂತ ಮಾರುಕಟ್ಟೆಯಲ್ಲಿ ಸಕ್ಕರೆ ಈಗಾಗಲೇ 50 ರೂಪಾಯಿಯಿಂದ 60 ರೂಪಾಯಿಗೆ ಮಾರಾಟವಾಗುತ್ತಿದೆ. ಕೇಂದ್ರ ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಿದ್ದು, ನವರಾತ್ರಿ ಹಬ್ಬದ ನಂತರ ಸಮಿತಿ ರಾಜ್ಯಕ್ಕೆ ಭೇಟಿ ನೀಡಲಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಬ್ಬು ಬೆಳೆಗಾರರ ಬೇಡಿಕೆಗಳನ್ನು ಪರಿಹರಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ರೈತರ ಬೇಡಿಕೆಗಳನ್ನು ಪರಿಶೀಲಿಸಲು ತಜ್ಞರ ಉನ್ನತ ಮಟ್ಟದ ಸಮಿತಿ ರಚಿಸಲಾಗಿದ್ದು, ಎಂಎಸ್‌ಪಿ ಸೇರಿದಂತೆ ಪ್ರಮುಖ ವಿಷಯಗಳ ಬಗ್ಗೆ ಸಮಿತಿಯು ಧನಾತ್ಮಕ ಶಿಫಾರಸು ನೀಡಲಿದೆ. ರೈತರು ಕೇಳಿರುವ ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ಎಲ್ಲಾ ಬೇಡಿಕೆಗಳನ್ನು ಸಮಿತಿಯು ಧನಾತ್ಮಕವಾಗಿ ಪರಿಗಣಿಸಿ, ಶೀಘ್ರವಾಗಿ ಶಿಫಾರಸುಗಳನ್ನು ನೀಡುವಂತೆ ಸೂಚಿಸಲಾಗಿದೆ. ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಲ್ಲಿ ರೈತರ ಪ್ರತಿಭಟನೆಗಳಿಲ್ಲದೆ ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿರುವುದನ್ನು ಸಚಿವ ಈ ಸಂದರ್ಭದಲ್ಲಿ ಉಲ್ಲೇಖಿಸಿದ್ದಾರೆ.

### ಎಥೆನಾಲ್ ಖರೀದಿಯಲ್ಲಿ ಹೆಚ್ಚಳ



ವಿಶೇಷವಾಗಿ ಎಥೆನಾಲ್ ಖರೀದಿಯಲ್ಲಿ ದೇಶದಲ್ಲಿ ಗಮನಾರ್ಹ ಹೆಚ್ಚಳವಾಗಿದೆ. 2014ಕ್ಕಿಂತ ಮೊದಲು ಕೇವಲ 38 ಕೋಟಿ ಲೀಟರ್ ಎಥೆನಾಲ್ ಮಾತ್ರ ಖರೀದಿಸಲಾಗುತ್ತಿತ್ತು. ಆದರೆ, ಪ್ರಸ್ತುತ ಮೋದಿ ಸರ್ಕಾರದ ಅವಧಿಯಲ್ಲಿ ಇದು 1200 ಕೋಟಿ ಲೀಟರ್‌ಗೆ ಏರಿಕೆಯಾಗಿದೆ. ಇದರಲ್ಲಿ ಕೇವಲ ಕರ್ನಾಟಕದಿಂದಲೇ 165 ಕೋಟಿ ಲೀಟರ್ ಎಥೆನಾಲ್ ಖರೀದಿ ಮಾಡಲಾಗಿದ್ದು, ಇದು ಕಬ್ಬು ಬೆಳೆಗಾರರಿಗೆ ಹೆಚ್ಚಿನ ಅನುಕೂಲ ಕಲ್ಪಿಸಿದೆ ಎಂದು ವಿವರಿಸಿದರು. ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ದೆಹಲಿಯಲ್ಲಿ ನಡೆದ ಸಭೆಯ ಬಳಿಕ ವಿಶೇಷ ಸಮಿತಿಯನ್ನು ರಚಿಸಲಾಗಿದೆ. ರೈತರು ಹಾಗೂ ಬಳಕೆದಾರರ ಹಿತಾಸಕ್ತಿಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದೇ ಸರ್ಕಾರದ ಮುಖ್ಯ ಆದ್ಯತೆಯಾಗಿದೆ ಎಂದು ಪ್ರಲ್ಹಾದ್ ಜೋಶಿ ಈ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

## ನ.1ರ ಕಾಂಗ್ರೆಸ್ ರ್‍ಯಾಲಿಗೆ ದೆಹಲಿ ಪೊಲೀಸರಿಂದ ಅನುಮತಿ!

**ನವದೆಹಲಿ, ಅ.17:** ನವೆಂಬರ್ 1ರಂದು ರಾಮಲೀಲಾ ಮೈದಾನದಲ್ಲಿ ರ್‍ಯಾಲಿ ನಡೆಸಲು ದೆಹಲಿ ಪೊಲೀಸರು ಕಾಂಗ್ರೆಸ್ ಪಕ್ಷಕ್ಕೆ ಅನುಮತಿ ನೀಡಿದ್ದಾರೆ. ಈ ಕಾರ್ಯಕ್ರಮಕ್ಕೆ ನಿರಾಕ್ಷೇಪಣಾ ಪ್ರಮಾಣಪತ್ರ ಸಹ ನೀಡಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸೆಪ್ಟೆಂಬರ್ 30ರಂದು ಇಂಡಿಯಾ ಬ್ಲಾಕ್ ಎಸ್‌ಐಆರ್ ವಿವಾದಕ್ಕೆ ಸಂಬಂಧಿಸಿದಂತೆ ಜಂಟಿ ಕ್ರಿಯಾ ಯೋಜನೆಯನ್ನು ಅಂತಿಮಗೊಳಿಸಿತು. ಇದರಲ್ಲಿ ರ್‍ಯಾಲಿಗಳು ಮತ್ತು 'ಪ್ರಜಾಪ್ರಭುತ್ವ ಉಳಿಸಿ ಮಾರ್ಚ್ ಸೇರಿವೆ. ಇವಿಎಂಗಳ ಬದಲಿಗೆ ಮತಪತ್ರಗಳನ್ನು ಬಳಸಿಕೊಂಡು ಚುನಾವಣೆ ನಡೆಸಬೇಕೆಂದು ಎಲ್ಲಾ ಪಕ್ಷಗಳು ಒಪ್ಪುತ್ತವೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

# ಮಕ್ಕಳ ಇಂಟರ್‌ನೆಟ್ ಬಳಕೆಗೆ ವಯಸ್ಸಿನ ಆಧಾರಿತ ಸಂಪೂರ್ಣ ನಿಷೇಧ ಬೇಡ: ಸುಪ್ರೀಂ

**ನವದೆಹಲಿ, ಅ.17:** ಮಕ್ಕಳ ಇಂಟರ್‌ನೆಟ್ ಬಳಕೆಗೆ ವಯಸ್ಸಿನ ಆಧಾರದ ಮೇಲೆ ಸಂಪೂರ್ಣ ನಿರ್ಬಂಧ ಹೇರುವುದನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದ್ದು, ಇಂಟರ್‌ನೆಟ್ ಬಳಸುವ ಹಕ್ಕು ಮಕ್ಕಳಿಗೂ ಇದೆ ಎಂದು ಸ್ಪಷ್ಟಪಡಿಸಿದೆ. ಮಕ್ಕಳನ್ನು ಆನ್‌ಲೈನ್ ಅಪಾಯಗಳಿಂದ ರಕ್ಷಿಸುವುದು ಅಗತ್ಯವಾದರೂ, ಅದಕ್ಕಾಗಿ ಅವರ ಸ್ವಾತಂತ್ರ್ಯ ಮತ್ತು ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವುದು ಸಮಂಜಸವಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಕೆ.ವಿ. ಚಂದ್ರನ್ ಅವರನ್ನೊಳಗೊಂಡ ಪೀಠವು ಅ.15ರಂದು ನೀಡಿದ ಆದೇಶದಲ್ಲಿ, ಸಂವಿಧಾನದ 21ನೇ ವಿಧಿಯಡಿ ದೊರೆಯುವ ಜೀವಿಸುವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು ಹಾಗೂ 19(1)(ಎ) ವಿಧಿಯಡಿ ದೊರೆಯುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದೊಂದಿಗೆ ಇಂಟರ್‌ನೆಟ್ ಬಳಕೆಯ ಹಕ್ಕು ಸಂಬಂಧಿಸಿದೆ ಎಂದು ತಿಳಿಸಿದೆ. ಮಕ್ಕಳ ವಯಸ್ಸು ಏನೇ ಇರಲಿ, ಅವರಿಗೆ ಇಂಟರ್‌ನೆಟ್ ಪ್ರವೇಶಿಸುವ ಹಕ್ಕು ಇದೆ ಎಂಬುದನ್ನು ನ್ಯಾಯಾಲಯ ಒತ್ತಿಹೇಳಿದೆ.

**ಆನ್‌ಲೈನ್‌ನಲ್ಲಿ ಮಕ್ಕಳ ಸುರಕ್ಷತೆಗೆ ಕಟ್ಟುನಿಟ್ಟಿನ ಕ್ರಮ ಅಗತ್ಯ, ಮೂಲಭೂತ ಹಕ್ಕುಗಳಿಗೆ ಧಕ್ಕೆಯಾಗಬಾರದು**

ಮಕ್ಕಳನ್ನು ಇಂಟರ್‌ನೆಟ್‌ನಿಂದ ಸಂಪೂರ್ಣವಾಗಿ ದೂರವಿಡುವ ಬದಲು, ಆನ್‌ಲೈನ್‌ನಲ್ಲಿ ಎದುರಾಗುವ ಅಪಾಯಗಳನ್ನು ತಡೆಯಲು ಪರಿಣಾಮಕಾರಿ ಸುರಕ್ಷತಾ ವ್ಯವಸ್ಥೆ ರೂಪಿಸಬೇಕು ಎಂದು ಪೀಠ ಸೂಚಿಸಿದೆ.

**ಆನ್‌ಲೈನ್ ಲೈಂಗಿಕ ದೌರ್ಜನ್ಯದ ಬಗ್ಗೆ ಕಳವಳ**

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಅಶ್ಲೀಲ ಮತ್ತು ಶೋಷಣಾತ್ಮಕ ವಿಷಯಗಳು ಅಂತರ್ಜಾಲದಲ್ಲಿ ಹರಿದಾಡುತ್ತಿರುವುದರ ಬಗ್ಗೆ ಸುಪ್ರೀಂ ಕೋರ್ಟ್ ಗಂಭೀರ ಕಳವಳ ವ್ಯಕ್ತಪಡಿಸಿದೆ. ಇಂತಹ ವಿಷಯಗಳನ್ನು ಪತ್ತೆಹಚ್ಚಿ ತೆಗೆದುಹಾಕಲು



ಈಗಿರುವ ವ್ಯವಸ್ಥೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ನ್ಯಾಯಾಲಯ ಗಮನಸೆಳೆದಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಪಾವತಿಸಿದ ಪ್ರಚಾರ ಹಾಗೂ ಮರುನಿರ್ದೇಶನದ ಕೊಂಡಿಗಳ ಮೂಲಕ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ವಿಷಯಗಳು ಹರಡುತ್ತಿರುವ ಆರೋಪಗಳೂ ನ್ಯಾಯಾಲಯದ ಗಮನಕ್ಕೆ ಬಂದಿವೆ. ಒಂದು ವೇದಿಕೆಯಲ್ಲಿ ಇಂತಹ ವಿಷಯವನ್ನು ಪತ್ತೆಹಚ್ಚಿ ತೆಗೆದುಹಾಕಿದರೂ, ಅದೇ ವಿಷಯವನ್ನು ಇತರ ವೇದಿಕೆಗಳಲ್ಲಿ ಸ್ವಯಂಚಾಲಿತವಾಗಿ ಗುರುತಿಸುವ ವ್ಯವಸ್ಥೆ ಇಲ್ಲದಿರುವುದು ಸಮಸ್ಯೆಯನ್ನು ಹೆಚ್ಚಿಸುತ್ತಿದೆ ಎಂದು ಪೀಠ ಕಳವಳ ವ್ಯಕ್ತಪಡಿಸಿದೆ.

**ರಾಷ್ಟ್ರೀಯ ದತ್ತಾಂಶ ವ್ಯವಸ್ಥೆಗೆ ಸೂಚನೆ**

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ತ್ವರಿತವಾಗಿ ಗುರುತಿಸಿ ತೆಗೆದುಹಾಕಲು ಕೇಂದ್ರ ಸರ್ಕಾರ ಮತ್ತು ಇಂಟರ್‌ನೆಟ್ ಹಾಗೂ ಸಾಮಾಜಿಕ ಜಾಲತಾಣ ವೇದಿಕೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ನ್ಯಾಯಾಲಯ ಸೂಚಿಸಿದೆ. ಇಂತಹ ವಿಷಯಗಳನ್ನು ಗುರುತಿಸಲು ನೆರವಾಗುವ ಚಿತ್ರಗಳ ಡಿಜಿಟಲ್ ಗುರುತುಗಳು (ಪರ್ಸೆಪ್ಚುವಲ್ ಹ್ಯಾಶ್‌ಗಳು) ಮತ್ತು ಅಂತರ್ಜಾಲ ಕೊಂಡಿಗಳ ರಾಷ್ಟ್ರೀಯ ದತ್ತಾಂಶ ವ್ಯವಸ್ಥೆ ರೂಪಿಸಲು ಕೇಂದ್ರ ಸರ್ಕಾರ ಮಾರ್ಗಸೂಚಿಗಳನ್ನು ಸಿದ್ಧಪಡಿಸಬೇಕು ಎಂದು ನಿರ್ದೇಶಿಸಿದೆ.

**ಸಂಪೂರ್ಣ ನಿಷೇಧದಿಂದ ಅಪಾಯ ಹೆಚ್ಚುವ ಸಾಧ್ಯತೆ**

ಮಕ್ಕಳ ಇಂಟರ್‌ನೆಟ್ ಬಳಕೆಗೆ ಸಂಪೂರ್ಣ ನಿರ್ಬಂಧ ವಿಧಿಸಿದರೆ, ಅವರು ನಿಯಂತ್ರಣ ಕಡಿಮೆ ಇರುವ ಹಾಗೂ ಹೆಚ್ಚು ಅಪಾಯಕಾರಿಯಾದ ವೆಬ್‌ಸೈಟ್‌ಗಳತ್ತ ಆಕರ್ಷಿತರಾಗುವ ಸಾಧ್ಯತೆಯಿದೆ ಎಂದು ನ್ಯಾಯಾಲಯ ಎಚ್ಚರಿಸಿದೆ. ಆನ್‌ಲೈನ್‌ನಲ್ಲಿ ಯಾರಾದರೂ ಬೆದರಿಕೆ ಹಾಕಿದರೆ ಅಥವಾ ಆಮಿಷವೊಡ್ಡಿದರೆ, ನಿರ್ಬಂಧ ಉಲ್ಲಂಘಿಸಿದ್ದಕ್ಕಾಗಿ ಶಿಕ್ಷೆಯಾಗಬಹುದು ಎಂಬ ಭಯದಿಂದ ಮಕ್ಕಳು ಪೋಷಕರಿಗೆ ಅಥವಾ ನಂಬಿಕಸ್ಥರಿಗೆ ವಿಷಯ ತಿಳಿಸಲು ಹಿಂಜರಿಯಬಹುದು ಎಂದೂ ಅಭಿಪ್ರಾಯಪಟ್ಟಿದೆ. ಮಕ್ಕಳಿಗೆ ಸುರಕ್ಷಿತವಾದ ಸಾಮಾಜಿಕ ಜಾಲತಾಣ ಬಳಕೆಯನ್ನು ಉತ್ತೇಜಿಸಲು ಪೋಷಕರ ಒಪ್ಪಿಗೆ, ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಗೆ ಆದ್ಯತೆ ನೀಡಬೇಕು. ಮಕ್ಕಳ ಖಾತೆಗಳನ್ನು ಪೂರ್ವನಿಯೋಜಿತವಾಗಿ ಖಾಸಗಿಯಾಗಿಡುವುದು, ಅಪರಿಚಿತ ವಯಸ್ಕರಿಂದ ಸಂದೇಶ ಹಾಗೂ ಸಂಪರ್ಕಗಳಿಗೆ ನಿರ್ಬಂಧ ವಿಧಿಸುವುದು ಮತ್ತು ಮಕ್ಕಳಿಗೆ ತಲುಪುವ ಜಾಹೀರಾತು ಹಾಗೂ ವಿಷಯಗಳ ಮೇಲೆ ನಿಯಂತ್ರಣ ಹೇರುವುದು ಸೇರಿದಂತೆ ವಯೋಚಿತ ಸುರಕ್ಷತಾ ಕ್ರಮಗಳನ್ನು ರೂಪಿಸಬಹುದು ಎಂದು ನ್ಯಾಯಾಲಯ ಸೂಚಿಸಿದೆ.

# ಕಾನೂನು ಶಿಕ್ಷಣದ ಮೂಲಸೌಕರ್ಯ ವಿಸ್ತರಣೆಗೆ ಬದ್ಧ: ಡಿ.ಕೆ.ಶಿವಕುಮಾರ್

**ರಾಷ್ಟ್ರೀಯ ಕಾನೂನು ಶಾಲೆಗೆ ಜಮೀನು ಮಂಜೂರಾತಿ, ಆರ್ಥಿಕ ನೆರವಿನ ಭರವಸೆ**




**ಬೆಂಗಳೂರು, ಅ.17:** ಕಾನೂನು ಶಿಕ್ಷಣ ಮತ್ತು ಸಾಂಸ್ಥಿಕ ಮೂಲಸೌಕರ್ಯಗಳನ್ನು ಬಲಪಡಿಸಲು ರಾಜ್ಯ ಸರ್ಕಾರ ಬದ್ಧವಾಗಿದ್ದು, ರಾಷ್ಟ್ರೀಯ ಕಾನೂನು ಶಾಲೆ (ಎನ್‌ಎಲ್‌ಎಸ್‌ಐಯು) ಕ್ಯಾಂಪಸ್ ವಿಸ್ತರಣೆಗೆ ಸಂಪೂರ್ಣ ನೆರವು ನೀಡಲಾಗುವುದು" ಎಂದು ಸಿಎಂ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ನಾಗರಬಾವಿಯ ಬೆಂಗಳೂರು ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯದ ದಕ್ಷಿಣ ಬ್ಲಾಕ್, ಸಭಾಂಗಣ ಹಾಗೂ ವಿದ್ಯಾರ್ಥಿ ಕೇಂದ್ರ ನಿರ್ಮಾಣದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಶನಿವಾರ ಮಾತನಾಡಿದರು.

"ನ್ಯಾಷನಲ್ ಲಾ ಸ್ಕೂಲ್ ಸ್ಥಾಪನೆಯಲ್ಲಿ ಕರ್ನಾಟಕ ನೇತೃತ್ವ ವಹಿಸಿರುವುದಕ್ಕೆ ನನಗೆ ಹೆಮ್ಮೆಯಿದೆ. ತಮ್ಮ ವಿದ್ಯಾರ್ಥಿ ನಾಯಕತ್ವದ ದಿನಗಳಲ್ಲಿ ಈ ಸಂಸ್ಥೆಯ ಪ್ರಾರಂಭವನ್ನು ದೇಶಾದ್ಯಂತ ಅಪಾರ ಉತ್ಸಾಹದೊಂದಿಗೆ ಸಂಭ್ರಮಿಸಿದ್ದೆವು. ಈ ಪ್ರತಿಷ್ಠಿತ ಸಂಸ್ಥೆಯನ್ನು ರಕ್ಷಿಸಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರ ಸದಾ ಸಿದ್ಧವಾಗಿದೆ" ಎಂದು ತಿಳಿಸಿದರು.

ಕ್ಯಾಂಪಸ್ ಮೂಲಸೌಕರ್ಯಗಳ ಅಗತ್ಯಗಳಿಗೆ ಭೂಮಿಯ ಕೊರತೆಯ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. 7 ಎಕರೆ ಆಗಿರಲಿ ಅಥವಾ 10 ಎಕರೆ ಆಗಿರಲಿ, ನಿಮಗೆ ಏನು ಅಗತ್ಯವಿದೆಯೋ ಅದನ್ನು ನೀಡಲು ಸರ್ಕಾರ ಬದ್ಧವಾಗಿದೆ. ಜಮೀನು ಮಂಜೂರಾತಿ ಹಾಗೂ ಆರ್ಥಿಕ ನೆರವು ಎರಡನ್ನೂ ಒದಗಿಸಲಾಗುವುದು" ಎಂದು ಅಭಯ ನೀಡಿದರು.

ಕುಲಪತಿಗಳು ಹಾಗೂ ಅವರ ತಂಡಕ್ಕೆ ಅಭಿನಂದನೆ ಸಲ್ಲಿಸಿದ ಮುಖ್ಯಮಂತ್ರಿಗಳು, "ಸಂಸ್ಥೆಯ ಈ ಮೂಲಸೌಕರ್ಯ ವಿಸ್ತರಣೆಯು ಪ್ರಜಾಪ್ರಭುತ್ವ ಮತ್ತು ಕಾನೂನಿನ ಆಡಳಿತವನ್ನು ಎತ್ತಿಹಿಡಿಯುವ ಭವಿಷ್ಯದ ನಾಯಕರನ್ನು ರೂಪಿಸಲು ನೆರವಾಗಲಿದೆ" ಎಂಬ ವಿಶ್ವಾಸ ವ್ಯಕ್ತಪಡಿಸಿದರು.

# ಕಬ್ಬಿನ ಇಳುವರಿ ಮತ್ತು ದರ ನಿಗದಿ: ರೈತರು, ಕಾರ್ಖಾನೆಗಳ ನಡುವೆ ಸ್ಪಷ್ಟ ಸೂತ್ರ ಏರ್ಪಡಲಿ



■ **ಎಂಎಸ್‌ಪಿ ಹಾಗೂ ಎಸ್‌ಎಪಿ ವಿಚಾರದಲ್ಲಿ ಸರ್ಕಾರ ತ್ವರಿತ ನಿರ್ಧಾರ ಕೈಗೊಳ್ಳಲಿ: ಬಸವರಾಜ ಬೊಮ್ಮಾಯಿ**

**ಹುಬ್ಬಳ್ಳಿ, ಅ.17:** ರೈತರು ಕಷ್ಟದಲ್ಲಿರುವಾಗ ಅವರ ನೆರವಿಗೆ ಬರುವುದು ರಾಜ್ಯ ಸರ್ಕಾರದ ಕರ್ತವ್ಯ. ಎಂಎಸ್‌ಪಿ ಹಾಗೂ ಎಸ್‌ಎಪಿ ವಿಚಾರದಲ್ಲಿ ಸರ್ಕಾರ ವಿಳಂಬ ಮಾಡದೆ ತ್ವರಿತವಾಗಿ ನಿರ್ಧಾರ ಕೈಗೊಳ್ಳಬೇಕು. ರೈತರು ಮತ್ತು ಕಾರ್ಖಾನೆಗಳ ನಡುವಿನ ರಿಕವರಿ ಹಾಗೂ ರೇಟ್ ವಿಚಾರದಲ್ಲಿ ಸ್ಪಷ್ಟವಾದ ಫಾರ್ಮುಲಾ ಬಂದರೆ ಮಾತ್ರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗಲು ಸಾಧ್ಯ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ್ ಬೊಮ್ಮಾಯಿ ಹೇಳಿದ್ದಾರೆ.

ಹುಬ್ಬಳ್ಳಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರವು ರೈತರ ಹಿತಾಸಕ್ತಿಯನ್ನು ಕಾಪಾಡಲು ಶೀಘ್ರವೇ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅವರು ಒತ್ತಾಯಿಸಿದ್ದಾರೆ. ಕಬ್ಬು ಬೆಳೆಗಾರರ ಎಂಎಸ್ಪಿ ಮತ್ತು ರಕ್ಷಣೆಗಾಗಿ ರಚಿಸಲಾಗಿರುವ ಸಮಿತಿಯು ಸೋಮವಾರ ಸಭೆ ಸೇರಲಿದೆ. ಈ ಸಭೆಯಲ್ಲಿ ಎಲ್ಲಾ ರೈತ ಮುಖಂಡರನ್ನು ಕರೆದು ಚರ್ಚಿಸಿ, ಒಂದು ವಾರದೊಳಗೆ ಸೂಕ್ತ ಪರಿಹಾರ ರೂಪಿಸಲಾಗುವುದು ಎಂದರು.

**ತಾಂತ್ರಿಕ ಸಮಿತಿ ರಚನೆ:** ಕಾರ್ಖಾನೆಯ ಕಬ್ಬು ಬೆಳೆಗಾರರು ಮತ್ತು ಮಾಲೀಕರು ಸೇರಿ ಒಂದು ಸಣ್ಣ ತಾಂತ್ರಿಕ ಸಮಿತಿಯನ್ನು ರಚಿಸಬೇಕು. ಲ್ಯಾಬ್‌ನಲ್ಲಿ ಸ್ಯಾಂಪಲ್ಸ್ ತಗೊಂಡು, ಅವರ ಎದುರುಗಡೆನೇ ರಿಕವರಿ ಪ್ರೋಸೆಸ್ ಮಾಡಿದರೆ ರೈತರು ಹಾಗೂ ಕಾರ್ಖಾನೆ ಮಾಲೀಕರು ಒಪ್ಪುವ ರಿಕವರಿ, ತೂಕ ಮತ್ತು ದರ ನಿಗದಿ ಆಗುತ್ತದೆ. ಪ್ರತಿ ವರ್ಷ ಕಬ್ಬಿನ ದರ ನಿಗದಿ ಕುರಿತು ಗೊಂದಲ ಉಂಟಾಗದಂತೆ, ಸಕ್ಕರೆ ಮಾರಾಟಕ್ಕೆ ಎಂಎಸ್ಪಿ ಫಾರ್ಮುಲಾ ಮತ್ತು ಕಬ್ಬಿನ ಬೆಳೆಗೆ ಒಂದು ನಿರ್ದಿಷ್ಟ ಫಾರ್ಮುಲಾವನ್ನು ಅಳವಡಿಸಿಕೊಳ್ಳಬೇಕು. ಮಹಾರಾಷ್ಟ್ರದ ಗಡಿಗೆ ಹತ್ತಿರವಿರುವ ಕಬ್ಬು ಬೇರೆಡೆಗೆ ಹೋಗುವುದನ್ನು ತಪ್ಪಿಸಲು, ರಾಜ್ಯ ಸರ್ಕಾರ ಕೂಡ ಕೂಡಲೇ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಬೊಮ್ಮಾಯಿ ಸಲಹೆ ನೀಡಿದರು.

**ರಾಜ್ಯ ಸರ್ಕಾರದ ಜವಾಬ್ದಾರಿ**

**ಸೇಲ್ಸ್ ಟ್ಯಾಕ್ಸ್ ಹಾಗೂ ಜಿಎಸ್ಟಿ ಮುಖಾಂತರ ಸಾವಿರಾರು ಕೋಟಿ ರೂಪಾಯಿ ರಾಜಸ್ವ ರಾಜ್ಯಕ್ಕೆ ಬರುವುದರಿಂದ, ರೈತರ ಸಮಸ್ಯೆ ಬಗೆಹರಿಸುವಲ್ಲಿ ರಾಜ್ಯ ಸರ್ಕಾರದ ಪಾತ್ರ ಹಾಗೂ ಜವಾಬ್ದಾರಿ ದೊಡ್ಡದಿದೆ. ಕಬ್ಬು ಬೆಳೆಗಾರರ ಸಮಸ್ಯೆಗಳ ಪರಿಹಾರಕ್ಕಾಗಿ ಶೀಘ್ರವೇ ಎಸ್‌ಎಪಿ ಜಾರಿ ಮಾಡಬೇಕು. ಇದರಿಂದ ಕಬ್ಬಿನ ಬೆಲೆ ಹಾಗೂ ತೂಕದ ಕುರಿತಾದ ಅಸ್ಪಷ್ಟತೆ ನಿವಾರಣೆಯಾಗಿ ರೈತರಿಗೆ ಸ್ಪಷ್ಟ ಅಂದಾಜು ಸಿಗುತ್ತದೆ. ಇತರೆ ರಾಜ್ಯಗಳಲ್ಲಿ ಜಾರಿಯಲ್ಲಿರುವಂತೆ ಬೆಂಬಲ ಬೆಲೆ ಹಾಗೂ ಸಕ್ಕರೆ ಉತ್ಪಾದನೆ ಆಧರಿಸಿ ರಾಜ್ಯ ಸರ್ಕಾರವೂ ಬೆಂಬಲ ಬೆಲೆ ಘೋಷಿಸಲು ಕ್ರಮ ಕೈಗೊಳ್ಳಬೇಕು. ಕಳೆದ ಬಾರಿ ಸಿದ್ದರಾಮಯ್ಯ ಬೆಂಬಲ ಬೆಲೆ ನೀಡಿದ್ದರು ಎಂದು ಬೊಮ್ಮಾಯಿ ಹೇಳಿದರು.**

# ಮಾಜಿ ಸಿಎಂ ಸಿದ್ದರಾಮಯ್ಯ ಭೇಟಿ ಮಾಡಿದ ಡಿ.ಕೆ. ಶಿವಕುಮಾರ್

**ಮೈಸೂರು, ಅ.17:** ರಾಜ್ಯ ರಾಜಕೀಯದಲ್ಲಿ ಸ್ಟಿಂಗ್ ಕಾರ್ಯಾಚರಣೆ ವಿವಾದ ಬೆನ್ನಲ್ಲೇ ಶುಕ್ರವಾರ ತಡರಾತ್ರಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವರ ಮೈಸೂರು ನಿವಾಸದಲ್ಲಿ ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ.

ಕೆಆರ್‌ಎಸ್ ಅಣೆಕಟ್ಟಿನ ಬೃಂದಾವನ ಉದ್ಯಾನದಲ್ಲಿ ಪತ್ನಿ ಜತೆ ಕಾವೇರಿ ಆರತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅವರು, ಬೆಂಗಳೂರಿಗೆ ವಾಪಸಾಗುವ ಮುನ್ನ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ ಗೌಪ್ಯವಾಗಿ ಚರ್ಚೆ ನಡೆಸಿದ್ದಾರೆ. ನಿನ್ನೆ ಮುಖ್ಯಮಂತ್ರಿಗಳು ಸಿದ್ದರಾಮಯ್ಯನವರನ್ನು ಭೇಟಿ ಮಾಡುವ ಕಾರ್ಯಕ್ರಮ ನಿಗದಿಯಾಗಿರಲಿಲ್ಲ. ದಿಢೀರನೆ ಭೇಟಿ ಮಾಡಿದ್ದು ಕುತೂಹಲ ಮೂಡಿಸಿದೆ. ಇದಕ್ಕೂ ಮುನ್ನ ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರು ಕೂಡ ಸಿದ್ದರಾಮಯ್ಯನವರನ್ನು ಭೇಟಿ ಮಾಡಿದ್ದರು.

# ಭಾನುವಾರ ರಜೆ ಇದ್ದರೂ, ಕನ್ನಡ ರಾಜ್ಯೋತ್ಸವ ಆಚರಣೆ ಕಡ್ಡಾಯ

**ಬೆಂಗಳೂರು, ಅ.17:** ರಾಜ್ಯದ ಎಲ್ಲಾ ಶಾಲಾ–ಕಾಲೇಜುಗಳು ಮತ್ತು ಖಾಸಗಿ ಸಂಸ್ಥೆಗಳಿಗೆ ಕರ್ನಾಟಕ ಸರ್ಕಾರ ಅತ್ಯಂತ ಪ್ರಮುಖ ಹಾಗೂ ಕಡ್ಡಾಯ ಆದೇಶವೊಂದನ್ನು ಹೊರಡಿಸಿದೆ. ನವೆಂಬರ್ 1, 2026ರ ಕನ್ನಡ ರಾಜ್ಯೋತ್ಸವವು ಭಾನುವಾರ ಬಂದಿದ್ದರೂ ಸಹ, ಅಂದು ಯಾವುದೇ ವಿನಾಯಿತಿ ನೀಡದೆ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿ ಕಡ್ಡಾಯವಾಗಿ ಆಚರಣೆ ಮಾಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

■ **ಖಾಸಗಿ, ಅನುದಾನಿತ ಹಾಗೂ ಸರ್ಕಾರಿ ಶಾಲೆಗಳಿಗೆ ಸರ್ಕಾರ ಸೂಚನೆ**

ರಾಷ್ಟ್ರೀಯ ಹಬ್ಬಗಳು, ನಾಡಹಬ್ಬವಾದ ಕರ್ನಾಟಕ ರಾಜ್ಯೋತ್ಸವ ಹಾಗೂ ಇತರ ಪ್ರಮುಖ ಜಯಂತಿಗಳನ್ನು ನಿಗದಿತ ದಿನಗಳಂದೇ ರಾಜ್ಯದ ಎಲ್ಲ ಶಾಲೆಗಳಲ್ಲಿ ನಿಯಮಾನುಸಾರ ಕಡ್ಡಾಯವಾಗಿ ಆಚರಿಸಬೇಕು. ಅದರಂತೆ, ಈ ಬಾರಿ ರಜಾ ದಿನವಾದ ಭಾನುವಾರ ಬಂದರೂ ನವೆಂಬರ್ 1ರಂದು ಎಲ್ಲ ಶಾಲೆಗಳಲ್ಲೂ ಕನ್ನಡ ರಾಜ್ಯೋತ್ಸವ ಆಚರಣೆ ನಡಸಬೇಕು ಎಂದು ತಿಳಿಸಿದೆ.

# ಅ.24ರವರೆಗೆ ಸೌದಿ ಅರೇಬಿಯಾಗೆ ಏರ್‌ಇಂಡಿಯಾ ಸಂಚಾರ ಸ್ಥಗಿತ

**ನವದೆಹಲಿ, ಅ.17:** ಸೌದಿ ಅರೇಬಿಯಾದ ಜಿದ್ದಾ, ರಿಯಾದ್ ಮತ್ತು ದಮ್ಮಾಮ್ ನಗರಗಳಿಗೆ ತೆರಳುವ ಹಾಗೂ ಅಲ್ಲಿಂದ ಭಾರತಕ್ಕೆ ಬರುವ ವಿಮಾನಗಳ ಸಂಚಾರವನ್ನು ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಸಂಸ್ಥೆಗಳು ಅಕ್ಟೋಬರ್ 24 ರವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿವೆ.

■ **ಪ್ರಯಾಣಿಕರು, ವಿಮಾನ ಸಿಬ್ಬಂದಿ ಸುರಕ್ಷತೆ ದೃಷ್ಟಿಯಿಂದ ನಿರ್ಧಾರ**

ಪ್ರಸ್ತುತ ಪ್ರಾದೇಶಿಕ ಪರಿಸ್ಥಿತಿಯನ್ನು ಪರಿಗಣಿಸಿ ಪ್ರಯಾಣಿಕರು ಮತ್ತು ವಿಮಾನ ಸಿಬ್ಬಂದಿಯ ಸುರಕ್ಷತೆಯ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ವಿಮಾನಯಾನ ಸಂಸ್ಥೆಗಳು ತಿಳಿಸಿವೆ.

ಯೆಮನ್‌ನ ಹೌತಿ ಬಂಡುಕೋರರ ದಾಳಿಗಳ ಹಿನ್ನೆಲೆಯಲ್ಲಿ ಸೌದಿ ಅರೇಬಿಯಾದಲ್ಲಿ ಭದ್ರತಾ ಆತಂಕ ಹೆಚ್ಚಾಗಿದೆ. ರಿಯಾದ್‌ನ ಪ್ರಮುಖ ವಿಮಾನ ನಿಲ್ದಾಣದ ಮೇಲಿನ ದಾಳಿ ಸೇರಿದಂತೆ ಇತ್ತೀಚಿನ ಘಟನೆಗಳು ವಿಮಾನ ಸಂಚಾರದ ಮೇಲೆ ಪರಿಣಾಮ ಬೀರಿವೆ. ಈ ಹಿನ್ನೆಲೆಯಲ್ಲಿ ವಿಮಾನಯಾನ ಸಂಸ್ಥೆಗಳು ಪರಿಸ್ಥಿತಿಯನ್ನು ನಿರಂತರವಾಗಿ ಪರಿಶೀಲಿಸುತ್ತಿವೆ.

**ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆ:** ವಿಮಾನ ಸಂಚಾರ ಸ್ಥಗಿತದಿಂದ ತೊಂದರೆಗೊಳಗಾದ ಪ್ರಯಾಣಿಕರಿಗೆ ಟಿಕೆಟ್‌ನ ಪ್ರಯಾಣದ ದಿನಾಂಕ ಬದಲಾಯಿಸುವುದು, ಲಭ್ಯತೆಗೆ ಅನುಗುಣವಾಗಿ ಪರ್ಯಾಯ ವಿಮಾನ ನಿಲ್ದಾಣಗಳಿಂದ ಪ್ರಯಾಣಿಸುವುದು ಹಾಗೂ ಪ್ರಯಾಣ ರದ್ದುಪಡಿಸಿದರೆ ಮರುಪಾವತಿ ಪಡೆಯುವ ಅವಕಾಶಗಳನ್ನು ಒದಗಿಸಲಾಗಿದೆ.

ಸೌದಿ ಅರೇಬಿಯಾಕ್ಕೆ ಪ್ರಯಾಣಿಸಲು ಯೋಜಿಸಿರುವವರು ವಿಮಾನ ನಿಲ್ದಾಣಕ್ಕೆ ತೆರಳುವ ಮೊದಲು ತಮ್ಮ ವಿಮಾನದ ಸ್ಥಿತಿಯನ್ನು ಸಂಬಂಧಿತ ವಿಮಾನಯಾನ ಸಂಸ್ಥೆಯ ಅಧಿಕೃತ ಜಾಲತಾಣ ಅಥವಾ ಗ್ರಾಹಕ ಸೇವೆಯ ಮೂಲಕ ಖಚಿತಪಡಿಸಿಕೊಳ್ಳುವಂತೆ ಸೂಚಿಸಲಾಗಿದೆ. ಪ್ರಸ್ತುತ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸುರಕ್ಷಿತವಾಗಿ ವಿಮಾನ ಸಂಚಾರ ಪುನರಾರಂಭಿಸುವ ಕುರಿತು ಮುಂದಿನ ನಿರ್ಧಾರ ಕೈಗೊಳ್ಳಲಾಗುತ್ತದೆ.

# ಜಮ್ಮು–ಕಾಶ್ಮೀರದ ಕುಪ್ವಾರದಲ್ಲಿ ಒಳನುಸುಳುವಿಕೆ ಯತ್ನ ವಿಫಲ

**ನವದೆಹಲಿ, ಅ.17:** ಉತ್ತರ ಕಾಶ್ಮೀರದ ಕುಪ್ವಾರ ಜಿಲ್ಲೆಯ ನಿಯಂತ್ರಣ ರೇಖೆ ಬಳಿ ಒಳನುಸುಳಲು ಯತ್ನಿಸಿದ ಶಂಕಿತ ಉಗ್ರರ ಪ್ರಯತ್ನವನ್ನು ಭದ್ರತಾ ಪಡೆಗಳು ವಿಫಲಗೊಳಿಸಿವೆ. ಜಿಲ್ಲೆಯ ಕೇರನ್ ವಲಯದ ಜುಮ್‌ಗುಂಡ್ ಪ್ರದೇಶದಲ್ಲಿ ಶನಿವಾರ ಮುಂಜಾನೆ ಅನುಮಾನಾಸ್ಪದ ಚಲನವಲನ ಕಂಡುಬಂದ ಹಿನ್ನೆಲೆಯಲ್ಲಿ ಸೇನಾ ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿದ್ದಾರೆ. ಈ ವೇಳೆ ಭದ್ರತಾ ಪಡೆಗಳು ಮತ್ತು ಒಳನುಸುಳಲು ಯತ್ನಿಸಿದವರ ನಡುವೆ ಕೆಲಕಾಲ ಗುಂಡಿನ ಚಕಮಕಿ ನಡೆದಿದೆ.ಅಧಿಕಾರಿಗಳ ಪ್ರಾಥಮಿಕ ಮಾಹಿತಿಯ ಪ್ರಕಾರ, ಮುಂಜಾನೆ ಸುಮಾರು 3 ಗಂಟೆಯ ವೇಳೆಗೆ ಜುಮ್‌ಗುಂಡ್ ಗ್ರಾಮದ ಸಮೀಪ ಅನುಮಾನಾಸ್ಪದ ಚಲನವಲನ ಗಮನಿಸಿದ ಯೋಧರು ಎಚ್ಚರಿಕೆ ವಹಿಸಿ ಪ್ರತಿಕ್ರಿಯಿಸಿದ್ದಾರೆ. ನಂತರ ಗುಂಡಿನ ಚಕಮಕಿ ನಡೆದಿದೆ. ಒಳನುಸುಳಲು ಯತ್ನಿಸಿದವರ ಸಂಖ್ಯೆ ಹಾಗೂ ಕಾರ್ಯಾಚರಣೆಯಲ್ಲಿನ ಸಾವು–ನೋವುಗಳ ಕುರಿತು ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ.

■ **ಎಲ್‌ಓಸಿಯಲ್ಲಿ ಗುಂಡಿನ ಚಕಮಕಿ; ಅರಣ್ಯ ಪ್ರದೇಶದಲ್ಲಿ ಸೇನೆಯಿಂದ ತೀವ್ರ ಶೋಧ ಕಾರ್ಯಾಚರಣೆ**

ಘಟನೆಯ ಬಳಿಕ ಸೇನೆಯ ಹೆಚ್ಚುವರಿ ಸಿಬ್ಬಂದಿಯನ್ನು ಸ್ಥಳಕ್ಕೆ ನಿಯೋಜಿಸಲಾಗಿದ್ದು, ಸುತ್ತಮುತ್ತಲಿನ ಅರಣ್ಯ ಪ್ರದೇಶಗಳಲ್ಲಿ ತೀವ್ರ ಶೋಧ ಕಾರ್ಯಾಚರಣೆ ಮುಂದುವರಿದಿದೆ. ಒಳನುಸುಳುವಿಕೆಯಲ್ಲಿ ಯಾರಾದರೂ ಯಶಸ್ವಿಯಾಗಿದ್ದಾರೆಯೇ ಎಂಬುದನ್ನು ಪತ್ತೆಹಚ್ಚಲು ಭದ್ರತಾ ಪಡೆಗಳು ಕಾರ್ಯಾಚರಣೆ ನಡೆಸುತ್ತಿವೆ.

# ಕೆಪಿಎಸ್‌ಸಿ ಹಗರಣ ತನಿಖೆಗೆ ಕರ್ನಾಟಕ ಸರ್ಕಾರ ಹಿಂಜರಿತ



■ **ಕೇಂದ್ರ ಸಚಿವ ಪ್ರಲ್ಹಾದ ಜೋಶಿ**

**ಹಾವೇರಿ, ಅ.17:** ಕೆಪಿಎಸ್‌ಸಿ ಹಗರಣದ ಬಗ್ಗೆ ಎಸ್‌ಐಟಿ ಅಥವಾ ಕೋರ್ಟ್ ಮಾನಿಟರ್ ಮೂಲಕ ತನಿಖೆ ನಡೆದರೆ ಅನೇಕ ಮಂತ್ರಿಗಳು ಸಿಲುಕಿಕೊಳ್ಳುತ್ತಾರೆ. ರಾಜ್ಯ ಸರ್ಕಾರವೇ ಪತನವಾಗ ಬಹುದು ಎಂದಿರುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಕೆಪಿಎಸ್‌ಸಿ ಬಹು ದೊಡ್ಡ ಹಗರಣವಾಗಿದೆ. ಎಸ್‌ಐಟಿ ರಚಿಸಿ, ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಿ ಇಲ್ಲವೇ ಸಿಬಿಐ ತನಿಖೆಗೆ ವಹಿಸಿ ಎಂದು ಒತ್ತಾಯಿಸಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಸಚಿವರು, ಕೆಪಿಎಸ್‌ಸಿ ಹಗರಣದಲ್ಲಿ ಅನೇಕ ಸಚಿವರು ಸಿಲುಕುವ ಆತಂಕದ ಹಿನ್ನೆಲೆಯಲ್ಲಿ ಸಮಗ್ರ ತನಿಖೆ ಮಾಡಿಸುವುದು ರಾಜ್ಯ ಸರ್ಕಾರಕ್ಕೆ ಇಷ್ಟವಿಲ್ಲ. ಹಾಗೂ ರಾಜ್ಯ ಸರ್ಕಾರದಿಂದ ಕಬ್ಬು ಬೆಳೆಗಾರರಿಗೆ ಎಸ್‌ಎಪಿ ಕೊಡಲಾಗುತ್ತಿಲ್ಲ. ರೈತರಿಗೆ ಸಮರ್ಪಕ ಬರ ಪರಿಹಾರ ಕೊಡುತ್ತಿಲ್ಲ. ಚರ್ಚೆಗೆ ಸಾಕಷ್ಟು ಸಮಸ್ಯೆಗಳಿವೆ. ಹಾಗಾಗಿ ತನ್ನ ವೈಫಲ್ಯಗಳನ್ನು ಮರೆಮಾಚಲು ಸ್ಟಿಂಗ್ ಆಪರೇಷನ್ ಮುನ್ನೆಲೆಗೆ ತರುತ್ತಿದ್ದಾರೆ. ಸ್ಟಿಂಗ್ ಆಪರೇಷನ್ ಯಾರು ಮಾಡಿಸಿದ್ದಾರೆ ಎನ್ನುವ ಚರ್ಚೆ ನೈತಿಕತೆಯಲ್ಲ. ಆ ಬಗ್ಗೆ ಎಸ್‌ಐಟಿ ರಚಿಸಿ ತನಿಖೆ ನಡೆಸಿ. ಯಾರೇ ವಿಡಿಯೋ ಮಾಡಿರಲಿ ಅದು ಅಸಲಿ ಅಥವಾ ನಕಲಿಯೇ, ಎಐ ಸೃಷ್ಟಿಯದ್ದೇ ಎಂಬುದು ಗೊತ್ತಾಗಲಿ. ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್ ಎನ್ನುವುದು ಬೇಸರದ ಸಂಗತಿ ಎಂದು ವಿಷಾದಿಸಿದರು.

### ವಿಧಾನ ಪರಿಷತ್ ವಿವಿಧ ಕ್ಷೇತ್ರಗಳಿಗೆ ಚುನಾವಣೆ

# ಅ.23ರಂದು ವಿಶೇಷ ಸಾಂದರ್ಭಿಕ ರಜೆ ಮಂಜೂರು: ಸರ್ಕಾರದ ಆದೇಶ

**ಬೆಂಗಳೂರು, ಅ.17:** ಕರ್ನಾಟಕ ವಿಧಾನ ಪರಿಷತ್ತಿನ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳಿಗೆ ಅ.23ರಂದು ನಡೆಯಲಿರುವ ದ್ವೈವಾರ್ಷಿಕ ಚುನಾವಣೆಯ ಹಿನ್ನೆಲೆಯಲ್ಲಿ, ಅರ್ಹ ಮತದಾರರಿಗೆ ಮತದಾನ ಮಾಡಲು ಅನುಕೂಲವಾಗುವಂತೆ ಅ.23ರ ಶುಕ್ರವಾರದಂದು ಒಂದು ದಿನ ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಿ ರಾಜ್ಯ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ವಿಧಾನ ಪರಿಷತ್ತಿನ ಒಟ್ಟು 4 ಕ್ಷೇತ್ರಗಳಿಗೆ ದ್ವೈವಾರ್ಷಿಕ ಚುನಾವಣೆ ನಡೆಯಲಿದೆ. ಈ ಪೈಕಿ ಕರ್ನಾಟಕ ಆಗ್ನೇಯ ಹಾಗೂ ಕರ್ನಾಟಕ ಪಶ್ಚಿಮ ಪದವೀಧರ ಕ್ಷೇತ್ರಗಳು ಮತ್ತು ಕರ್ನಾಟಕ ಈಶಾನ್ಯ ಹಾಗೂ ಬೆಂಗಳೂರು ಶಿಕ್ಷಕರ ಕ್ಷೇತ್ರಗಳು ಸೇರಿವೆ. ಈ ವ್ಯಾಪ್ತಿಯಲ್ಲಿ ಮತದಾನದ ಹಕ್ಕು ಹೊಂದಿರುವ ಅರ್ಹ ಪದವೀಧರ ಹಾಗೂ ಶಿಕ್ಷಕ ಮತದಾರರಿಗೆ ಮಾತ್ರ ಮತ ಚಲಾಯಿಸಲು ಈ ವಿಶೇಷ ಸಾಂದರ್ಭಿಕ ರಜೆ ಸೌಲಭ್ಯ ಅನ್ವಯವಾಗಲಿದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಮತದಾರರು ತಮ್ಮ ಸಂಬಂಧಪಟ್ಟ ಕಚೇರಿ ಮುಖ್ಯಸ್ಥರು ಅಥವಾ ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರಗಳಿಂದ ನಿಯಮಾನುಸಾರ ಪೂರ್ವಾನುಮತಿಯನ್ನು ಕಡ್ಡಾಯವಾಗಿ ಪಡೆಯುವ ಷರತ್ತಿಗೊಳಪಟ್ಟು ಈ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಲು ಸೂಚಿಸಲಾಗಿದೆ.

# ದೆಹಲಿಯಲ್ಲಿ ಪ್ರತಿಭಟನೆ: ವ್ಯಾಪಾರಿಗಳಿಗೆ 3,000 ಕೋಟಿ ರೂ. ನಷ್ಟ

**ದೆಹಲಿಯ ಪ್ರಮುಖ ವರ್ತಕರ ಸಂಘಟನೆಯಾದ ಚೇಂಬರ್ ಆಫ್ ಟ್ರೇಡ್ ಅಂಡ್ ಇಂಡಸ್ಟ್ರಿ ವರದಿಯಲ್ಲಿ ಉಲ್ಲೇಖ**



ನವದೆಹಲಿ, ಅ.17: ದೆಹಲಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿನ ಅಕ್ರಮಗಳನ್ನು ವಿರೋಧಿಸಿ ಕಾಕ್ರೋಚ್ ಜನತಾ ಪಾರ್ಟಿ ಮತ್ತು ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ನಡೆಸುತ್ತಿರುವ ಸರಣಿ ಪ್ರತಿಭಟನೆಗಳಿಂದಾಗಿ ವರ್ತಕರಿಗೆ ಭಾರಿ ನಷ್ಟ ಉಂಟಾಗಿದೆ. ದೆಹಲಿಯ ಪ್ರಮುಖ ವರ್ತಕರ ಸಂಘಟನೆಯಾದ ಚೇಂಬರ್ ಆಫ್ ಟ್ರೇಡ್ ಅಂಡ್ ಇಂಡಸ್ಟ್ರಿ ನೀಡಿರುವ ವರದಿಯ ಪ್ರಕಾರ, ಅಕ್ಟೋಬರ್ ತಿಂಗಳಿನಲ್ಲಿ ನಡೆದಿರುವ ಪ್ರತಿಭಟನೆಗಳು ಹಾಗೂ ಪೊಲೀಸ್ ನಿರ್ಬಂಧಗಳಿಂದಾಗಿ ದೆಹಲಿಯ ವ್ಯಾಪಾರ ವಲಯಕ್ಕೆ ಇದುವರೆಗೆ ಬರೋಬ್ಬರಿ 3,000 ಕೋಟಿ ನಷ್ಟ ಸಂಭವಿಸಿದೆ.

ದೆಹಲಿ ಹೈಕೋರ್ಟ್‌ಗೆ ಸಲ್ಲಿಕೆಯಾಗಿರುವ ಅರ್ಜಿ ಹಾಗೂ ಸಿಟಿಐ ಅಧ್ಯಕ್ಷ ಬ್ರಿಜೇಶ್ ಗೋಯಲ್ ಬಿಡುಗಡೆ ಮಾಡಿರುವ ವರದಿಯ ಪ್ರಕಾರ, ಚಿಲ್ಲರೆ ವ್ಯಾಪಾರದಲ್ಲಿ 1,800 ಕೋಟಿ, ಸಗಟು ವ್ಯಾಪಾರದಲ್ಲಿ 600 ಕೋಟಿ, ಹೋಟೆಲ್ ಮತ್ತು ಸೇವಾ ವಲಯದಲ್ಲಿ 300 ಕೋಟಿ, ಸಾರಿಗೆ ಮತ್ತು ಪ್ರವಾಸೋದ್ಯಮ ವಲಯದಲ್ಲಿ 180 ಕೋಟಿ ಹಾಗೂ ಅಸಂಘಟಿತ ವಲಯದಲ್ಲಿ 120 ಕೋಟಿ ನಷ್ಟವಾಗಿದೆ. ಅದರಲ್ಲೂ, ಅಕ್ಟೋಬರ್ 10ರ ಒಂದೇ ದಿನ ಜಂತರ್ ಮಂತರ್‌ನಲ್ಲಿ ಸಿಜೆಪಿ ನಡೆಸಿದ ಬೃಹತ್ ಪ್ರತಿಭಟನೆ ಮತ್ತು ಪೊಲೀಸರು ಮಾರುಕಟ್ಟೆಗಳನ್ನು ಬಂದ್ ಮಾಡಿಸಿದ ಕಾರಣ ಒಂದೇ ದಿನದಲ್ಲಿ ?2,000 ಕೋಟಿ ಮೌಲ್ಯದ ವ್ಯಾಪಾರ ಸ್ಥಗಿತಗೊಂಡಿತ್ತು. ಜೊತೆಗೆ, ಅಕ್ಟೋಬರ್ 13 ರಿಂದ 16 ರವರೆಗೆ ಸೆಂಟ್ರಲ್ ದೆಹಲಿಯಲ್ಲಿ ವಿಧಿಸಲಾದ ರಸ್ತೆ ತಡೆ, ಮೆಟ್ರೋ ನಿಲ್ದಾಣಗಳ ಬಂದ್ ಮತ್ತು ಕನಾಟ್ ಪ್ಲೇಸ್‌ನ ಸೆಂಟ್ರಲ್ ಪಾರ್ಕ್ ಮುಚ್ಚಿದ್ದರಿಂದ ಈ 4 ದಿನಗಳಲ್ಲಿ ಹೆಚ್ಚುವರಿಯಾಗಿ 1,000 ಕೋಟಿ ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ.

**ದೀಪಾವಳಿ ವೇಳೆಗೆ 10,000 ಕೋಟಿ ನಷ್ಟದ ಆತಂಕ:** ನವರಾತ್ರಿ, ರಾಮಲೀಲಾ ಮತ್ತು ದೀಪಾವಳಿ ಹಬ್ಬದ ಈ ಒಂದು ತಿಂಗಳು ದೆಹಲಿಯ ವರ್ತಕರು ಇಡೀ ವರ್ಷದ ಆದಾಯ ಗಳಿಸುವ ಪ್ರಮುಖ ಸಮಯವಾಗಿದೆ. ಒಂದು ವೇಳೆ ಪ್ರತಿಭಟನೆಗಳು ಹೀಗೆಯೇ ಪ್ರತಿ ವಾರ ಮುಂದುವರಿದರೆ, ದೀಪಾವಳಿ ವೇಳೆಗೆ ಒಟ್ಟು ವ್ಯಾಪಾರ ನಷ್ಟವು 10,000 ಕೋಟಿ ದಾಟಬಹುದು ಎಂದು CTI ಅಧ್ಯಕ್ಷ ಬ್ರಿಜೇಶ್ ಗೋಯಲ್ ಆತಂಕ ವ್ಯಕ್ತಪಡಿಸಿದ್ದಾರೆ.

ಮುಂದುವರೆದು, ಈ ನಷ್ಟದ ಹಿನ್ನೆಲೆಯಲ್ಲಿ ದೀಪಾವಳಿ ಹಬ್ಬ ಮುಗಿಯುವವರೆಗೆ ಸೆಂಟ್ರಲ್ ಡೆಲ್ಲಿ, ನವದೆಹಲಿ ಮತ್ತು ಲುಟ್ಯೆನ್ಸ್ ವಲಯದಲ್ಲಿ ಯಾವುದೇ ರೀತಿಯ ಧರಣಿ ಅಥವಾ ಪ್ರತಿಭಟನೆಗಳಿಗೆ ಸಂಪೂರ್ಣ ನಿಷೇಧ ಹೇರಬೇಕು ಹಾಗೂ ಭವಿಷ್ಯದಲ್ಲಿ ಇಂತಹ ಪ್ರತಿಭಟನೆಗಳನ್ನು ನಡೆಸಲು ದೆಹಲಿಯ ಹೊರವಲಯಗಳಾದ ಬುರಾರಿ, ರೋಹಿಣಿ ಅಥವಾ ದ್ವಾರಕಾ ಭಾಗಗಳಲ್ಲಿ ಶಾಶ್ವತ ಜಾಗ ನಿಗದಿಪಡಿಸಬೇಕು. ಜೊತೆಗೆ ಅಕ್ಟೋಬರ್‌ನಲ್ಲಿ ನಷ್ಟ ಅನುಭವಿಸಿದ ವ್ಯಾಪಾರಿಗಳಿಗೆ ಜಿಎಸ್‌ಟಿ, ವಿದ್ಯುತ್ ಮತ್ತು ನೀರಿನ ಬಿಲ್‌ಗಳಲ್ಲಿ ವಿನಾಯಿತಿ ನೀಡಿ ಆರ್ಥಿಕ ಪ್ಯಾಕೇಜ್ ಘೋಷಿಸಬೇಕು ಎಂದು ವರ್ತಕರ ಸಂಘಟನೆಗಳು ಸರ್ಕಾರ ಮತ್ತು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದೆ.

# ಮುಂದಿನ ವಾರ ಸಕ್ಕರೆ ಕಾರ್ಖಾನೆ ಮಾಲೀಕರು, ರೈತ ಮುಖಂಡರು, ಕೇಂದ್ರದ ಅಧಿಕಾರಿಗಳ ಸಭೆ

**ಕಾರ್ಖಾನೆಗಳ ಉಳಿವಿಗೂ ಕ್ರಮ ಅಗತ್ಯ: ಡಿ.ಕೆ. ಶಿವಕುಮಾರ್**



**ಕಿತ್ತೂರು (ಬೆಳಗಾವಿ), ಅ.17:** "ದಸರಾ ಕಳೆದ ನಂತರ ಮುಂದಿನ ವಾರದಲ್ಲೇ ಸಕ್ಕರೆ ಕಾರ್ಖಾನೆ ಮಾಲೀಕರು, ರೈತ ಮುಖಂಡರು, ಕೇಂದ್ರದ ಅಧಿಕಾರಿಗಳ ಸಭೆ ಕರೆಯುತ್ತೇನೆ. ಪ್ರತಿಭಟನೆ ಕೈ ಬಿಡಬೇಕು ಎಂದು ರೈತರಿಗೆ ಕೈಮುಗಿದು ಕೇಳುತ್ತೇನೆ" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಪ್ರತಿಭಟನಾ ರೈತರ ಬಳಿ ಮನವಿ ಮಾಡಿದರು.

ಕಬ್ಬಿಗೆ ಕನಿಷ್ಠ ಬೆಂಬಲ ಬೆಲೆ ಹೆಚ್ಚಳಕ್ಕೆ ಆಗ್ರಹಿಸಿ ಪಾದಯಾತ್ರೆ ನಡೆಸುತ್ತಿದ್ದ ಕಬ್ಬು ಬೆಳೆಗಾರರನ್ನು ಶಿವಕುಮಾರ್ ಅವರು ಬೆಳಗಾವಿಯ ಕಿತ್ತೂರಿನಲ್ಲಿ ಶನಿವಾರ ಭೇಟಿ ಮಾಡಿ ಮಾತನಾಡಿದರು.

"ಕೇಂದ್ರ ಸಚಿವರನ್ನು ಭೇಟಿ ಮಾಡಿ ರೈತರ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಲಾಗುವುದು. ರಾಜ್ಯ ಸರ್ಕಾರವೊಂದರಿಂದಲೇ ರೈತರ ಸಮಸ್ಯೆ ಪರಿಹರಿಸಲು ಸಾಧ್ಯವಿಲ್ಲ. ಇದರಲ್ಲಿ ಕೇಂದ್ರ ಸರ್ಕಾರ, ಬ್ಯಾಂಕುಗಳು ಹಾಗೂ ಸಕ್ಕರೆ ಕಾರ್ಖಾನೆಗಳ ಮಾಲೀಕರ ಪಾತ್ರವೂ ಇದೆ. ಎಲ್ಲರೂ ಒಟ್ಟಾಗಿ ಕುಳಿತು ಚರ್ಚಿಸಿದಾಗ ಮಾತ್ರ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯ" ಎಂದು ಹೇಳಿದರು.

"ರೈತರು ಕರೆದಲ್ಲಿಗೆ ಬರಲು ನಾನು ಸಿದ್ಧನಿದ್ದೇನೆ. ನಿಮ್ಮ ಪರವಾಗಿ ನಾನು ಆಲೋಚನೆ ಮಾಡುತ್ತಿದ್ದೇನೆ. ನಿಮ್ಮ ಜೊತೆಯಲ್ಲೇ ನಾನು ಬೀದಿಯಲ್ಲೇ ಮಲಗಲು ಸಿದ್ಧ. ನೀವು ನೀಡಿದ ಚಾಪೆಯ ಮೇಲೆ ಮಲಗುತ್ತೇನೆ. ನೀವು ನೀಡಿದ ರೊಟ್ಟಿ ಸ್ವೀಕರಿಸುತ್ತೇನೆ" ಎಂದರು.

ರೈತರೇ ನಮ್ಮ ದೇವರುಗಳು. ನಮ್ಮನ್ನು ಸಾಕಿ, ಬೆಳೆಸುವವರು ನೀವು. ರೈತರಿಗೆ ಸಂಬಳವಿಲ್ಲ, ಪಿಂಚಣಿಯಿಲ್ಲ, ಪ್ರಮೋಷನ್ ಇಲ್ಲ. ನಿಮ್ಮ ಬದುಕಿನ ಭದ್ರತೆಗೆ ಸರ್ಕಾರ ಕೈಜೋಡಿಸಬೇಕು. ನಿಮ್ಮ ಸಮಸ್ಯೆಗಳನ್ನು ಅರಿತುಕೊಳ್ಳಲು ಬೆಂಗಳೂರಿನಿಂದ ಕಿತ್ತೂರಿಗೆ ಬಂದಿದ್ದೇನೆ. ನಿಮ್ಮ ಹೋರಾಟದ ನೋವು ಮತ್ತು ಸಂಕಷ್ಟಗಳು ನನಗೆ ಅರ್ಥವಾಗಿವೆ ಎಂದು ತಿಳಿಸಿದರು. ಸಹಕಾರ, ಕೃಷಿ ಮತ್ತು ಸಕ್ಕರೆ ಸಚಿವರನ್ನು ದೆಹಲಿಗೆ ಕಳುಹಿಸಿ ಸಂಬಂಧಪಟ್ಟವರೊಂದಿಗೆ ಚರ್ಚೆ ನಡೆಸಲಾಗಿದೆ. ತಾವೂ ಸಕ್ಕರೆ ಸಚಿವರೊಂದಿಗೆ ಮಾತುಕತೆ ನಡೆಸಿದ್ದು, ರೈತರ ಸಂಕಷ್ಟಗಳ ಬಗ್ಗೆ ಮಾಹಿತಿ ಪಡೆದುಕೊಂಡಿರುವುದಾಗಿ" ಹೇಳಿದರು.

"ಸಕ್ಕರೆ ಕಾರ್ಖಾನೆಗಳ ನಿರ್ವಹಣೆ ಮತ್ತು ಕಬ್ಬಿನ ಬೆಲೆ ನಿಗದಿ ವಿಚಾರದಲ್ಲಿ ಹಲವು ಸಮಸ್ಯೆಗಳಿವೆ. ಕಾರ್ಖಾನೆಗಳ ಮಾಲೀಕರು ನಷ್ಟ, ವಿದ್ಯುತ್ ಖರೀದಿ, ಉತ್ಪಾದನಾ ವೆಚ್ಚ ಹಾಗೂ ಇತರ ರಾಜ್ಯಗಳ ನಿಯಂತ್ರಣ ವ್ಯವಸ್ಥೆಯಲ್ಲಿನ ವ್ಯತ್ಯಾಸಗಳನ್ನು ಮುಂದಿಟ್ಟುಕೊಂಡು ತಮ್ಮ ಸಂಕಷ್ಟಗಳನ್ನು ಹೇಳುತ್ತಿದ್ದಾರೆ. ಕೆಲವು ಕಾರ್ಖಾನೆಗಳನ್ನು ನಡೆಸಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿಯೂ ನಿರ್ಮಾಣವಾಗಿದೆ. ಈ ಕುರಿತು ನಾನೂ ಸಕ್ಕರೆ ಕಾರ್ಖಾನೆ ಮಾಲಿಕರನ್ನು ಪ್ರಶ್ನಿಸಿದ್ದೆ" ಎಂದರು.

ರಾಜ್ಯದಲ್ಲಿ ತೀವ್ರ ಬರಗಾಲವಿದ್ದು, ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ರಾಜ್ಯದಾದ್ಯಂತ ಬರಗಾಲ ಘೋಷಣೆ ಮಾಡಲಾಗಿದೆ. ಬರ ಪರಿಹಾರಕ್ಕಾಗಿ ಪ್ರಧಾನಮಂತ್ರಿಗಳ ಭೇಟಿಗೆ ಸಮಯ ಕೋರಲಾಗಿದ್ದು, ಕೇಂದ್ರ ಗೃಹ ಸಚಿವರನ್ನೂ ಭೇಟಿ ಮಾಡಿ ರಾಜ್ಯಕ್ಕೆ ಅಗತ್ಯ ನೆರವು ನೀಡುವಂತೆ ಮನವಿ ಸಲ್ಲಿಸಲಾಗುವುದು" ಎಂದರು.

ಬರಗಾಲದ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಸಹಕಾರದೊಂದಿಗೆ ಕಾರ್ಯನಿರ್ವಹಿಸಬೇಕು. ರೈತರ ಸಂಕಷ್ಟಕ್ಕೆ ಪರಿಹಾರ ಕಲ್ಪಿಸುವ ವಿಚಾರದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಒಟ್ಟಾಗಿ ನಿಲ್ಲಬೇಕು" ಎಂದು ಹೇಳಿದರು.

**ರೈತರ ಹೋರಾಟಕ್ಕೆ ಬೆಂಬಲ**

ರೈತರ ಸಂಘಟನೆ ಮತ್ತು ಹೋರಾಟದ ಶಕ್ತಿಯನ್ನು ಸರ್ಕಾರ ಗುರುತಿಸಿದೆ. ರೈತರ ಧ್ವನಿ ವಿಧಾನಸೌಧದಿಂದ ದೆಹಲಿಯವರೆಗೂ ತಲುಪಿದೆ. ನಿಮ್ಮ ಸಮಸ್ಯೆಗಳನ್ನು ನಿರ್ಲಕ್ಷಿಸುವ ಪ್ರಶ್ನೆಯೇ ಇಲ್ಲ. ರೈತರು ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಸೇರಿದವರಲ್ಲ. ರೈತರ ಹಿತ ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿದೆ" ಎಂದು ಹೇಳಿದರು. ರಾಜಕೀಯ ಆರೋಪ–ಪ್ರತ್ಯಾರೋಪಗಳಲ್ಲಿ ತೊಡಗುವುದಕ್ಕಿಂತ ಜನರ ಸಮಸ್ಯೆಗಳನ್ನು ಪರಿಹರಿಸುವುದು ಮುಖ್ಯ. ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ರೈತರ ನೋವು ಕಾರ್ಖಾನೆ ಮಾಲೀಕರಿಗೂ ಅರ್ಥವಾಗಬೇಕು. ರೈತರು ಇಲ್ಲಿಯವರೆಗೆ ಯಶಸ್ವಿಯಾಗಿ ಹೋರಾಟ ನಡೆಸಿದ್ದು, ತಮ್ಮ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ರೈತರು ಕಾನೂನು ಸಂಘರ್ಷಕ್ಕೆ ಅವಕಾಶವಾಗುವ ಘಟನೆಗಳಿಂದ ದೂರವಿರಬೇಕು" ಎಂದು ಮನವಿ ಮಾಡಿದರು. ನಿಮ್ಮ ಸಮಸ್ಯೆ ಬಗೆಹರಿಯುವವರೆಗೆ ನಿಮ್ಮೊಂದಿಗೆ ಚರ್ಚಿಸಲು ಸಿದ್ಧನಿದ್ದೇನೆ. ನೀವು ನನ್ನ ಮೇಲೆ ನಂಬಿಕೆ ಇಟ್ಟಿದ್ದೀರಿ. ಆ ನಂಬಿಕೆಯನ್ನು ಉಳಿಸಿಕೊಳ್ಳುವುದು ನನ್ನ ಜವಾಬ್ದಾರಿ. ರೈತರ ಸಮಸ್ಯೆ ಪರಿಹಾರವಾಗಬೇಕು ಎಂಬ ಉದ್ದೇಶವಾಗಿದೆ ಎಂದರು.

# ತಿರಂಗಾ ಮೆರವಣಿಗೆ ಪ್ರಕರಣ: ಸಿಜೆಪಿ ನಾಯಕ ಅಭಿಜೀತ್ ದೀಪ್ಕೆಗೆ ಷರತ್ತುಬದ್ಧ ಜಾಮೀನು



ನವದೆಹಲಿ, ಅ.17: ದೆಹಲಿಯ ಕನ್ನಾಟ್ ಪ್ಲೇಸ್‌ನ ಸೆಂಟ್ರಲ್ ಪಾರ್ಕ್‌ನಲ್ಲಿ ಆಯೋಜಿಸಲು ಉದ್ದೇಶಿಸಿದ್ದ ತಿರಂಗಾ ಮೆರವಣಿಗೆಗೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿದ್ದ ಕಾಕ್‌ರೋಚ್ ಜನತಾ ಪಾರ್ಟಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರಿಗೆ ದೆಹಲಿಯ ನ್ಯಾಯಾಲಯ ಶನಿವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಶಾಂತಿ ಕಾಪಾಡುವ ಬಾಂಡ್‌ಗೆ ಸಹಿ ಹಾಕಿದ ಬಳಿಕ ಅವರನ್ನು ಬಿಡುಗಡೆ ಮಾಡಲಾಗಿದೆ ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ.

ಸಿಜೆಪಿ ವತಿಯಿಂದ ಶುಕ್ರವಾರ ಲಹರಾ ದೋ ತಿರಂಗಾ ಹೆಸರಿನಲ್ಲಿ ತಿರಂಗಾ ಮೆರವಣಿಗೆಗೆ ಕರೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ದೆಹಲಿಯ ಝುಂಡೇವಾಲನ್ ಪ್ರದೇಶದಲ್ಲಿದ್ದ ತಮ್ಮ ನಿವಾಸದಿಂದ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ಹೊರಟಿದ್ದ ದೀಪ್ಕೆ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಬಳಿಕ ಶಾಂತಿ ಭಂಗವಾಗುವ ಸಾಧ್ಯತೆಯನ್ನು ತಡೆಯುವ ಉದ್ದೇಶದಿಂದ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) 126 ಮತ್ತು 170ನೇ ಕಲಂಗಳ ಅಡಿಯಲ್ಲಿ ಕ್ರಮ ಕೈಗೊಂಡು ಬಂಧಿಸಿದ್ದರು.

ಶನಿವಾರ ದೀಪ್ಕೆಯನ್ನು ಮಂದಿರ್ ಮಾರ್ಗ್ ಪೊಲೀಸ್ ಠಾಣೆಯಲ್ಲಿರುವ ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಯಿತು. ವಿಚಾರಣೆಯ ಬಳಿಕ ಶಾಂತಿ ಕಾಪಾಡುವ ಷರತ್ತಿನೊಂದಿಗೆ ಜಾಮೀನು ನೀಡಲಾಯಿತು. 50 ಸಾವಿರದ ಜಾಮೀನು ಬಾಂಡ್‌ಗೆ ಸಂಬಂಧಿಸಿದ ಷರತ್ತು ವಿಧಿಸಲಾಗಿದೆ. ಶಾಂತಿ ಕಾಪಾಡುವ ಬಾಂಡ್‌ಗೆ ಸಹಿ ಹಾಕಿದ ಬಳಿಕ ಅವರನ್ನು ಬಿಡುಗಡೆ ಮಾಡಲಾಗಿದೆ.

ಇದೇ ಪ್ರಕರಣದ ಹಿನ್ನೆಲೆಯಲ್ಲಿ ಅಖಿಲ ಭಾರತ ವಿದ್ಯಾರ್ಥಿ ಸಂಘದ ರಾಷ್ಟ್ರೀಯ ಅಧ್ಯಕ್ಷೆ ನೇಹಾ ಬೋರಾ ಅವರನ್ನು ಕೂಡ ಪೊಲೀಸರು ವಶಕ್ಕೆ ಪಡೆದಿದ್ದರು. ಶನಿವಾರ ಬೆಳಿಗ್ಗೆ ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ಬಳಿಕ ಅವರನ್ನು ಬಿಡುಗಡೆ ಮಾಡಲಾಗಿದೆ.

ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ವಿರೋಧ ವ್ಯಕ್ತಪಡಿಸುತ್ತಿರುವ ಸಿಜೆಪಿ ಹಾಗೂ ವಿದ್ಯಾರ್ಥಿ ಸಂಘಟನೆಗಳು, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆಗಳನ್ನು ನಡೆಸುತ್ತಿವೆ. ಶುಕ್ರವಾರದ ತಿರಂಗಾ ಮೆರವಣಿಗೆ ಹಿನ್ನೆಲೆಯಲ್ಲಿ ಕನ್ನಾಟ್ ಪ್ಲೇಸ್ ಪ್ರದೇಶದಲ್ಲಿ ಪೊಲೀಸರು ಭದ್ರತೆಯನ್ನು ಹೆಚ್ಚಿಸಿದ್ದರು.




ನವದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು, ಕೇಂದ್ರ ರಾಜ್ಯ ಸಚಿವರು ಹಾಗೂ ದೆಹಲಿ ಬಿಜೆಪಿ ಅಧ್ಯಕ್ಷ ಹರ್ಷ ಮಲ್ಹೋತ್ರಾ ಅವರ ಸಮ್ಮುಖದಲ್ಲಿ ಸರಿತಾ ವಿಹಾರ್‌ನಲ್ಲಿ ಎಂಸಿಡಿಯ ಹೊಸ ನೈರ್ಮಲ್ಯ ಸೌಲಭ್ಯಗಳಿಗೆ ಚಾಲನೆ ನೀಡಿದರು.

(1) 25 ವಾರ್ಡ್‌ಗಳಲ್ಲಿ ಮನೆ ಮನೆಗೆ ತೆರಳಿ ತ್ಯಾಜ್ಯ ಸಂಗ್ರಹಿಸಲು 428 ಆಟೋ-ಟಿಪ್ಪರ್‌ಗಳು, 128 ಇ-ರಿಕ್ಷಾಗಳು ಮತ್ತು 25 ಟಾಟಾ 407 ವಾಹನಗಳು. (2) ತ್ಯಾಜ್ಯವನ್ನು ತ್ವರಿತವಾಗಿ ಸಾಗಿಸಲು 27 ರಿಫ್ಯೂಸ್ ಕಂಪ್ಯಾಕ್ಟರ್‌ಗಳು (ತ್ಯಾಜ್ಯ ಸಂಕುಚನ ವಾಹನಗಳು), 5 ರಿಫ್ಯೂಸ್ ಕಲೆಕ್ಟರ್‌ಗಳು ಮತ್ತು 30 ಹುಕ್ ಲೋಡರ್‌ಗಳು. (3) ಉತ್ತಮ ತ್ಯಾಜ್ಯ ನಿರ್ವಹಣೆಗಾಗಿ 100 ಕಂಪ್ಯಾಕ್ಟರ್ ಬಿನ್‌ಗಳು (4) ಎಲ್ಲಾ 250 ವಾರ್ಡ್‌ಗಳಲ್ಲಿ ಬ್ಯಾಟರಿ ಚಾಲಿತ ಕಸ ಸಂಗ್ರಹಿಸುವ ಯಂತ್ರಗಳ **(litter picker machines)** ಪರಿಚಯ.

ಈ ಉಪಕ್ರಮವು ದೆಹಲಿಯಾದ್ಯಂತ ತ್ಯಾಜ್ಯ ಸಂಗ್ರಹಣಾ ವ್ಯವಸ್ಥೆಯನ್ನು ಬಲಪಡಿಸುತ್ತದೆ ಮತ್ತು ನೈರ್ಮಲ್ಯವನ್ನು ಸುಧಾರಿಸುತ್ತದೆ. ಈ ಸಂದರ್ಭದಲ್ಲಿ ದೆಹಲಿ ಮೇಯರ್ ಪ್ರವೇಶ್ ವಾಹಿ, ಉಪಮೇಯರ್ ಮೋನಿಕಾ ಪಂತ್, ಎಂಸಿಡಿ ಸ್ಥಾಯಿ ಸಮಿತಿ ಅಧ್ಯಕ್ಷೆ ಸತ್ಯಾ ಶರ್ಮಾ ಮತ್ತು ಇತರ ಗಣ್ಯರು ಹಾಜರಿದ್ದರು.

# ಜನರು ಬದಲಾವಣೆ ಬಯಸಿದ್ದಾರೆ: ಸಿಬಲ್



ನವದೆಹಲಿ, ಅ.17: ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಬಾಂಗ್ಲಾದೇಶ ಮಾದರಿಯಲ್ಲಿ ದೇಶದಲ್ಲಿ ಸರ್ಕಾರ ಬದಲಾವಣೆಯ ಅರಾಜಕತೆಯನ್ನು ಸೃಷ್ಟಿಸಲು ಯತ್ನಿಸುತ್ತಿವೆ ಎಂದು ಕೇಂದ್ರ ಸಚಿವ ರಾಜನಾಥ್ ಸಿಂಗ್ ಗಂಭೀರ ಆರೋಪ ಮಾಡಿದ್ದಾರೆ. ಅವರ ಆರೋಪಕ್ಕೆ ಹಿರಿಯ ರಾಜಕಾರಣಿ, ರಾಜ್ಯಸಭಾ ಸಂಸದ ಕಪಿಲ್ ಸಿಬಲ್ ತಿರುಗೇಟು ನೀಡಿದ್ದು, ಸರ್ಕಾರವನ್ನು ಕಾಂಗ್ರೆಸ್ ಬಯಸುತ್ತದೆಯೋ ಇಲ್ಲವೋ, ಆದರೆ ಈ ದೇಶದ ಜನತೆಯಂತೂ ಸರ್ಕಾರ ಬದಲಾವಣೆಯನ್ನು ಬಯಸುತ್ತಿದ್ದಾರೆ. ನಿಮ್ಮ ಸರ್ಕಾರದ ಅಧಿಕಾರಾವಧಿ ಮುಗಿದಿದ್ದು, ಈಗ ನೀವು ಅಧಿಕಾರದಿಂದ ನಿರ್ಗಮಿಸುವ ಸಮಯ ಬಂದಿದೆ ಎಂದು ಗುಡುಗಿದ್ದಾರೆ.

ಲಕ್ನೋದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ರಾಜ್‌ನಾಥ್ ಸಿಂಗ್, ದೇಶದ ಯುವಕರ ಶಕ್ತಿಯನ್ನು ರಾಷ್ಟ್ರ ನಿರ್ಮಾಣಕ್ಕೆ ಬಳಸುವ ಬದಲು, ರಾಜಕೀಯ ಸಂಘರ್ಷ ಮತ್ತು ಅರಾಜಕತೆಯನ್ನು ಹಬ್ಬಿಸಲು ವಿರೋಧ ಪಕ್ಷಗಳು ಬಳಸಿಕೊಳ್ಳುತ್ತಿವೆ. ಪ್ರಜಾಪ್ರಭುತ್ವವು ಯಾರಿಗೂ ಸಹ ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಅಥವಾ ಸಾಂವಿಧಾನಿಕ ಸಂಸ್ಥೆಗಳ ವಿಶ್ವಾಸಾರ್ಹತೆಯನ್ನು ಬುಡಮೇಲು ಮಾಡಲು ಪರವಾನಗಿ ನೀಡುವುದಿಲ್ಲ? ಎಂದು ಹೇಳಿದ್ದರು.

ಅವರ ಹೇಳಿಕೆಗೆ ಸಾಮಾಜಿಕ ಜಾಲತಾಣ ಮಾಧ್ಯಮದಲ್ಲಿ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಕಪಿಲ್ ಸಿಬಲ್, ಕಾಂಗ್ರೆಸ್ ಬಾಂಗ್ಲಾದೇಶದ ಹಾದಿಯಲ್ಲಿ ಸರ್ಕಾರ ಬದಲಾವಣೆ ಬಯಸುತ್ತಿದೆ ಎಂಬ ನಿಮ್ಮ ಆರೋಪ ಸರಿಯಲ್ಲ. ಆದರೆ, ದೇಶದ ಜನತೆಯೇ ಇಂದು ಆಡಳಿತ ಬದಲಾವಣೆ ಬಯಸುತ್ತಿದ್ದಾರೆ ಎಂಬುದು ಸ್ಪಷ್ಟ ಎಂದು ತಿರುಗೇಟು ನೀಡಿದ್ದಾರೆ.

ಒಂದು ಕಾಲದಲ್ಲಿ ಭ್ರಷ್ಟಾಚಾರದ ವಿರುದ್ಧ ಭಾರತ ಎಂಬ ಘೋಷಣೆಯೊಂದಿಗೆ ನಡೆದ ಪ್ರತಿಭಟನೆಗಳೇ ನಿಮ್ಮನ್ನು ಅಧಿಕಾರಕ್ಕೆ ತಂದಿದ್ದವು. ಆದರೆ, ಅಧಿಕಾರಕ್ಕೆ ಬಂದ ಮೇಲೆ ನೀವೇ ಭ್ರಷ್ಟಾಚಾರಕ್ಕೆ ಮಣೆ ಹಾಕಿದ್ದೀರಿ, ಸಾಂವಿಧಾನಿಕ ಸಂಸ್ಥೆಗಳನ್ನು ವಶಪಡಿಸಿಕೊಂಡಿದ್ದೀರಿ ಹಾಗೂ ಮತದಾರರ ಪಟ್ಟಿ ಮೇಲೆ ದಾಳಿ ಎಸಗಿದ್ದೀರಿ. ನೀವು ಹೊರಡುವ ಸಮಯ ಬಂದಿದೆ ಎಂದು ತೀವ್ರ ವಾಗ್ದಾಳಿ ನಡೆಸಿದ್ದಾರೆ.

# ಯುವಕರ ಮುಂದೆ ಬಿಜೆಪಿ ಬಣ್ಣ ಬಯಲಾಗಿದೆ: ಪ್ರಕಾಶ್ ರಾಜ್




ತಿರುವನಂತಪುರ, ಅ. 17: ದೇಶದ ವಿವಿಧ ಭಾಗಗಳಲ್ಲಿ ಶಾಂತಿಯುತ ಪ್ರತಿಭಟನೆ ನಡೆಸುತ್ತಿರುವ ಯುವಜನತೆಯನ್ನು ಶ್ಲಾಘಿಸಿರುವ ನಟ ಹಾಗೂ ಸಾಮಾಜಿಕ ಹೋರಾಟಗಾರ ಪ್ರಕಾಶ್‌ರಾಜ್, ಅಧಿಕಾರದಲ್ಲಿರುವ ಬಿಜೆಪಿಯವರಿಗಿಂತ ದೇಶದ ಯುವಜನತೆಗೆ ಮಹಿಳೆಯರನ್ನು ಗೌರವಿಸುವುದು ಹೇಗೆ ಎಂಬುದು ಚೆನ್ನಾಗಿ ತಿಳಿದಿದೆ ಎಂದು ತೀವ್ರ ವಾಗ್ದಾಳಿ ನಡೆಸಿದ್ದಾರೆ. ಅತ್ಯಾಚಾರಿಗಳಿಗೆ ಬಿಜೆಪಿ ಬೆಂಬಲ ನೀಡುತ್ತಿದೆ ಎಂದು ಆರೋಪಿಸಿರುವ ಅವರು, ದೇಶದ ಯುವಜನತೆ ಮಹಿಳೆಯರ ಘನತೆ ಮತ್ತು ಗೌರವವನ್ನು ಕಾಪಾಡುವ ಮೂಲಕ ಮಾದರಿಯಾಗಿದ್ದಾರೆ ಎಂದು ಹೇಳಿದ್ದಾರೆ.

ಕೇರಳದ ತಿರುವನಂತಪುರಂನ ಮಾನವೀಯಂ ವೀಧಿಯಲ್ಲಿ ಕಲೆಕ್ಟಿವ್ ಫಾರ್ ಡೆಮಾಕ್ರಸಿ ಸಂಘಟನೆ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ವಿರೋಧಿಸಿ ನಡೆದ ಈ ಪ್ರತಿಭಟನೆಯಲ್ಲಿ ಕೇಂದ್ರ ಸರ್ಕಾರ ಮತ್ತು ಬಿಜೆಪಿಯ ವಿರುದ್ಧ ಪ್ರಕಾಶ್ ರಾಜ್ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಅತ್ಯಾಚಾರಿಗಳಿಗೆ ಬೆಂಬಲ ನೀಡುತ್ತಿದೆ. ಇದು ಅತ್ಯಾಚಾರಿಗಳನ್ನು ಬೆಂಬಲಿಸುವ ಸರ್ಕಾರ. ಆದರೆ ದೇಶದ ಯುವಜನತೆಗೆ ಮಹಿಳೆಯರನ್ನು ಗೌರವಿಸುವುದು ಗೊತ್ತಿದೆ. ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಆದರೂ ಅಲ್ಲಿ ಒಬ್ಬ ಯುವತಿಯೂ ಅಹಿತಕರ ಅನುಭವಕ್ಕೆ ಒಳಗಾಗಲಿಲ್ಲ. ಇದು ನಮ್ಮ ದೇಶದ ಯುವಜನತೆಯ ನಿಜವಾದ ಗುಣ ಎಂದು ಪ್ರಕಾಶ್ ರಾಜ್ ಹೇಳಿದರು.

ತುಂತುರು ಮಳೆಯ ನಡುವೆಯೂ ನೂರಾರು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಸುಮಾರು ನೂರರಷ್ಟು ಕೊಡೆಗಳ ಅಡಿಯಲ್ಲಿ ಕೆಲವರು ನಿಂತಿದ್ದರೆ, ಉಳಿದವರು ಮಳೆಯಲ್ಲಿ ನೆನೆಯುತ್ತಲೇ ಪ್ರತಿಭಟನೆಯನ್ನು ಮುಂದುವರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಪ್ರಕಾಶ್‌ರಾಜ್, ಕೇರಳದ ಜನರು ತಮ್ಮನ್ನು ಪ್ರೀತಿಸುತ್ತಿರುವುದು ಸಿನಿಮಾಗಳಲ್ಲಿನ ಅಭಿನಯಕ್ಕಾಗಿ ಅಲ್ಲ, ಬದಲಾಗಿ ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿ ತಾವು ತೆಗೆದುಕೊಳ್ಳುವ ನಿಲುವುಗಳಿಗಾಗಿ ಎಂದು ಹೇಳಿದರು. ಯುವಜನತೆಯ ಹೋರಾಟದಲ್ಲಿ ಹಿರಿಯರ ಪಾತ್ರ ಹೇಗಿರಬೇಕು ಎಂಬುದನ್ನೂ ಅವರು ವಿವರಿಸಿದರು. ಹಿರಿಯರು ಯುವಜನತೆಯ ನಾಯಕರಾಗಲು ಪ್ರಯತ್ನಿಸಬಾರದು. ಬದಲಾಗಿ ತಮ್ಮ ಅನುಭವ ಮತ್ತು ವಿವೇಕವನ್ನು ಅವರೊಂದಿಗೆ ಹಂಚಿಕೊಳ್ಳಬೇಕು. ಅವರ ಹಿಂದೆ ನಿಂತು ಬೆಂಬಲ ನೀಡಬೇಕು. ಯುವಜನತೆ ತಮ್ಮ ಹೋರಾಟವನ್ನು ತಾವೇ ಮುನ್ನಡೆಸಲು ಅವಕಾಶ ಕಲ್ಪಿಸಬೇಕು. ಅವರು ಪ್ರತಿಭಟನೆ ನಡೆಸುವಾಗ ದೇಶದ ಪ್ರತಿಯೊಬ್ಬ ನಾಗರಿಕನೂ ಅವರ ಬೆಂಬಲಕ್ಕೆ ನಿಲ್ಲಬೇಕು ಎಂದು ಕರೆ ನೀಡಿದರು.

ದೇಶಕ್ಕಾಗಿ ಹೋರಾಡುವ ಮಹತ್ವವನ್ನು ಒತ್ತಿಹೇಳಿದ ಪ್ರಕಾಶ್‌ರಾಜ್, ದೇಶಕ್ಕಾಗಿ ಜೈಲಿಗೆ ಹೋಗುವುದಕ್ಕಿಂತ ಹೆಚ್ಚಿನ ಸಂತೋಷ ಮತ್ತೇನಿರಲು ಸಾಧ್ಯ ಎಂದು ಪ್ರಶ್ನಿಸಿದರು. ಪ್ರಜಾಪ್ರಭುತ್ವದ ರಕ್ಷಣೆಗಾಗಿ ನಡೆಯುತ್ತಿರುವ ಹೋರಾಟಗಳು ಶಾಂತಿಯುತವಾಗಿಯೇ ಮುಂದುವರಿಯಬೇಕು. ಜನರು ತಮ್ಮ ಹಕ್ಕುಗಳಿಗಾಗಿ ಧ್ವನಿ ಎತ್ತುವುದನ್ನು ನಿಲ್ಲಿಸಬಾರದು ಎಂದು ಹೇಳಿದರು.

ಜಂತರ್ ಮಂತರ್‌ನಲ್ಲಿ ನಡೆದ ಮೊದಲ ಪ್ರತಿಭಟನೆಯ ಸಂದರ್ಭದಲ್ಲೇ ಶಾಂತಿ ಕದಡಲು ಬಿಜೆಪಿ ಪ್ರಯತ್ನಿಸಿತ್ತು ಎಂದು ಪ್ರಕಾಶ್‌ರಾಜ್ ಆರೋಪಿಸಿದರು. ಪ್ರತಿಭಟನೆಯಲ್ಲಿ ಆತಂಕ, ಹಿಂಸಾಚಾರ ಮತ್ತು ಕಾಲ್ತುಳಿತದಂತಹ ಪರಿಸ್ಥಿತಿ ನಿರ್ಮಾಣವಾಗುವಂತೆ ಮಾಡಲು ಬಿಜೆಪಿ ಬಯಸಿತ್ತು ಎಂದು ದೂರಿದರು. ಇಂತಹ ಪ್ರಯತ್ನಗಳ ನಡುವೆಯೂ ಯುವಜನತೆ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿರುವುದು ಶ್ಲಾಘನೀಯ ಎಂದರು.

ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ಅವರ ವಿರುದ್ಧವೂ ಪ್ರಕಾಶ್ ರಾಜ್ ಪ್ರಶ್ನೆಗಳನ್ನು ಎತ್ತಿದರು. ಸಾರ್ವಜನಿಕರು ಗ್ಯಾನೇಶ್ ಅವರನ್ನು ಪ್ರಶ್ನಿಸಿದರೆ ಬಿಜೆಪಿ ಮಧ್ಯಪ್ರವೇಶಿಸುವುದೇಕೆ ಎಂದು ಪ್ರಶ್ನಿಸಿದ ಅವರು, ಚುನಾವಣಾ ಪ್ರಕ್ರಿಯೆಯ ಕುರಿತು ಜನರು ಪ್ರಶ್ನೆಗಳನ್ನು ಕೇಳುತ್ತಿರುವಾಗ ರಾಜಕೀಯ ಪಕ್ಷವೊಂದು ಅದಕ್ಕೆ ಅಡ್ಡಿಪಡಿಸುವ ಅಗತ್ಯವೇನಿದೆ ಎಂಬ ಪ್ರಶ್ನೆಯನ್ನು ಮುಂದಿಟ್ಟರು.

ಈ ಪ್ರತಿಭಟನೆಯಲ್ಲಿ ಸಿಪಿಐ ಕೇರಳ ರಾಜ್ಯ ಕಾರ್ಯದರ್ಶಿ ಬಿನೋಯ್ ವಿಶ್ವಂ, ಕೇರಳ ರಾಜ್ಯ ಚಲನಚಿತ್ರ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ರೇಮ್‌ಕುಮಾರ್, ನಟರಾದ ಭಾಗ್ಯಲಕ್ಷ್ಮಿ ಮತ್ತು ಜೋಬಿ ಹಾಗೂ ಗಾಯಕಿ ಪುಷ್ಪವತಿ ಪೊಯ್ಪಾಡತ್ತು ಸೇರಿದಂತೆ ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರದ ಹಲವು ಗಣ್ಯರು ಭಾಗವಹಿಸಿದ್ದರು.

# ಒಂದೇ ಕುಟುಂಬದ ಐವರು ಶವವಾಗಿ ಪತ್ತೆ

**ಗ್ರೇಟರ್ ನೋಯಿಡಾ, ಅ. 17:** ಒಂದೇ ಕುಟುಂಬದ ಐವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿರುವ ದಾರುಣ ಘಟನೆ ಉತ್ತರ ಪ್ರದೇಶದ ಗ್ರೇಟರ್ ನೋಯ್ಡಾದಲ್ಲಿ ವರದಿಯಾಗಿದೆ. ರಬೂಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ದುರ್ಘಟನೆ ನಡೆದಿದ್ದು, ಎಲ್ಲರೂ ವಿಷಾಹಾರ ಸೇವಿಸಿರಬಹುದು ಎಂದು ಶಂಕಿಸಲಾಗಿದೆ.

ಮೃತಪಟ್ಟವರನ್ನು 38 ವರ್ಷ ವಯಸ್ಸಿನ ಮಹೇಶ್, ಅವರ ಪತ್ನಿ 36 ವರ್ಷದ ಲಲಿತಾ ಹಾಗೂ ದಂಪತಿಯ ಮೂವರು ಮಕ್ಕಳು ಎಂದು ಗುರುತಿಸಲಾಗಿದೆ. ಇವರೆಲ್ಲರೂ ಶುಕ್ರವಾರ ರಾತ್ರಿ ಚಹಾ ಮತ್ತು ನೂಡಲ್ಸ್ ಸೇವಿಸಿ ಮಲಗಿದ್ದರು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಆಹಾರ ವಿಷಪ್ರಾಶನದಿಂದ ಈ ದುರಂತ ಸಂಭವಿಸಿರಬಹುದು ಎಂದು ಹೇಳಲಾಗಿದೆ.

ಶನಿವಾರ ಬೆಳಗ್ಗೆ ಮನೆಯಲ್ಲಿ ಯಾವುದೇ ಚಟುವಟಿಕೆಗಳು ಕಂಡುಬರದೇ ಇದ್ದುದನ್ನು ಗಮನಿಸಿದ ನೆರೆಹೊರೆಯವರು ಅನುಮಾನಗೊಂಡು, ಮನೆಯೊಳಗೆ ತೆರಳಿ ಪರಿಶೀಲಿಸಿದಾಗ, ಐವರೂ ಹಾಸಿಗೆಯ ಮೇಲೆಯೇ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿರುವುದು ಬೆಳಕಿಗೆ ಬಂದಿದೆ. ಸ್ಥಳೀಯರು ಅವರನ್ನು ಎಬ್ಬಿಸಲು ಪ್ರಯತ್ನಸಿದ್ದಾರೆ. ಆದರೆ, ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ, ಕೂಡಲೇ ಸ್ಥಳೀಯ ಪೊಲೀಸರಿಗೆ ಮಾಹಿತಿ ಮುಟ್ಟಿಸಿದ್ದಾರೆ.

ಸುದ್ದಿ ತಿಳಿದ ಕೂಡಲೇ ಹಿರಿಯ ಪೊಲೀಸರು ಮತ್ತು ವಿಧಿವಿಜ್ಞಾನ ತಜ್ಞರ ವಿಶೇಷ ತಂಡವು ಘಟನಾ ಸ್ಥಳಕ್ಕೆ ಧಾವಿಸಿ ಕೂಲಂಕಷ ಪರಿಶೀಲನೆ ನಡೆಸಿದೆ. ಅಡುಗೆಮನೆಯಲ್ಲಿ ಬಳಸಲಾಗಿದ್ದ ಚಹಾ ಪಾತ್ರೆಗಳು, ಉಳಿದಿದ್ದ ನೂಡಲ್ಸ್ ಹಾಗೂ ಇತರ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಆಹಾರದ ನಮೂನೆಗಳನ್ನು ಸಂಗ್ರಹಿಸಿ ಹೆಚ್ಚಿನ ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಎಲ್ಲಾ ಐದು ಮೃತದೇಹಗಳನ್ನು ವಶಕ್ಕೆ ಪಡೆದು ಮರಣೋತ್ತರ ಪರೀಕ್ಷೆಗಾಗಿ ರವಾನಿಸಲಾಗಿದೆ. ಕುಟುಂಬವು ಕೊನೆಯದಾಗಿ ಸೇವಿಸಿದ ಆಹಾರ ಪದಾರ್ಥಗಳೇ ಸಾವಿಗೆ ಕಾರಣವೇ ಎಂಬುದು ಸದ್ಯಕ್ಕೆ ನಿಖರವಾಗಿ ದೃಢಪಟ್ಟಿಲ್ಲ. ವಿಷಾಹಾರ ಸೇವನೆಯ ಜತೆಗೆ ಬೇರೆ ಯಾವುದಾದರೂ ಕಾರಣ ಗಳಿವೆಯಾ ಎಂಬ ಆಯಾಮದಲ್ಲೂ ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದಾರೆ. ಮರಣೋತ್ತರ ಪರೀಕ್ಷೆಯ ಅಧಿಕೃತ ವರದಿ ಬಂದ ನಂತರವೇ ಸಾವಿನ ಹಿಂದಿನ ನೈಜ ಅಂಶಗಳು ಹೊರಬರಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಚುನಾವಣಾ ಆಯುಕ್ತರ ವಜಾಗೆ ಡಿಎಂಕೆ ಪಟ್ಟು



**ಚೆನ್ನೈ, ಅ. 17:** ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿರುವ ಡಿಎಂಕೆ, ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ವಜಾಗೊಳಿಸುವಂತೆ ಆಗ್ರಹಿಸಿದೆ. ಪಕ್ಷದ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ನೇತೃತ್ವದಲ್ಲಿ ಶನಿವಾರ ನಡೆದ ಸಂಸದರ ಸಭೆಯಲ್ಲಿ ಈ ಸಂಬಂಧ ನಿರ್ಣಯ ಅಂಗೀಕರಿಸಲಾಗಿದೆ.

ಚುನಾವಣಾ ಆಯೋಗದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿ ಸಂಘಟನೆಗಳಿಗೆ ಬೆಂಬಲ ಸೂಚಿಸಿರುವ ಡಿಎಂಕೆ, ಕಾಂಗ್ರೆಸ್ ಮತ್ತು ತಮಿಳಗ ವೆಟ್ರಿ ಕಳಗಂ (ಟಿವಿಕೆ) ವಿರುದ್ಧವೂ ದ್ವಂದ್ವ ನಿಲುವಿನ ಆರೋಪ ಮಾಡಿದೆ ಎಂದು ಎಎನ್‌ಐ ವರದಿ ಮಾಡಿದೆ.

ಚೆನ್ನೈನಲ್ಲಿ ನಡೆದ ಸಭೆಯಲ್ಲಿ ಡಿಎಂಕೆ ನಾಲ್ಕು ನಿರ್ಣಯಗಳನ್ನು ಅಂಗೀಕರಿಸಿದೆ. ಜ್ಞಾನೇಶ್‌ಕುಮಾರ್ ವಜಾ, ಎಸ್‌ಐಆರ್ ವಿರೋಧಿ ವಿದ್ಯಾರ್ಥಿ ಸಂಘಟನೆಗಳಿಗೆ ಬೆಂಬಲ ಹಾಗೂ ಕಾಂಗ್ರೆಸ್, ಟಿವಿಕೆ ವಿರುದ್ಧ ದ್ವಂದ್ವ ನಿಲುವಿನ ಆರೋಪ ಪ್ರಮುಖವಾಗಿವೆ. ಚುನಾವಣಾ ಅಕ್ರಮಗಳ ಕುರಿತು ರಾಷ್ಟ್ರಪತಿಗೆ ಮನವಿ ಸಲ್ಲಿಸಲು ಪಕ್ಷ ನಿರ್ಧರಿಸಿದೆ.

–ಎಸ್‌ಐಆರ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು. ಇವಿಎಂಗಳ ಬದಲಿಗೆ ಬ್ಯಾಲೆಟ್ ಪೇಪರ್ ಮತದಾನ ಮರುಜಾರಿಗೊಳಿಸಬೇಕು. ಚುನಾವಣಾ ಅಕ್ರಮಗಳ ಕುರಿತು ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಬೇಕು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಕಾರ್ಯವೈಖರಿ ಬಗ್ಗೆಯೂ ತನಿಖೆ ನಡೆಸಬೇಕೆಂದು ಡಿಎಂಕೆ ಒತ್ತಾಯಿಸಿದೆ.

2025ರ ಅಕ್ಟೋಬರ್‌ನಲ್ಲಿ ತಮಿಳುನಾಡು ಸೇರಿದಂತೆ 12 ರಾಜ್ಯಗಳಲ್ಲಿ ಎಸ್‌ಐಆರ್ ಘೋಷಿಸಿದಾಗಲೂ ಸ್ಟಾಲಿನ್ ವಿರೋಧ ವ್ಯಕ್ತಪಡಿಸಿದ್ದರು. ತಮಿಳುನಾಡು ಮತ್ತು ಕೇರಳದಲ್ಲಿ ಎಸ್‌ಐಆರ್ ವಿಚಾರವಾಗಿ ಕಾಂಗ್ರೆಸ್ ದ್ವಂದ್ವ ನಿಲುವು ತಾಳಿದೆ ಎಂದು ಡಿಎಂಕೆ ಆರೋಪಿಸಿದ್ದು, ಅಕ್ರಮಗಳ ಬಗ್ಗೆ ಎಲ್ಲ ರಾಜ್ಯಗಳಲ್ಲೂ ಒಂದೇ ನಿಲುವು ಹೊಂದಿರಬೇಕು ಎಂದು ಹೇಳಿದೆ.

# ಸಂಗೀತ ನಿರ್ದೇಶಕ ದೇವ ಇನ್ನಿಲ್ಲ



ಚೆನ್ನೈ, ಅ. 17: ಕನ್ನಡ ಸೇರಿದಂತೆ ದಕ್ಷಿಣ ಭಾರತದ ಹಲವು ಭಾಷೆಗಳ ಚಿತ್ರಗಳಿಗೆ ಸುಮಧುರ ಸಂಗೀತ ನೀಡಿದ್ದ ಖ್ಯಾತ ಸಂಗೀತ ನಿರ್ದೇಶಕ ದೇವ (ದೇವನೇಶನ್ ಚೊಕ್ಕಲಿಂಗಂ) ಅವರು ನಿಧನರಾಗಿದ್ದಾರೆ. 75 ವರ್ಷದ ಅವರು ಹೃದಯಾಘಾತದಿಂದ ಚೆನ್ನೈನಲ್ಲಿ ಕೊನೆಯುಸಿರೆಳೆದಿದ್ದಾರೆ ಎಂದು ವರದಿಯಾಗಿದೆ.

ಕಳೆದ ಮೂರೂವರೆ ದಶಕಗಳಿಂದ ತಮ್ಮ ಸಂಗೀತದ ಮೂಲಕ ಅಪಾರ ಅಭಿಮಾನಿಗಳನ್ನು ಸಂಪಾದಿಸಿದ್ದ ದೇವ, ಕನ್ನಡ ಚಿತ್ರರಂಗಕ್ಕೂ ಅನೇಕ ಜನಪ್ರಿಯ ಗೀತೆಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಮೂಲತಃ ತಮಿಳುನಾಡಿನವರಾಗಿದ್ದರೂ ಕನ್ನಡ ಸಿನಿಮಾಗಳೊಂದಿಗೆ ಅವರು ವಿಶೇಷ ನಂಟು ಹೊಂದಿದ್ದರು.

ವಿಷ್ಣುವರ್ಧನ್, ಅಂಬರೀಶ್, ಶಿವರಾಜ್‌ಕುಮಾರ್, ರಮೇಶ್ ಅರವಿಂದ್ ಹಾಗೂ ಉಪೇಂದ್ರ ಸೇರಿದಂತೆ ಕನ್ನಡದ ಪ್ರಮುಖ ನಟರ ಸಿನಿಮಾಗಳಿಗೆ ದೇವ ಸಂಗೀತ ಸಂಯೋಜಿಸಿದ್ದಾರೆ. ಅವರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದ ಹಲವು ಹಾಡುಗಳು ಇಂದಿಗೂ ಸಂಗೀತಪ್ರಿಯರ ಮನಸ್ಸಿನಲ್ಲಿ ನೆಲೆಸಿವೆ. ಅಮೃತವರ್ಷಿಣಿ, ಕೋಟಿಗೊಬ್ಬ, ಸೈನಿಕ, ಸಿಂಹಾದ್ರಿ ಸಿಂಹ, ರಾಜಾ ನರಸಿಂಹ, ಕದಂಬ, ವಿಷ್ಣು ಸೇನಾ ಮತ್ತು ಒಲವೇ ಮಂದಾರ ಸೇರಿದಂತೆ ಹಲವು ಕನ್ನಡ ಚಿತ್ರಗಳ ಜನಪ್ರಿಯ ಹಾಡುಗಳ ಹಿಂದೆ ದೇವ ಅವರ ಸಂಗೀತದ ಕೊಡುಗೆ ಇದೆ. ಅಮೃತವರ್ಷಿಣಿ ಚಿತ್ರದ ಭಲೇ ಭಲೇ ಚಂದದ ಚಂದುಳ್ಳಿ ಹೆಣ್ಣು ನೀನು, ಕದಂಬ ಚಿತ್ರದ ಯಾಮಿನಿ ಯಾರಮ್ಮ ನೀನು ಯಾಮಿನಿ, ಗಲಾಟೆ ಅಳಿಯಂದ್ರು ಸಿನಿಮಾದ ತಿಲ್ಲಾನ ತಿಲ್ಲಾನ, ಸಾಗರಿಯೇ ಸಾಗರಿಯೇ, ಸಿಂಹಾದ್ರಿಯ ಸಿಂಹದ ಕಲ್ಲಾದರೆ ನಾನು ಮತ್ತು ಮಲ್ನಾಡ್ ಅಡಿಕೆ ಮುಂತಾದ ಹಾಡುಗಳಿಗೆ ಅವರು ಸಂಗೀತ ಸಂಯೋಜಿಸಿದ್ದಾರೆ. ಕನ್ನಡ, ತಮಿಳು ಮತ್ತು ತೆಲುಗು ಸೇರಿದಂತೆ 400ಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ನೀಡಿರುವ ದೇವ, ದಕ್ಷಿಣ ಭಾರತದ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು.

ಆಸ್ಕರ್ ಪ್ರಶಸ್ತಿ ವಿಜೇತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಅವರ ಆರಂಭಿಕ ಸಂಗೀತ ಪಯಣದಲ್ಲಿಯೂ ದೇವ ಅವರ ಪಾತ್ರವಿತ್ತು ಎಂದು ಹೇಳಲಾಗುತ್ತದೆ. ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ಗುರುತು ಮೂಡಿಸಿದ್ದ ದೇವ, ಹಲವು ತಲೆಮಾರುಗಳ ಸಂಗೀತಪ್ರಿಯರಿಗೆ ನೆನಪಿನಲ್ಲಿ ಉಳಿಯುವ ಹಾಡುಗಳನ್ನು ನೀಡಿದ್ದಾರೆ.

# ಪೊಲೀಸರಿಂದ ಲೈಂಗಿಕ ದೌರ್ಜನ್ಯ ಖಂಡಿಸಿ ಪ್ರತಿಭಟನೆ

**ನವದೆಹಲಿ, ಅ. 17:** ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಮತ್ತು ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗಳ ವೇಳೆ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ಹಾಗೂ ದೌರ್ಜನ್ಯ ಎಸಗಲಾಗಿದೆ ಎಂಬ ಆರೋಪ ಕೇಳಿಬಂದಿದೆ. ಇದನ್ನು ಖಂಡಿಸಿ ವಿವಿಧ ಮಹಿಳಾ ಸಂಘಟನೆಗಳ ಕಾರ್ಯಕರ್ತರು ಶನಿವಾರ ದೆಹಲಿ ಪೊಲೀಸ್ ಪ್ರಧಾನ ಕಚೇರಿಯತ್ತ ಪ್ರತಿಭಟನಾ ಮೆರವಣಿಗೆ ನಡೆಸಿದರು. ಆರೋಪಿತ ಪೊಲೀಸ್ ಸಿಬ್ಬಂದಿ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ, ರಾಷ್ಟ್ರೀಯ ಭಾರತೀಯ ಮಹಿಳಾ ಒಕ್ಕೂಟ ಮತ್ತು ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘಟನೆ ಸೇರಿದಂತೆ ಹಲವು ಸಂಘಟನೆಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡವು. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮಹಿಳೆಯರು ಹಾಗೂ ವರದಿಗೆ ತೆರಳಿದ್ದ ಪತ್ರಕರ್ತೆಯರೊಂದಿಗೆ ಕೆಲವು ಪೊಲೀಸ್ ಸಿಬ್ಬಂದಿ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಸಂಘಟನೆಗಳು ಆರೋಪಿಸಿವೆ. ಮಹಿಳೆಯರ ದೇಹವನ್ನು ಅನುಚಿತವಾಗಿ ಸ್ಪರ್ಶಿಸಿರುವುದು ಹಾಗೂ ಬೆದರಿಕೆ ಒಡ್ಡಿರುವ ಆರೋಪಗಳ ಬಗ್ಗೆಯೂ ತನಿಖೆಗೆ ಒತ್ತಾಯಿಸಿವೆ.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಸಿಪಿಐ ನಾಯಕಿ ಆಯನಿ ರಾಜಾ ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಮಹಿಳೆಯರ ಪ್ರತಿಭಟನೆಯನ್ನು ಹತ್ತಿಕ್ಕಲು ಲೈಂಗಿಕ ದೌರ್ಜನ್ಯವನ್ನು ಅಸ್ತ್ರವನ್ನಾಗಿ ಬಳಸಲಾಗುತ್ತಿದೆ ಎಂದು ಆರೋಪಿಸಿದ ಅವರು, ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆಗೆ ಆಗ್ರಹಿಸಿದರು. ಇಂತಹ ಬೆದರಿಕೆಗಳಿಂದ ಮಹಿಳೆಯರ ಹೋರಾಟವನ್ನು ನಿಲ್ಲಿಸಲು ಸಾಧ್ಯವಿಲ್ಲ ಎಂದು ಎಚ್ಚರಿಸಿದರು.

ಶುಕ್ರವಾರ ದೆಹಲಿಯ ಕನ್ನಾಟ್ ಪ್ಲೇಸ್‌ನಲ್ಲಿ ನಡೆದ ಲೆಹ್ರಾ ದೋ ತಿರಂಗಾ ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸರು ಹಲವು ಮಂದಿಯನ್ನು ವಶಕ್ಕೆ ಪಡೆದಿದ್ದರು. ಕಾಕ್ರೋಚ್ ಜನತಾ ಪಾರ್ಟಿ ಸಂಸ್ಥಾಪಕ ಅಭಿಜಿತ್ ದಿಪ್ಕೆ ಮತ್ತು ಅಖಿಲ ಭಾರತ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ನೇಹಾ ಬೋರಾ ಕೂಡ ಇವರಲ್ಲಿದ್ದರು. ನೇಹಾ ಅವರನ್ನು ಶನಿವಾರ ಬೆಳಗಿನ ಜಾವ ಬಿಡುಗಡೆ ಮಾಡಲಾಗಿದ್ದು, ಅಭಿಜಿತ್ ಅವರನ್ನು ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಇದೇ ವೇಳೆ ಪ್ರತಿಭಟನಾಕಾರರ ಮೇಲಿನ ಹಲ್ಲೆ ಪ್ರಕರಣಗಳಿಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಕನಿಷ್ಠ 10 ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಹಲ್ಲೆಯ ದೃಶ್ಯಗಳ ಆಧಾರದಲ್ಲಿ ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ. ಒಂದು ಪ್ರಕರಣದಲ್ಲಿ ನಾಲ್ವರನ್ನು ಬಂಧಿಸಲಾಗಿದ್ದು, ಇತರ ಆರೋಪಿಗಳ ಪತ್ತೆಗೆ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ. ಈ ಪ್ರಕರಣಗಳು ಮಹಿಳಾ ಸಂಘಟನೆಗಳು ಪೊಲೀಸ್ ಸಿಬ್ಬಂದಿ ವಿರುದ್ಧ ಮಾಡಿರುವ ಆರೋಪಗಳಿಂದ ಪ್ರತ್ಯೇಕವಾಗಿವೆ. ಪ್ರತಿಭಟನೆ ನಡೆಸುವುದು ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕಾಗಿದ್ದು, ಅದನ್ನು ಹತ್ತಿಕ್ಕಲು ಮಹಿಳೆಯರ ಮೇಲೆ ದೌರ್ಜನ್ಯ ನಡೆಸುವುದನ್ನು ಸಹಿಸಲಾಗದು ಎಂದು ಸಂಘಟನೆಗಳು ತಿಳಿಸಿವೆ. ಆರೋಪಗಳ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿವೆ. ಆದರೆ, ಲೈಂಗಿಕ ದೌರ್ಜನ್ಯದ ಆರೋಪಗಳು ಇನ್ನೂ ತನಿಖೆಯ ಹಂತದಲ್ಲಿದ್ದು, ಅವು ಸಾಬೀತಾಗಿಲ್ಲ.

# ತಿಹಾರ್ ಜೈಲಿನಲ್ಲಿ ಸಿಜೆಪಿ ನಾಯಕರಿಗೆ ಹೈ ಸೆಕ್ಯೂರಿಟಿ




ನವದೆಹಲಿ, ಅ. 17: ಅನುಮತಿಯಿಲ್ಲದೆ ಜಂತರ್ ಮಂತರ್‌ನ ಪ್ರತಿಭಟನಾ ಸ್ಥಳಕ್ಕೆ ಪ್ರವೇಶಿಸಲು ಯತ್ನಿಸಿದ ಆರೋಪದ ಮೇಲೆ ಬಂಧಿತರಾಗಿರುವ ಸಿಜೆಪಿ ನಾಯಕರಾದ ಆಶುತೋಷ್ ರಂಕಾ ಮತ್ತು ಸೌರವ್ ದಾಸ್ ಅವರನ್ನು ದೆಹಲಿಯ ತಿಹಾರ್ ಜೈಲಿನ ಪ್ರತ್ಯೇಕ ಭದ್ರತೆ ವಾರ್ಡ್‌ಗಳಲ್ಲಿ ಇರಿಸಲಾಗಿದೆ ಎಂದು ವರದಿಯಾಗಿದೆ. ಇಬ್ಬರ ಕೋಣೆಗಳ ಹೊರಗೆ ಹೆಚ್ಚುವರಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಹಗಲಿನ ವೇಳೆ ಜೈಲಿನ ಇತರ ಕೈದಿಗಳೊಂದಿಗೆ ಇವರನ್ನು ಹೊರಗೆ ಬಿಡಬಾರದು ಎಂದು ಜೈಲು ಆಡಳಿತ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಕಾನೂನು ಉಲ್ಲಂಘಿಸಿ ಸಾರ್ವಜನಿಕ ಶಾಂತಿಗೆ ಧಕ್ಕೆ ತರುವ ಪ್ರಯತ್ನವನ್ನು ಪದೇಪದೇ ನಡೆಸಿದ ಆರೋಪದ ಮೇಲೆ ಅಕ್ಟೋಬರ್ 14ರಂದು ಇಬ್ಬರನ್ನು ಬಂಧಿಸಲಾಗಿದೆ. ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ ಮತ್ತೆ ಕಾನೂನು ಉಲ್ಲಂಘಿಸುವ ಹಾಗೂ ಇತರರನ್ನು ಪ್ರಚೋದಿಸುವ ಸಾಧ್ಯತೆ ಇದೆ ಎಂಬ ಆತಂಕದ ಹಿನ್ನೆಲೆಯಲ್ಲಿ ಇಬ್ಬರನ್ನೂ ಐದು ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ತಿಹಾರ್ ಜೈಲಿಗೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಜೈಲಿನ ದಾಖಲೆಗಳ ಪ್ರಕಾರ, ಸೌರವ್ ದಾಸ್ ಅವರ ಕೈದಿ ಸಂಖ್ಯೆ 3752 ಆಗಿದ್ದು, ಆಶುತೋಷ್ ರಂಕಾ ಅವರ ಕೈದಿ ಸಂಖ್ಯೆ 1784 ಆಗಿದೆ. ಆರಂಭದಲ್ಲಿ ಇಬ್ಬರನ್ನೂ ಜೈಲು ಸಂಖ್ಯೆ 2ರಲ್ಲಿ ಇರಿಸಲಾಗಿತ್ತು. ಬಳಿಕ ರಂಕಾ ಅವರನ್ನು ಜೈಲು ಸಂಖ್ಯೆ 4ಕ್ಕೆ ಸ್ಥಳಾಂತರಿಸಲಾಗಿದೆ. ದಾಸ್ ಅವರನ್ನು ಜೈಲು ಸಂಖ್ಯೆ 2ರ ಮೂರನೇ ವಾರ್ಡ್‌ನಲ್ಲಿ ಇರಿಸಲಾಗಿದ್ದರೆ, ರಂಕಾ ಅವರು ಜೈಲು ಸಂಖ್ಯೆ 4ರ 15ನೇ ವಾರ್ಡ್‌ನಲ್ಲಿದ್ದಾರೆ. ಈ ವಾರ್ಡ್‌ಗಳಲ್ಲಿ ಇತರ ವಿಭಾಗಗಳಿಗಿಂತ ಕಡಿಮೆ ಸಂಖ್ಯೆಯ ಕೈದಿಗಳಿದ್ದಾರೆ ಎಂದು ವರದಿ ತಿಳಿಸಿದೆ.

ಇಬ್ಬರನ್ನೂ ಪ್ರತ್ಯೇಕ ವಾರ್ಡ್‌ಗಳಲ್ಲಿ ಇರಿಸಲಾಗಿದೆ. ಇತರ ವಾರ್ಡ್‌ಗಳ ಯಾವುದೇ ಕೈದಿಗಳಿಗೆ ಈ ವಾರ್ಡ್‌ಗಳಿಗೆ ಪ್ರವೇಶಿಸಲು ಅವಕಾಶವಿಲ್ಲ. ಅವರ ಕೋಣೆಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಎಲ್ಲ ಚಟುವಟಿಕೆಗಳ ಮೇಲೆ ನಿಗಾ ಇರಿಸಲಾಗಿದೆ. ಆತ್ಮಹತ್ಯೆ ತಡೆಗಟ್ಟುವ ಉದ್ದೇಶದಿಂದಲೂ ದಿನದ 24 ಗಂಟೆಯೂ ಮೇಲ್ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಹಾರ್ ಜೈಲಿನ ಮೂಲವೊಂದು ತಿಳಿಸಿದೆ. ಗುರುವಾರ ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಮತ್ತು ಪಕ್ಷದ ಕಾನೂನು ವಿಭಾಗದ ಮುಖ್ಯಸ್ಥೆ ರತ್ನಾ ಸಿಂಗ್ ಜೈಲಿನಲ್ಲಿ ಇಬ್ಬರನ್ನೂ ಭೇಟಿಯಾಗಿದ್ದಾರೆ.

ದಾಸ್ ಇರುವ ಜೈಲು ಸಂಖ್ಯೆ 2ರಲ್ಲಿ ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಈ ಹಿಂದೆ ಇದ್ದರು. ಹೋರಾಟಗಾರ ಹಾಗೂ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಕೂಡ ಇದೇ ಜೈಲಿನಲ್ಲಿದ್ದಾರೆ. ಆದರೆ ಅವರನ್ನು ಪ್ರತ್ಯೇಕ ಹೈ-ರಿಸ್ಕ್ ಕೋಣೆಯಲ್ಲಿ ಇರಿಸಲಾಗಿದೆ ಎಂದು ವರದಿ ಹೇಳಿದೆ.

# ಪತ್ರಿಕೆಗಳ ನೋಂದಣಿ ಪ್ರಕ್ರಿಯೆ ಸಂಪೂರ್ಣ ಆನ್‌ಲೈನ್: ಕುಂದುಕೊರತೆ ತ್ವರಿತ ನಿವಾರಣೆಗೆ ಕ್ರಮ- ಯೋಗೇಶ್ ಕುಮಾರ್ ಬವೇಜಾ

**ಬೆಂಗಳೂರು, ಅ.17:** ಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ನೋಂದಣಿ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರವು ಹಲವಾರು ಮಹತ್ವದ ಬದಲಾವಣೆಗಳನ್ನು ತರುವ ಮೂಲಕ ಸುಮಾರು 150 ವರ್ಷದಷ್ಟು ಹಳೆಯ ಕಾಯ್ದೆಯನ್ನು ಮಾಧ್ಯಮದವರ ಅನುಕೂಲಕ್ಕಾಗಿ ಡಿಜಿಟಲೀಕರಣ ದೊಂದಿಗೆ ಸರಳೀಕರಣಗೊಳಿಸುವ ಮೂಲಕ ಮಾಧ್ಯಮ ಕ್ಷೇತ್ರವನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದು ಭಾರತದ ಪತ್ರಿಕಾ ನೋಂದಣಿಯ ಪ್ರಧಾನ ಮಹಾನಿರ್ದೇಶಕ ಯೋಗೇಶ್ ಕುಮಾರ್ ಬವೇಜಾ ತಿಳಿಸಿದರು.

ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ವಾರ್ತಾ ಶಾಖೆ ಬೆಂಗಳೂರು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಹಯೋಗದಲ್ಲಿ ವಾರ್ತಾಸೌಧದ ಮಹಾತ್ಮ ಗಾಂಧೀ ಮಾಧ್ಯಮ ಕೇಂದ್ರದ ಸಭಾಂಗಣದಲ್ಲಿ ಇಂದು ಪತ್ರಿಕಾ ಮತ್ತು ನಿಯತಕಾಲಿಕೆಗಳ ನೋದಂಣಿ ಕಾಯ್ದೆ 2023 ಮತ್ತು ಪ್ರೆಸ್ ಸೇವಾ ಪೋರ್ಟಲ್‌ಗೆ ಸಂಬಂಧಿಸಿದ ಕುಂದುಕೊರತೆ, ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಜಿಲ್ಲಾಮಟ್ಟದ ದಿನಪತ್ರಿಕೆಗಳ ಮಾಲೀಕರು, ಸಂಪಾದಕರು, ಮುದ್ರಕರು ಹಾಗೂ ಜಿಲ್ಲಾ ವಾರ್ತಾಧಿಕಾರಿಗಳಿಗಾಗಿ ಆಯೋಜಿಸಲಾಗಿದ್ದ ಕಾರ್ಯಾಗಾರದಲ್ಲಿ ಮಾತನಾಡಿದರು.

**ಹೊಸ ಪತ್ರಿಕೆಗೆ 3 ತಿಂಗಳೊಳಗೆ ಅನುಮತಿ:** ಈ ಹಿಂದೆ ಹೊಸ ಪತ್ರಿಕೆ ಆರಂಭಿಸಬೇಕಾದರೆ ಜಿಲ್ಲಾಧಿಕಾರಿಗಳ ಕಚೇರಿ ಮೂಲಕ ಅರ್ಜಿ ಸಲ್ಲಿಸಿ ದೆಹಲಿಗೆ ಕಳುಹಿಸಬೇಕಾಗಿತ್ತು. ಇದರಿಂದ ತಿಂಗಳು ಹಾಗೂ ವರ್ಷಗಳೇ ಕಳೆಯುತ್ತಿದ್ದವು. ಆದರೆ ಈಗ 2023ರ ಹೊಸ ಕಾಯ್ದೆ ಮೂಲಕ ಎಲ್ಲಾ ಪ್ರಕ್ರಿಯೆಗಳನ್ನು 'ಪ್ರೆಸ್ ಸೇವಾ ಪೋರ್ಟಲ್' ಮೂಲಕ ಆನ್‌ಲೈನ್ ನಲ್ಲೇ ನಡೆಯಲಿರುವುದರಿಂದ ಭೌತಿಕ ದಾಖಲೆಗಳ ಸಲ್ಲಿಕೆಗೆ ಅವಕಾಶವಿರುವುದಿಲ್ಲ. ಹಾಗಾಗಿ ನೋಂದಣಿ ಪ್ರಕ್ರಿಯೆ ಸುಲಭವಾಗಿ ಮತ್ತು ತ್ವರಿತವಾಗಿ ನೆರವೇರಲಿದೆ. ಅರ್ಜಿ ಸಲ್ಲಿಸಿದ ಕೇವಲ 3 ತಿಂಗಳೊಳಗೆ ಹೊಸ ಪತ್ರಿಕೆ ಪ್ರಾರಂಭಿಸಬಹುದು. ಪಿಆರ್‌ಜಿಐನಿಂದ ಸಮಗ್ರ ಪರಿಶೀಲನೆ ಬಳಿಕ ಅಂತಿಮವಾಗಿ ಟೈಟಲ್ ನೀಡಿದ ಮೇಲೆ 12 ತಿಂಗಳೊಳಗೆ ಪತ್ರಿಕೆ ಆರಂಭಿಸುವುದು ಕಡ್ಡಾಯವಾಗಿರುತ್ತದೆ ಎಂದು ಯೋಗೇಶ್ ಕುಮಾರ್ ಬವೇಜಾ ತಿಳಿಸಿದರು. ಪತ್ರಿಕೆಗಳ ಹೊಸ ರಿಜಿಸ್ಟ್ರೇಶನ್ ಮಾಡುವ ಬಗ್ಗೆ, ಮಾಲೀಕತ್ವ ಬದಲಾವಣೆ, ವಿಳಾಸ ಬದಲಾವಣೆ ಮಾಡಿಸುವುದಕ್ಕೆ ಸಹ ನಿಯಮಾನುಸಾರ ಅವಕಾಶವಿರುತ್ತದೆ. ಹೊಸ ನೋಂದಣಿ ಹೇಗೆ ಮಾಡುವುದು, ಹೊಸ ಆವೃತ್ತಿ ಸೇರ್ಪಡೆ ಹೇಗೆ, ನೋಂದಣಿ ಪರಿಷ್ಕರಣೆ, ಮಾಲೀಕತ್ವ ವರ್ಗಾವಣೆ , ದಂಡ ಪಾವತಿ, ಮುದ್ರಣ ಕಾಗದ ಆಮದು ಮತ್ತು ಪತ್ರಿಕೆಗಳ ಸ್ಥಗಿತಗೊಳಿಸುವಿಕೆ/ರದ್ದತಿ, ಇವೇ ಮುಂತಾದ



ಪ್ರಕ್ರಿಯೆಗಳನ್ನು ಡಿಜಿಟಲ್ ಮೂಲಕ ಹೇಗೆ ಮಾಡುವುದು ಎಂಬುದನ್ನು ವಿವರಿಸಿದರು.

ಸಂವಾದದಲ್ಲಿ ಸಂಪಾದಕರುಗಳು ಹಾಗೂ ಜಿಲ್ಲಾ ವಾರ್ತಾಧಿಕಾರಿಗಳ ಪ್ರಶ್ನೆಗಳಿಗೆ ಉತ್ತರಿಸಿದ ಅವರು ಇಲ್ಲಿನ ಪ್ರತಿ ಸಲಹೆಗಳನ್ನು ಸ್ವೀಕರಿಸಲಾಗಿದೆ ಹಾಗೂ ಈ ಕುರಿತಂತೆ ಕೇಂದ್ರದ ವಾರ್ತಾ ಇಲಾಖೆಯ ಗಮನಕ್ಕೆ ತರಲಾಗುವುದು.

ಕೇಂದ್ರ ವಾರ್ತಾ ಇಲಾಖೆಯ ಕರ್ನಾಟಕದ ಶಾಖೆಗಳಲ್ಲಿ ಪೇಪರ್‌ಗಳ ಹಾಜರಾತಿ ಕುರಿತಂತೆ ಮುದ್ರಿತ ಪೇಪರ್‌ಗಳನ್ನು ಪಡೆಯುವ ವ್ಯವಸ್ಥೆ ಜಾರಿಗೆ ತರುವ ಬಗ್ಗೆ ಚಿಂತನೆ ನಡೆಸಲಾಗುವುದು ಎಂದರು.

ವಾರ್ತಾ ಇಲಾಖೆ ಕಾರ್ಯದರ್ಶಿ ಜೆ. ಮಂಜುನಾಥ್ ಮಾತನಾಡಿ, ವಾರ್ತಾ ಇಲಾಖೆಯ ಮಾಧ್ಯಮ ಪಟ್ಟಿಗೆ ಪತ್ರಿಕೆಗಳು ಸೇರ್ಪಡೆ ಆಗುತ್ತಿರುವ ಸಂಖ್ಯೆ ದಿನೇದಿನೆ ಹೆಚ್ಚುತ್ತಿದೆ. ಪತ್ರಿಕೆಗಳ ಸಂಖ್ಯೆ ಹೆಚ್ಚಳದಿಂದ ಸರಕಾರಕ್ಕೆ ಆರ್ಥಿಕ ಹೊರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪತ್ರಿಕೆಗಳ ನೋಂದಣಿ, ಹಾಜರಾತಿ, ಪ್ರಸಾರ ಸಂಖ್ಯೆ ಮೇಲೆ ಇನ್ನಷ್ಟು ನಿಗಾ ವಹಿಸುವ ಅಗತ್ಯವಿರುತ್ತದೆ. ಕೃತಕ ಬುದ್ಧಿಮತ್ತೆ (ಎ.ಐ), ಚಾಟ್ ಜಿಪಿಟಿ ಮತ್ತಿತರ ತಂತ್ರಜ್ಞಾನದ ಈ ಯುಗದಲ್ಲಿ ದಿನಪತ್ರಿಕೆಗಳ ಹಾಜರಾತಿಗಾಗಿ 48 ಗಂಟೆಗಳ ಕಾಲಾವಕಾಶ ಅಗತ್ಯವಿಲ್ಲ ಎನಿಸುತ್ತದೆ. ಇದಲ್ಲದೇ ಪ್ರಸಾರ ಸಂಖ್ಯೆಯ ಬಗ್ಗೆಯೂ ನಿಗಾ ವಹಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಆರಂಭದಲ್ಲಿ ಕಾರ್ಯಾಗಾರದ ಉದ್ದೇಶ ಕುರಿತು ಪ್ರಾಸ್ತಾವಿಕವಾಗಿ ಬೆಂಗಳೂರಿನ ದೂರದರ್ಶನ ಕೇಂದ್ರದ ಮುಖ್ಯಸ್ಥರಾದ ಬಿ.ಕೆ. ಕೇಶವಮೂರ್ತಿ ಅವರು ಮಾತನಾಡಿದರು,

**"ಪತ್ರಕರ್ತರು" ಯಾರು? ಎಂಬ ಸ್ಪಷ್ಟ ವ್ಯಾಖ್ಯಾನ ಅಗತ್ಯ;** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಎಂ. ಎನ್. ಅನುಚೇತ್ ಮಾತನಾಡಿ, ದಿನಪತ್ರಿಕೆಗಳ ಬೆಂಬಲಕ್ಕಾಗಿ ಸರ್ಕಾರವು ಪ್ರೋತ್ಸಾಹ ಜಾಹೀರಾತನ್ನು ನೀಡುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಪ್ರೋತ್ಸಾಹ ಜಾಹೀರಾತು ಪಡೆಯುವುದಕ್ಕಾಗಿಯೇ ದಿನಪತ್ರಿಕೆಗಳ ಹುಟ್ಟಿಕೊಳ್ಳುತ್ತಿವೆ. ಪ್ರೋತ್ಸಾಹ ಜಾಹೀರಾತಿಗಾಗಿ 2022ರಲ್ಲಿ 44 ಕೋಟಿ ರೂಪಾಯಿ ವೆಚ್ಚವಾಗಿತ್ತು. ಆದರೆ 2025-2026ರ ವೇಳೆಗೆ ಅದರ ವೆಚ್ಚ ದ್ವಿಗುಣವಾಗಿ 82 ಕೋಟಿ ರೂಪಾಯಿಗಳಾಗಿರುತ್ತದೆ. ಆದ್ದರಿಂದ ನಿಜವಾಗಿಯೂ ಪತ್ರಿಕೋದ್ಯಮ ವನ್ನೇ ವೃತ್ತಿಯಾಗಿಸಿಕೊಂಡಿರುವವರಿಗೆ ಪ್ರೋತ್ಸಾಹ ಜಾಹೀರಾತು ತಲುಪಬೇಕಿದೆ. ಹಾಗಾಗಿ ಇದಕ್ಕೆ ಕಡಿವಾಣ ಹಾಕುವ ಅಗತ್ಯವಿರುವುದರಿಂದ ರಾಜ್ಯದ ಎಲ್ಲಾ ಮಾಧ್ಯಮದವರು ಸಹಕರಿಸಬೇಕೆಂದರು.

ಸಾಮಾಜಿಕ ಜಾಲತಾಣ, ಡಿಜಿಟಲ್ ಯುಗದಲ್ಲಿ ನಿಜವಾದ ಪತ್ರಕರ್ತ ಯಾರು ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಯಾರು ಪತ್ರಕರ್ತ ಎಂಬುದರ ಬಗ್ಗೆ ರಾಷ್ಟ್ರಮಟ್ಟದಲ್ಲಿ ಗಂಭೀರ ಚರ್ಚೆಯಾಗಬೇಕಿದೆ. ಪಿಆರ್‌ಜಿಐ ಪತ್ರಿಕೆಗಳ ನೋಂದಣಿ, ನಿರ್ವಹಣೆ ಕುರಿತು ಗಮನಹರಿಸುತ್ತಿದೆ. ಆದರೆ ಇಂದಿನ ಡಿಜಿಟಲ್ ಯುಗದಲ್ಲಿ "ಪತ್ರಕರ್ತ" ಯಾರು ಎಂಬುದು ಸ್ಪಷ್ಟವಾಗಿ ವ್ಯಾಖ್ಯಾನಿಸುವ ಅಗತ್ಯವಿದೆ ಎಂದು ಆಯುಕ್ತ ಅನುಚೇತ್

# ಬೀದಿದೀಪ ಅಳವಡಿಕೆ ನಂತರ ಸ್ಥಳ ಪರಿಶೀಲನೆ ಕಡ್ಡಾಯ: ಕೃಷ್ಣ ಬೈರೇಗೌಡ

**ಬೆಂಗಳೂರು, ಅ.17:** ನಗರದಲ್ಲಿ ಎಲ್‌ಇಡಿ ಬೀದಿದೀಪಗಳ ಅಳವಡಿಕೆ ಪೂರ್ಣಗೊಂಡ ನಂತರ ಸಂಬಂಧಪಟ್ಟ ನಗರ ಪಾಲಿಕೆಗಳ ಅಧಿಕಾರಿಗಳು ಕಡ್ಡಾಯವಾಗಿ ಸ್ಥಳ ಪರಿಶೀಲನೆ ನಡೆಸಬೇಕು ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂಬಂಧ ಅಧಿಕಾರಿಗಳ ಜತೆ ವರ್ಚ್ಯುಯಲ್ ಸಭೆ ನಡೆಸಿದ ಸಚಿವರು, ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅಳವಡಿಸಲಾಗಿರುವ ಎಲ್‌ಇಡಿ ಬೀದಿದೀಪಗಳ ಗುಣಮಟ್ಟ ಮತ್ತು ಕಾರ್ಯನಿರ್ವಹಣೆ ಸ್ಥಳ ಪರಿಶೀಲನೆ ನಡೆಸುವ ಮೂಲಕ ಖಚಿತಪಡಿಸಿಕೊಳ್ಳಬೇಕು. ದೀಪಗಳನ್ನು ಸಮರ್ಪಕವಾಗಿ ಅಳವಡಿಸದಿದ್ದಲ್ಲಿ ಅಥವಾ ಅವು ಕಾರ್ಯನಿರ್ವಹಿಸದಿದ್ದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರಿಗೆ ದಂಡ ವಿಧಿಸಬೇಕು ಎಂದು ನಿರ್ದೇಶನ ನೀಡಿದರು.

ನಗರದಲ್ಲಿ ಎಲ್‌ಇಡಿ ಬೀದಿದೀಪಗಳ ಅಳವಡಿಕೆ ಹಾಗೂ ಹಳೆಯ ದೀಪಗಳ ಬದಲಾವಣೆ ಕಾರ್ಯ ಪ್ರಗತಿಯಲ್ಲಿದೆ. ಕಳೆದ ತಿಂಗಳ ಪರಿಶೀಲನೆ ಹಾಗೂ ಸತತ ಸಭೆಗಳ ನಂತರ ಬೀದಿದೀಪಗಳ ಅಳವಡಿಕೆ ಕಾರ್ಯ ಈಗಾಗಲೇ ಹಲವು ಪ್ರದೇಶಗಳಲ್ಲಿ ಪೂರ್ಣಗೊಂಡಿದೆ.

ಬೀದಿದೀಪಗಳ ಕಾರ್ಯಕ್ಷಮತೆಯೂ ಉತ್ತಮವಾಗಿರುವುದು ಸಂತೋಷದ ವಿಚಾರ. ಆದರೆ, ಈ ಪ್ರಗತಿ ಸಾಲದು. ಬಾಕಿ ಉಳಿದಿರುವ ಪ್ರದೇಶಗಳಲ್ಲೂ ಅಕ್ಟೋಬರ್ 31ರೊಳಗೆ ಅಳವಡಿಕೆ ಕಾರ್ಯವನ್ನು ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.



**ಕಾಮಗಾರಿ ಪೂರ್ಣಗೊಳಿಸುವ ವೇಳಾಪಟ್ಟಿ ಸಲ್ಲಿಸಲು ಸೂಚನೆ:**-ನಗರದಲ್ಲಿ ಬೀದಿದೀಪಗಳ ಕಾರ್ಯನಿರ್ವಹಣೆಯನ್ನು ಸ್ವಯಂಚಾಲಿತವಾಗಿ ಮೇಲ್ವಿಚಾರಣೆ ಮಾಡಲು ಕೇಂದ್ರೀಕೃತ ನಿಯಂತ್ರಣ ಮತ್ತು ಮೇಲ್ವಿಚಾರಣಾ ವ್ಯವಸ್ಥೆಯಾದ ಸಿಸಿಎಂಎಸ್(ಅಳವಡಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕಾಮಗಾರಿ ಪೂರ್ಣಗೊಳಿಸುವ ಕಾಲಮಿತಿಯ ವಿವರಗಳೊಂದಿಗೆ ವೇಳಾಪಟ್ಟಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಬೀದಿದೀಪಗಳ ನಿರ್ವಹಣೆಯ ಕುರಿತು ನಿರಂತರ ಮೇಲ್ವಿಚಾರಣೆ ನಡೆಸುತ್ತಿರುವುದರಿಂದ ಸುಧಾರಣೆ ಕಂಡುಬರುತ್ತಿದೆ. ಸಹಾಯ 2.0 ತಂತ್ರಾಂಶದಲ್ಲಿ ಬೀದಿದೀಪಗಳಿಗೆ ಸಂಬಂಧಿಸಿದಂತೆ ದಾಖಲಾಗುತ್ತಿರುವ ದೂರುಗಳ ಸಂಖ್ಯೆಯೂ ಕ್ರಮೇಣ ಇಳಿಕೆಯಾಗುತ್ತಿದೆ. ಬೀದಿದೀಪಗಳ ನಿರ್ವಹಣೆಯಲ್ಲಿ ವಿಫಲವಾದ ಗುತ್ತಿಗೆದಾರರಿಗೆ ರೂ. 93.67 ಲಕ್ಷ ದಂಡ ವಿಧಿಸಲಾಗಿದೆ ಎಂದು ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು.



ಮೈಸೂರಿನಲ್ಲಿ ಶನಿವಾರ ದಸರಾ ಹಬ್ಬದ ಅಂಗವಾಗಿ, ಸಾಂಪ್ರದಾಯಿಕ ಉಡುಪು ಧರಿಸಿದ ದಂಪತಿಗಳಿಗಾಗಿ ಒಂದು ವಿಶಿಷ್ಟವಾದ 'ಪಾರಂಪರಿಕ ಟಾಂಗಾ ಸವಾರಿ'ಯನ್ನು ಆಯೋಜಿಸಲಾಗಿತ್ತು.

# ವಾಲ್ಮೀಕಿ ಜಯಂತಿ ಅರ್ಥಪೂರ್ಣ ಆಚರಣೆಗೆ ನಿರ್ಧಾರ: ರಘುಮೂರ್ತಿ

**ಬೆಂಗಳೂರು, ಅ.17:** ಮಹರ್ಷಿ ವಾಲ್ಮೀಕಿಯವರ ಆದರ್ಶಗಳು, ಜೀವನ ಸಂದೇಶ ಹಾಗೂ ಕೊಡುಗೆಗಳನ್ನು ಜನರಿಗೆ ಪರಿಚಯಿಸುವ ನಿಟ್ಟಿನಲ್ಲಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವ ಟಿ.ರಘುಮೂರ್ತಿ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ ಸಚಿವರ ಅಧ್ಯಕ್ಷತೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯ ಕುರಿತು ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಪರಿಶಿಷ್ಟ ಪಂಗಡಗಳ ಸಮುದಾಯದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಬೇಡಿಕೆಗಳ ಕುರಿತು ಅಧಿಕಾರಿಗಳು ಹಾಗೂ ಸಮುದಾಯದ ಮುಖಂಡರೊಂದಿಗೂ ಸಮಾಲೋಚನೆ ನಡೆಸಿದರು.

ಇದೇ ಸಂದರ್ಭದಲ್ಲಿ ಪರಿಶಿಷ್ಟ ಪಂಗಡಗಳ ಸಮುದಾಯದ ಪ್ರಮುಖ ಹಬ್ಬಗಳು, ಜಯಂತಿಗಳು ಹಾಗೂ



ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಗೌರವಯುತವಾಗಿ ಆಚರಿಸಲು ಅಗತ್ಯ ಪ್ರೋತ್ಸಾಹ ಮತ್ತು ಸಹಕಾರ ನೀಡುವಂತೆ ಮುಖಂಡರು ಮನವಿ ಮಾಡಿದರು.

ಬೆಂಗಳೂರಿನ ಶಾಸಕರ ಭವನದಲ್ಲಿರುವ ವಾಲ್ಮೀಕಿ ಉದ್ಯಾನದಲ್ಲಿ ಮಹರ್ಷಿ ವಾಲ್ಮೀಕಿಯವರ ಜೀವನ ಚರಿತ್ರೆ, ಆದರ್ಶಗಳು ಹಾಗೂ ಮಹತ್ವದ ಸಂದೇಶಗಳನ್ನು ಸಾರುವ ಸುಂದರ ಉದ್ಯಾನವನ ನಿರ್ಮಿಸುವ ಉದ್ದೇಶದಿಂದ ಸಿದ್ಧಪಡಿಸಲಾದ ಸಾಕ್ಷ್ಯಚಿತ್ರವನ್ನು ಸಭೆಯಲ್ಲಿ ಪ್ರದರ್ಶಿಸಲಾಯಿತು. ಬೆಂಗಳೂರಿನ ವಿಧಾನಸೌಧದ ಸಮೀಪ ಸೂಕ್ತ ಸ್ಥಳ ಗುರುತಿಸಿ ವಾಲ್ಮೀಕಿ ಭವನ ನಿರ್ಮಿಸಬೇಕು, ಪರಿಶಿಷ್ಟ ಪಂಗಡಗಳ ಸಮುದಾಯದ ಮೀಸಲಾತಿ ಹೆಚ್ಚಳದ ವಿಚಾರವನ್ನು ಸಭೆಯಲ್ಲಿ ಮುಖಂಡರು ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಟಿ. ರಘುಮೂರ್ತಿ ಅವರು, ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದ ಬೇಡಿಕೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸರ್ಕಾರದೊಂದಿಗೆ ಚರ್ಚಿಸಿ, ಸೂಕ್ತ ಪರಿಶೀಲನೆಯ ಬಳಿಕ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪರಿಶಿಷ್ಟ ಪಂಗಡಗಳ ವಿಶ್ವವಿದ್ಯಾಲಯದ ಅಭಿವೃದ್ಧಿ ಹಾಗೂ ಸಮುದಾಯದ ಇತಿಹಾಸ, ಪರಂಪರೆ, ಸಂಸ್ಕೃತಿ ಮತ್ತು ಜೀವನಶೈಲಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ವಸ್ತುಸಂಗ್ರಹಾಲಯದ ಅಭಿವೃದ್ಧಿಯ ಬಗ್ಗೆಯೂ ಸಮಾಲೋಚನೆ ನಡೆಸಲಾಗಿದ್ದು, ಈ ಕುರಿತ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಚಿವ ಟಿ. ರಘುಮೂರ್ತಿ ಭರವಸೆ ನೀಡಿದರು.

## ಐಸಿಎಸ್‌ಐ ಇನ್ವೆಸ್ಟ್ ಇಂಡಿಯಾ ಶೃಂಗಸಭೆಯ ಉದ್ದೇಶ

# ಕಾರ್ಯತಂತ್ರದ ಹೂಡಿಕೆಗಳ ಮೂಲಕ ವಿಕಸಿತ ಭಾರತ ನಿರ್ಮಾಣಕ್ಕೆ ಒತ್ತು

**ಬೆಂಗಳೂರು, ಅ. 17:** ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ (ಐಸಿಎಸ್‌ಐ) ಯಿಂದ ಕಾರ್ಯತಂತ್ರದ ಹೂಡಿಕೆಗಳ ಮೂಲಕ ವಿಕಸಿತ ಭಾರತ ನಿರ್ಮಾಣ ಎಂಬ ವಿಷಯದಡಿ ಐಸಿಎಸ್‌ಐ ಇನ್ವೆಸ್ಟ್ ಇಂಡಿಯಾ ಶೃಂಗಸಭೆಯನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು.

ಇನ್ಫೋಸಿಸ್ ಮತ್ತು ಆಕ್ಸಿಲರ್ ವೆಂಚರ್ಸ್‌ನ ಸಹಸಂಸ್ಥಾಪಕ ಹಾಗೂ ಬೆಂಗಳೂರಿನ ಇನ್ನೋವೇಷನ್ಸ್ ಇನ್ವೆಸ್ಟ್‌ಮೆಂಟ್ ಮ್ಯಾನೇಜ್‌ಮೆಂಟ್‌ನ ಅಧ್ಯಕ್ಷರಾದ ಎಸ್.ಡಿ. ಶಿಬುಲಾಲ್ ಅವರು ಶೃಂಗಸಭೆಗೆ ಚಾಲನೆ ನೀಡಿದರು.

ಐಸಿಎಸ್‌ಐನ ಬೆಂಗಳೂರು ಘಟಕದ ಆತಿಥ್ಯದಲ್ಲಿ ನಡೆದ ಈ ಶೃಂಗಸಭೆಯಲ್ಲಿ ಸ್ಟಾರ್ಟ್‌ಅಪ್‌ಗಳು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್‌ಎಂಇ), ಯೂನಿಕಾರ್ನ್ ಕಂಪನಿಗಳು, ಕಾರ್ಪೊರೇಟ್ ಸಂಸ್ಥೆಗಳು, ವೆಂಚರ್ ಕ್ಯಾಪಿಟಲ್ ಫಂಡ್‌ಗಳು, ಖಾಸಗಿ ಈಕ್ವಿಟಿ ನಿಧಿಗಳು, ಏಂಜೆಲ್ ಹೂಡಿಕೆದಾರರು, ಪಿಂಚಣಿ ನಿಧಿಗಳು, ಪರ್ಯಾಯ ಹೂಡಿಕೆ ನಿಧಿಗಳು, ಸಾಂಸ್ಥಿಕ ಹೂಡಿಕೆದಾರರು, ವಿಮಾ ಕಂಪನಿಗಳು, ಆಸ್ತಿ ನಿರ್ವಹಣಾ ಕಂಪನಿಗಳು, ಉದ್ಯಮಶೀಲತೆಯ ಬೆಳವಣಿಗೆಗೆ ಪೂರಕವಾದ ಸಂಸ್ಥೆಗಳು, ಶಿಕ್ಷಣ ತಜ್ಞರು, ಮಾರ್ಗದರ್ಶಕರು ಹಾಗೂ ಉದ್ಯಮ ಕ್ಷೇತ್ರದ ತಜ್ಞರು ಭಾಗವಹಿಸಿದ್ದರು.




ಭಾರತದ ಆರ್ಥಿಕ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಸಂವಾದಕ್ಕೆ ವೇದಿಕೆ ಕಲ್ಪಿಸುವುದು, ನಾವೀನ್ಯತೆಗೆ ಉತ್ತೇಜನ ನೀಡುವುದು ಮತ್ತು ಪಾಲುದಾರಿಕೆಯನ್ನು ಬಲಪಡಿಸುವುದು ಶೃಂಗಸಭೆಯ ಪ್ರಮುಖ ಉದ್ದೇಶವಾಗಿತ್ತು.

ಐಸಿಎಸ್‌ಐ ಇನ್ವೆಸ್ಟ್ ಇಂಡಿಯಾ ಶೃಂಗಸಭೆ ಉದ್ಘಾಟಿಸಿ ಮಾತನಾಡಿದ ಎಸ್.ಡಿ. ಶಿಬುಲಾಲ್, ಬಂಡವಾಳ ಮುಖ್ಯ. ಆದರೆ, ಆ ಹೂಡಿಕೆಯಿಂದ ನಾವು ಏನನ್ನು ನಿರ್ಮಿಸುತ್ತೇವೆ ಎಂಬುದು ಅದಕ್ಕಿಂತಲೂ ಹೆಚ್ಚು ಮಹತ್ವದ್ದಾಗಿದೆ ಎಂದು ಅಭಿಪ್ರಾಯಪಟ್ಟರು.

ಉನ್ನತ ಮಟ್ಟದ ಕಾರ್ಪೊರೇಟ್ ಆಡಳಿತ ವ್ಯವಸ್ಥೆಯನ್ನು ಅನುಸರಿಸದೆ ಹಾಗೂ ಪಾಲುದಾರರೊಂದಿಗೆ ಗರಿಷ್ಠ ವಿಶ್ವಾಸವನ್ನು ಬೆಳೆಸಿಕೊಳ್ಳದೆ ಯಾವುದೇ ಕಂಪನಿಯೂ ದೀರ್ಘಕಾಲ ಉಳಿಯಲು ಸಾಧ್ಯವಿಲ್ಲ ಎಂದರು.

ಪಾಲುದಾರರ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ವೃತ್ತಿಪರರು ಕಂಪನಿಗಳ ಆಡಳಿತ ಮಂಡಳಿಯಲ್ಲಿ ಸೂಕ್ತ ಮಾರ್ಗದರ್ಶನ ನೀಡುವ ಧ್ವನಿಯಾಗಬೇಕು ಎಂದು ಅವರು ಕರೆ ನೀಡಿದರು.

ಭಾರತದಲ್ಲಿ ವೇಗವಾಗಿ ಬದಲಾಗುತ್ತಿರುವ ಹೂಡಿಕೆ ವಲಯದ ಮೇಲೆ ಬೆಳಕು ಚೆಲ್ಲಿದ ಈ ವಿಶಿಷ್ಟ ಕಾರ್ಯಕ್ರಮದಲ್ಲಿ ಆನ್‌ಲೈನ್ ಮತ್ತು ನೇರವಾಗಿ ಭಾಗವಹಿಸಿದವರೂ ಸೇರಿದಂತೆ 500 ಮಂದಿ ಪಾಲ್ಗೊಂಡಿದ್ದರು. ಸ್ಟಾರ್ಟ್‌ಅಪ್‌ಗಳು ಯಶಸ್ವಿಯಾಗಿ ಬೆಳವಣಿಗೆ ಹೊಂದಿ ದೊಡ್ಡ ಉದ್ಯಮಗಳಾಗಿ ರೂಪುಗೊಳ್ಳುವಲ್ಲಿ ಉತ್ತಮ ಆಡಳಿತ ವ್ಯವಸ್ಥೆಯು ವಹಿಸುವ ನಿರ್ಣಾಯಕ ಪಾತ್ರವನ್ನು ಈ ಶೃಂಗಸಭೆ ಪ್ರಮುಖವಾಗಿ ಬಿಂಬಿಸಿತು.

ಶೃಂಗಸಭೆಯ ಭಾಗವಾಗಿ ಹೂಡಿಕೆದಾರರು ಮತ್ತು ಯಶಸ್ವಿ ಸ್ಟಾರ್ಟ್‌ಅಪ್‌ಗಳ ಪ್ರಾಯೋಗಿಕ ಒಳನೋಟಗಳು? ಎಂಬ ವಿಷಯದ ಕುರಿತು ಸಂವಾದಾತ್ಮಕ ಅಧಿವೇಶನವನ್ನೂ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರಿಗೆ ಕೃತಜ್ಞತೆ ಸಲ್ಲಿಸಿದ ಐಸಿಎಸ್‌ಐ ಕಾರ್ಯದರ್ಶಿ ಸಿಎಸ್ ಆಶೀಶ್ ಮೋಹನ್ ಅವರು, ಕಾರ್ಯಕ್ರಮದ ಆಶಯವನ್ನು ಪ್ರತಿಬಿಂಬಿಸುತ್ತಾ, ಹೂಡಿಕೆ ಎಂದರೆ ಕೇವಲ ಬಂಡವಾಳವಲ್ಲ; ಅದು ಕನಸುಗಳು ಮತ್ತು ಆಲೋಚನೆಗಳಿಗೆ ಜೀವ ತುಂಬುವ, ತಾಂತ್ರಿಕ ಪ್ರಗತಿಗೆ ದಾರಿ ಮಾಡಿಕೊಡುವ ಹಾಗೂ ಸುಸ್ಥಿರ ಬೆಳವಣಿಗೆಯ ಮೂಲಕ ಬಲಿಷ್ಠ ವಿಕಸಿತ ಭಾರತ ನಿರ್ಮಾಣಕ್ಕೆ ನೆರವಾಗುವ ವೇಗವರ್ಧಕವಾಗಿದೆ ಎಂದು ಹೇಳಿದರು.

ಐಸಿಎಸ್‌ಐ ಬೆಂಗಳೂರು ಘಟಕದ ಅಧ್ಯಕ್ಷ ಸಿಎಸ್ ವಿಶ್ವಾಸ್ ಹೆಗ್ಡೆ ಅವರು ಕೂಡ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

# ಸರ್ಕಾರಿ ಅಧಿಕಾರಿಗಳಿಗೆ ಗೌರವಧನ: ಸಚಿವರಿಗೆ ಸಂಕಷ್ಟ

**ಮುಖ್ಯಕಾರ್ಯದರ್ಶಿಗೆ ವರದಿ ಕೇಳಿ ರಾಜ್ಯಪಾಲರ ಪತ್ರ: ಅಬಕಾರಿ ಸಚಿವ ಕೆ.ಎಂ. ಶಿವಲಿಂಗೇಗೌಡರಿಗೆ ರಾಜಕೀಯ ಸಂಕಷ್ಟ ಸಾಧ್ಯತೆ?**

**ಬೆಂಗಳೂರು, ಅ.17:** ಸರ್ಕಾರಿ ಅಧಿಕಾರಿಗಳಿಗೆ ಗೌರವಧನ ನೀಡುವ ಕುರಿತು ನೀಡಿದ್ದ ಹೇಳಿಕೆ ಅಬಕಾರಿ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರಿಗೆ ರಾಜಕೀಯವಾಗಿ ಮತ್ತಷ್ಟು ಸಂಕಷ್ಟ ತಂದೊಡ್ಡುವ ಸಾಧ್ಯತೆ ಕಂಡುಬಂದಿದೆ. ಕೆಲವು ವಾರಗಳ ಹಿಂದೆ ರಾಜ್ಯಾದ್ಯಂತ ವ್ಯಾಪಕ ಚರ್ಚೆ ಹಾಗೂ ವಿವಾದಕ್ಕೆ ಕಾರಣವಾಗಿದ್ದ ಸಚಿವರ ಹೇಳಿಕೆಗೆ ಸಂಬಂಧಿಸಿದಂತೆ ರಾಜ್ಯಪಾಲ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ವರದಿ ಕೇಳಿರುವುದು ಮಹತ್ವದ ಬೆಳವಣಿಗೆಯಾಗಿದೆ.

ಸಕಲೇಶಪುರದಲ್ಲಿ ನಡೆದಿದ್ದ ಪ್ರಜಾಸೇವೆ ಆಂದೋಲನದ ಸಭೆಯಲ್ಲಿ ಸಚಿವ ಶಿವಲಿಂಗೇಗೌಡ ಅವರು ಅಧಿಕಾರಿಗಳಿಗೆ ಗೌರವಯುತವಾಗಿ ಹಣ ನೀಡುವ ಕುರಿತು ಮಾತನಾಡಿದ್ದು, ಈ ಹೇಳಿಕೆ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು. ಸರ್ಕಾರಿ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸಲು ಈಗಾಗಲೇ ವೇತನ ಪಡೆಯುತ್ತಿರುವಾಗ, ಜನರು ಹೆಚ್ಚುವರಿಯಾಗಿ ಹಣ ನೀಡಬೇಕೆಂಬ ಸಂದೇಶವನ್ನು ಸಚಿವರು ನೀಡುತ್ತಿದ್ದಾರೆಯೇ ಎಂಬ ಪ್ರಶ್ನೆ ಸಭೆಯಲ್ಲೇ ಎದ್ದಿತ್ತು. ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿ ರಾಜಕೀಯ ವಲಯದಲ್ಲೂ ಚರ್ಚೆಗೆ ಗ್ರಾಸವಾಗಿತ್ತು.

ಸಚಿವರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿದ್ದ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಅವರು ರಾಜ್ಯಪಾಲರಿಗೆ ದೂರು ಸಲ್ಲಿಸಿದ್ದರು. ಸಚಿವರ ಹೇಳಿಕೆಯು ಭ್ರಷ್ಟಾಚಾರಕ್ಕೆ ಉತ್ತೇಜನ ನೀಡುವಂತಿದೆ ಎಂದು ಆಕ್ಷೇಪಿಸಿದ್ದ ಅವರು, ಈ ಪ್ರಕರಣವನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದರು. ಭ್ರಷ್ಟಾಚಾರ ತಡೆ ಕಾಯ್ದೆಯ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿಯೂ ಕ್ರಮ ಕೈಗೊಳ್ಳುವಂತೆ ಅವರು



ಒತ್ತಾಯಿಸಿದ್ದರು. ಇದೀಗ ಈ ದೂರಿನ ಹಿನ್ನೆಲೆಯಲ್ಲಿ ರಾಜ್ಯಪಾಲರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ವರದಿ ಕೇಳಿರುವುದು ಪ್ರಕರಣಕ್ಕೆ ಹೊಸ ತಿರುವು ನೀಡಿದೆ. ಸರ್ಕಾರದಿಂದ ಸಲ್ಲಿಕೆಯಾಗುವ ವರದಿಯಲ್ಲಿ ಏನೆಲ್ಲ ಅಂಶಗಳು ಇರಲಿವೆ, ಸಚಿವರ ಹೇಳಿಕೆಯನ್ನು ಸರ್ಕಾರ ಯಾವ ರೀತಿಯಲ್ಲಿ ಪರಿಗಣಿಸಲಿದೆ ಎಂಬ ಕುತೂಹಲ ಮೂಡಿದೆ.

ವಿವಾದ ತೀವ್ರಗೊಂಡ ಬೆನ್ನಲ್ಲೇ ಸಚಿವ ಶಿವಲಿಂಗೇಗೌಡ ಅವರು ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿದ್ದರು. ಅಧಿಕಾರಿಗಳಿಗೆ ಲಂಚ ನೀಡುವಂತೆ ತಾವು ಹೇಳಿಲ್ಲ; ಕೆಲಸ ಮಾಡಿಕೊಟ್ಟ ಅಧಿಕಾರಿಗಳೊಂದಿಗೆ ಗೌರವದಿಂದ ನಡೆದುಕೊಳ್ಳಬೇಕು ಎಂಬ ಅರ್ಥದಲ್ಲಿ ಮಾತನಾಡಿದ್ದಾಗಿ ಅವರು ಸಮರ್ಥಿಸಿಕೊಂಡಿದ್ದರು. ತಮ್ಮ ಮಾತುಗಳನ್ನು ತಪ್ಪಾಗಿ ಅರ್ಥೈಸಲಾಗಿದೆ ಹಾಗೂ ಹೇಳಿಕೆಯ ಒಂದು ಭಾಗವನ್ನಷ್ಟೇ ಪ್ರಸಾರ ಮಾಡಲಾಗುತ್ತಿದೆ ಎಂಬ ಆಕ್ಷೇಪವನ್ನೂ ವ್ಯಕ್ತಪಡಿಸಿದ್ದರು.

**ಮುಂದೇನು?**

ರಾಜ್ಯಪಾಲರು ವರದಿ ಕೇಳಿರುವುದರಿಂದಲೇ ಸಚಿವರ ವಿರುದ್ಧದ ಆರೋಪಗಳು ಸಾಬೀತಾಗಿವೆ ಅಥವಾ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಅರ್ಥವಲ್ಲ. ಸರ್ಕಾರದ ಮುಖ್ಯ ಕಾರ್ಯದರ್ಶಿ ಸಲ್ಲಿಸುವ ವರದಿ ಮತ್ತು ಅದರಲ್ಲಿರುವ ಅಂಶಗಳ ಆಧಾರದ ಮೇಲೆ ಮುಂದಿನ ಬೆಳವಣಿಗೆಗಳು ನಿರ್ಧಾರವಾಗುವ ಸಾಧ್ಯತೆಯಿದೆ.

ಒಟ್ಟಿನಲ್ಲಿ, ಸಾರ್ವಜನಿಕ ಸಭೆಯಲ್ಲಿ ನೀಡಿದ ಒಂದು ಹೇಳಿಕೆ ಈಗ ಸಾಂವಿಧಾನಿಕ ಪ್ರಕ್ರಿಯೆಯ ಹಂತಕ್ಕೆ ತಲುಪಿರುವುದು ಸಚಿವ ಶಿವಲಿಂಗೇಗೌಡ ಅವರಿಗೆ ರಾಜಕೀಯವಾಗಿ ಮುಜುಗರ ತಂದಿದೆ.

# ಗೂಗಲ್ ಮ್ಯಾಪ್ ನಂಬಿ ಅರಣ್ಯದಲ್ಲಿ ಸಿಲುಕಿದ ಟೆಕ್ಕಿಗಳು

**ಬೆಂಗಳೂರು, ಅ.17:** ನವರಾತ್ರಿ ಉತ್ಸವವನ್ನು ಕಣ್ತುಂಬಿಕೊಳ್ಳಲು ಬೆಂಗಳೂರಿನಿಂದ ಮೈಸೂರಿಗೆ ತೆರಳಿ, ಬಳಿಕ ಚೆನ್ನೈಗೆ ಪ್ರಯಾಣಿಸುತ್ತಿದ್ದ ಒಂಬತ್ತು ಮಂದಿ ಟೆಕ್ಕಿಗಳು ಗೂಗಲ್ ಮ್ಯಾಪ್ ನಂಬಿ ದಟ್ಟ ಕಾಡಿನೊಳಗೆ ಸಿಲುಕಿಕೊಂಡ ಘಟನೆ ವರದಿಯಾಗಿದೆ.

ಗೂಗಲ್ ಮ್ಯಾಪ್ ತೋರಿಸಿದ ಮಾರ್ಗದಲ್ಲಿ ಸಂಚರಿಸಿ ಸೇತುವೆಯಿಂದ ಕಾರು ಕೆಳಗೆ ಬಿದ್ದ ಘಟನೆ ಮಾಸುವ ಮುನ್ನವೇ ಮತ್ತೊಂದು ಇಂತಹ ಘಟನೆ ನಡೆದಿರುವುದು, ಗೂಗಲ್ ಮ್ಯಾಪ್ ಮಾರ್ಗದರ್ಶನವನ್ನು ಎಷ್ಟು ನಂಬಬಹುದು ಎಂಬ ಪ್ರಶ್ನೆಯನ್ನು ಹುಟ್ಟುಹಾಕಿದೆ.

ಬೆಂಗಳೂರಿನ ಸಾಫ್ಟ್‌ವೇರ್ ಎಂಜಿನಿಯರ್‌ಗಳಾದ ರೋಜರ್ ಪ್ರಿನ್ಸ್, ಮಣಿ, ಪ್ರಿನ್ಸ್ ಮಾರ್ಟಿನ್, ಅರಿವುಮತಿ, ಗಣ, ಶರ್ಮಿಳಾ, ತ್ರಿಷಾ, ಬೊಪೇಶ್ ಹಾಗೂ ಜೋಸಯ್ಯ ಕಾರಿನಲ್ಲಿ ಮೈಸೂರಿಗೆ ಪ್ರಯಾಣಿಸಿದ್ದರು.

ಮೈಸೂರಿನಲ್ಲಿ ನವರಾತ್ರಿ ಉತ್ಸವವನ್ನು ವೀಕ್ಷಿಸಿದ ಬಳಿಕ ಈ ತಂಡ ಚೆನ್ನೈಗೆ ತೆರಳುತ್ತಿತ್ತು. ಚಾಮರಾಜನಗರ ಮಾರ್ಗವಾಗಿ ದಿಂಬಂ ಘಾಟ್ ಮೂಲಕ ಚೆನ್ನೈಗೆ ಪ್ರಯಾಣಿಸುತ್ತಿದ್ದಾಗ ರಾತ್ರಿ ಆಗಿದ್ದರಿಂದ ರಸ್ತೆಯನ್ನು ಗುರುತಿಸಲು ಕಷ್ಟವಾಗಿದೆ. ಈ ವೇಳೆ ಅವರು ಗೂಗಲ್ ಮ್ಯಾಪ್ ಸಹಾಯ ಪಡೆದಿದ್ದಾರೆ.

ಗೂಗಲ್ ಮ್ಯಾಪ್ ದಟ್ಟ ಕಾಡಿನ ಒಳಭಾಗದ ರಸ್ತೆಯನ್ನು ತೋರಿಸಿದ್ದು, ಅದೇ ಮಾರ್ಗದಲ್ಲಿ ಸಾಗಿದ ಕಾರು ರಸ್ತೆಬದಿಯ ಕಂದಕದಲ್ಲಿ ಸಿಲುಕಿಕೊಂಡಿದೆ. ಪರಿಣಾಮ, ರಾತ್ರಿ ಇಡೀ ಕಾಡಿನಲ್ಲೇ ಕಳೆಯುವ ಪರಿಸ್ಥಿತಿ ಎದುರಾಗಿದೆ.

ಈ ಸಂದರ್ಭದಲ್ಲಿ ಕಾಡಾನೆಯ ಘೀಳಿಡುವ ಶಬ್ದ ಕೇಳಿಬಂದಿದ್ದರಿಂದ ಆತಂಕಗೊಂಡ ಟೆಕ್ಕಿಗಳು ಕಾರಿನಿಂದ ಕೆಳಗಿಳಿಯದೆ ಅದರೊಳಗೇ ಉಳಿದುಕೊಂಡಿದ್ದಾರೆ.

ಬೆಳಗಾಗುವವರೆಗೂ ದಟ್ಟ ಕಾಡಿನಲ್ಲಿ ಕಾಲ ಕಳೆದ ತಂಡ ಬಳಿಕ ಪೊಲೀಸರಿಗೆ ಮಾಹಿತಿ ನೀಡಿದೆ. ವಿಷಯ ತಿಳಿದು ಅಗ್ನಿಶಾಮಕ ಸಿಬ್ಬಂದಿ ಹಾಗೂ ತಮಿಳುನಾಡು ಪೊಲೀಸರು ಸ್ಥಳಕ್ಕೆ ಆಗಮಿಸಿ ಕಂದಕದಲ್ಲಿ ಸಿಲುಕಿದ್ದ ಕಾರನ್ನು ಮೇಲಕ್ಕೆ ಎತ್ತಿದ್ದಾರೆ. ನಂತರ ಪೊಲೀಸರು ಒಂಬತ್ತು ಮಂದಿ ಟೆಕ್ಕಿಗಳನ್ನು ಸುರಕ್ಷಿತವಾಗಿ ಕಳುಹಿಸಿಕೊಟ್ಟಿದ್ದಾರೆ.

# ಬಾಂಬೇ ಬಾಯ್ಸ್ ಪುಸ್ತಕ ಪ್ರಕಟವಾದರೆ ಸಂಕಷ್ಟಕ್ಕೆ ಸಿಲುಕಲಿದ್ದಾರೆ ಪ್ರಮುಖ ರಾಜಕೀಯ ಪಕ್ಷಗಳ ನಾಯಕರು: ಎಚ್.ವಿಶ್ವನಾಥ್

**ಬೆಂಗಳೂರು, ಅ.17:** ಬಾಂಬೇ ಬಾಯ್ಸ್ ಪುಸ್ತಕ ಪ್ರಕಟವಾದರೆ ರಾಜ್ಯದ ಮೂರೂ ಪ್ರಮುಖ ರಾಜಕೀಯ ಪಕ್ಷಗಳ ಹಿರಿಯ ನಾಯಕರು ಸಂಕಷ್ಟಕ್ಕೆ ಸಿಲುಕಲಿದ್ದಾರೆ ಎಂದು ಹಿರಿಯ ರಾಜಕಾರಣಿ, ಮಾಜಿ ಸಚಿವ ಎಚ್. ವಿಶ್ವನಾಥ್ ಹೊಸ ಬಾಂಬ್ ಸಿಡಿಸಿದ್ದಾರೆ.

ರಾಜ್ಯ ರಾಜಕೀಯದಲ್ಲಿ ಚರ್ಚೆಗೆ ಕಾರಣವಾಗಿರುವ ಸ್ಟಿಂಗ್ ಆಪರೇಷನ್ ಕುರಿತು ಮೊದಲ ಬಾರಿಗೆ ಪ್ರತಿಕ್ರಿಯಿಸಿರುವ ಅವರು, ರಾಜಕೀಯದಲ್ಲಿ ಭಿನ್ನಾಭಿಪ್ರಾಯಗಳು ಸಹಜ. ಆದರೆ, ವ್ಯಕ್ತಿಯೊಬ್ಬರ ರಾಜಕೀಯ ಬೆಳವಣಿಗೆಯನ್ನು ಕುಗ್ಗಿಸಲು ಈ ರೀತಿಯ ತಂತ್ರಗಳನ್ನು ಬಳಸುವುದು ಸರಿಯಲ್ಲ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಮುಗಿಸಿ ದರೆ ತಮ್ಮ ರಾಜಕೀಯ ಹಾದಿ ಸುಗಮ ವಾಗಲಿದೆ ಎಂಬ ಲೆಕ್ಕಾಚಾರ ಕೆಲವು ರಾಜಕಾರಣಿಗಳಲ್ಲಿದೆ. ಇದೇ ಕಾರಣಕ್ಕೆ ಅವರ ವಿರುದ್ಧ ಸ್ಟಿಂಗ್ ಆಪರೇಷನ್ ಮೂಲಕ ಮಾನಹಾನಿ ಮಾಡುವ ಪ್ರಯತ್ನಗಳು ನಡೆಯುತ್ತಿವೆ ಎಂದು ಆರೋಪಿಸಿದ್ದಾರೆ.

ಸಿದ್ದರಾಮಯ್ಯ ಅವರು ಎರಡು ಬಾರಿ ಮುಖ್ಯಮಂತ್ರಿಯಾಗಿರುವ



ಹಿರಿಯ ರಾಜಕಾರಣಿ. ಅವರೊಂದಿಗೆ ತಮಗೂ ಹಲವು ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೆ, ಆ ಭಿನ್ನಾಭಿಪ್ರಾಯಗಳಿಗೂ ವ್ಯಕ್ತಿಯ ಮಾನಹಾನಿಗೂ ಸಂಬಂಧವಿಲ್ಲ. ರಾಜಕೀಯದಲ್ಲಿ ಬೆಳೆಯುವುದು ಸುಲಭವಲ್ಲ. ಹೀಗಿರುವಾಗ ಬೆಳೆದ ನಾಯಕರನ್ನು ಈ ರೀತಿಯಲ್ಲಿ ತುಳಿಯಲು ಪ್ರಯತ್ನಿಸುವುದು ಎಷ್ಟು ಸರಿ ಎಂದು ಅವರು ಪ್ರಶ್ನಿಸಿದ್ದಾರೆ.

ಇದೇ ವೇಳೆ, ತಮ್ಮ ಬಾಂಬೆ ಬಾಯ್ಸ್ ಪುಸ್ತಕ ಪ್ರಕಟವಾದರೆ ರಾಜ್ಯದ ಮೂರೂ ಪ್ರಮುಖ ರಾಜಕೀಯ ಪಕ್ಷಗಳ ಹಿರಿಯ ನಾಯಕರು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಎಲ್ಲರೂ ಗಾಜಿನ ಮನೆಯಲ್ಲೇ ಕುಳಿತಿದ್ದಾರೆ. ಸಾರ್ವಜನಿಕರಿಗೆ ರಾಜಕೀಯದ ಒಳಸುಳಿಗಳು ಅರ್ಥವಾಗುತ್ತವೆ, ಜನರನ್ನು ದಡ್ಡರೆಂದು ಭಾವಿಸಬಾರದು ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳು ತಲೆತಗ್ಗಿಸುವಂತಿವೆ ಎಂದಿರುವ ಅವರು, ಸ್ಟಿಂಗ್ ಆಪರೇಷನ್‌ಗಳ ಮೂಲಕ ವಿರೋಧ ಪಕ್ಷದವರು ಮತ್ತು ಸ್ವಪಕ್ಷದವರೇ ಪರಸ್ಪರ ಕೆಸರೆರಚಾಟದಲ್ಲಿ ತೊಡಗಿರುವುದು ಅವಮಾನಕರ ಸಂಗತಿ ಎಂದು ಟೀಕಿಸಿದ್ದಾರೆ. ತಾನೂ ರಾಜಕೀಯ ವ್ಯವಸ್ಥೆಯ ಭಾಗವಾಗಿದ್ದವನು ಎಂಬುದನ್ನು ಒಪ್ಪಿಕೊಂಡಿರುವ ವಿಶ್ವನಾಥ್, ಕ್ಷುಲ್ಲಕ ವಿಚಾರಗಳನ್ನು ರಾಜಕೀಯಕ್ಕೆ ಎಳೆದು ತಂದು ಸಮಾಜದ ವಾತಾ ವರಣವನ್ನು ಹಾಳು ಮಾಡುವುದು ಬೇಡ ಎಂಬ ಕಾರಣಕ್ಕೆ ಇಷ್ಟು ದಿನ ಮೌನವಾಗಿದ್ದೆ ಎಂದು ತಿಳಿಸಿದ್ದಾರೆ.

ಒಟ್ಟಿನಲ್ಲಿ, ಸಿದ್ದರಾಮಯ್ಯ ವಿರುದ್ಧದ ಸ್ಟಿಂಗ್ ಆಪರೇಷನ್ ಕುರಿತು ವಿಶ್ವನಾಥ್ ನೀಡಿರುವ ಹೇಳಿಕೆ ರಾಜ್ಯ ರಾಜಕೀಯದಲ್ಲಿ ಹೊಸ ಚರ್ಚೆಗೆ ನಾಂದಿ ಹಾಡಿದೆ. ಸ್ಟಿಂಗ್ ಆಪರೇಷನ್ ಹಿಂದಿನ ಉದ್ದೇಶ ಮತ್ತು ಬಾಂಬೆ ಬಾಯ್ಸ್ ಪುಸ್ತಕದಲ್ಲಿ ಏನಿರಬಹುದು ಎಂಬ ಕುತೂಹಲವೂ ಹೆಚ್ಚು ಹರಿದಾಡುತ್ತಿದೆ.

# ಕಮ್ಮ ಜನಾಂಗದಿಂದ ಸಾಂಸ್ಕೃತಿಕ ವೈಭವದ "ಸಂಸ್ಕೃತಿ"

## ಕಾರ್ಯಕ್ರಮ:ಗಮನ ಸೆಳೆದ ಮಕ್ಕಳ ಪ್ರತಿಭಾ ಪ್ರದರ್ಶನ, ನಗೆಕೂಟ

**ಬೆಂಗಳೂರು, ಅ.17:** ಕನಕಪುರ ರಸ್ತೆಯ ವಾಜರಹಳ್ಳಿಯಲ್ಲಿ ಕಮ್ಮ ಸಮುದಾಯದಿಂದ "ಸಂಸ್ಕೃತಿ" ವೈಭವದ ಸಾಂಸ್ಕೃತಿಕ ಪ್ರದರ್ಶನ ಆಯೋಜಿಸಲಾಗಿತ್ತು. ಕೆ.ಎಸ್.ಐ.ಟಿ ಸಿಲ್ವರ್ ಜೂಬಿಲಿ ಆಡಿಟೋರಿಯಂನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಮ್ಮ ಜನಾಂಗದ ವಿವಿಧ ಸಂಪ್ರದಾಯ, ವೇಷಭೂಷಣ ವಿಶೇಷ ಗಮನ ಸೆಳೆಯಿತು. ಯುವ ವೇದಿಕೆಯಡಿ ಮಕ್ಕಳ ಪ್ರತಿಭಾ ಪ್ರದರ್ಶನ, ಅನ್ನದಾತ ಪ್ರಾಸ ಮಣಿ ಮತ್ತು ಪ್ರಕೃತಿ ಪ್ರಸಾದ್ ಅವರಿಂದ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ, ಖ್ಯಾತ ಕಲಾವಿದರಿಂದ ನಗೆ ಕೂಟ ಏರ್ಪಡಿಸಲಾಗಿತ್ತು.

# ಮಹಾರಾಷ್ಟ್ರ ಅಕ್ರಮ ಯೋಜನೆಗಳಿಂದ ಹರಿವು ತಡೆ: ಕರ್ನಾಟಕದ ಮೂರು ಜಿಲ್ಲೆಗಳ ಭೀಮಾನದಿಯ ಒಡಲು ಬರಿದು

**ಕಲಬುರಗಿ, ಅ. 17:** ಕಲ್ಯಾಣ ಕರ್ನಾಟಕದ ಮೂರು ಜಿಲ್ಲೆಗಳು ಮತ್ತು ಮುಂಬೈ ಕರ್ನಾಟಕ ಒಂದು ಜಿಲ್ಲೆಯಲ್ಲಿ ಹರಿಯುವ ಭೀಮಾನದಿಯ ನೈಸರ್ಗಿಕ ಹರಿವನ್ನು ಮಹಾರಾಷ್ಟ್ರ ಸರ್ಕಾರ ಅಕ್ರಮ ಯೋಜನೆಗಳ ಮೂಲಕ ಹೆಚ್ಚುವರಿ ನೀರು ಹಿಡಿದಿಟ್ಟುಕೊಳ್ಳುವ ದುರಾಸೆಯಿಂದ ತಡೆಯುತ್ತಿರುವ ಪರಿಣಾಮವಾಗಿ ಕರ್ನಾಟಕದ ಜಿಲ್ಲೆಗಳಲ್ಲಿ ಭೀಮಾ ನದಿಯ ಒಡಲು ಬರಿದಾಗಿದೆ. ಭೀಮಾ ನದಿಯಲ್ಲಿ ಕರ್ನಾಟಕ ಪಾಲಿನ 15 ಟಿಎಂಸಿ ನೀರು ಮಹಾರಾಷ್ಟ್ರ ಕಬಳಿಸುತ್ತಿದ್ದರೂ, ಮಹಾ ಸರ್ಕಾರದ ವಿರುದ್ಧ ರಾಜ್ಯ ಸರ್ಕಾರ ಯವುದೇ ಕ್ರಮ ಕೈಕೊಳ್ಳದೇ ಮೌನ ವಹಿಸಿದ್ದು ಕಲಬುರಗಿ, ಯಾದಗಿರಿ ಮತ್ತು ವಿಜಯಪುರ ಜಿಲ್ಲೆಯ ಭೀಮಾ ತೀರದ ನಗರ ಪಟ್ಟಣಗಳು, ನೂರಾರು ಗ್ರಾಮಗಳ ರೈತರು ತೀವ್ರ ಸಂಕಷ್ಟ ಎದುರಿಸುವಂತಾಗಿದೆ.

ಬಚಾವತ್ ತೀರ್ಪಿನ ಪ್ರಕಾರ ಭೀಮಾ ನದಿಯಲ್ಲಿ ಮಹಾರಾಷ್ಟ್ರ 95 ಟಿಎಂಸಿ ನೀರು ಬಳಸಬೇಕು. ಆದರೀಗ ಹೆಚ್ಚುವರಿ 55 ಟಿಎಂಸಿ ನೀರು ಬಳಸುತ್ತಿದೆ. ನಂದಿ ಬೆಟ್ಟದಲ್ಲಿ ಆರಂಭವಾಗುವ ಪೆನ್ನಾರ ನದಿಯ 5 ಟಿಎಂಸಿ ನೀರು ಬಳಕೆ ಸಂಬಂಧ ತಮಿಳನಾಡು ಸರ್ಕಾರ ಕರ್ನಾಟಕ ವಿರುದ್ದ ಸುಪ್ರೀಂಕೋರ್ಟ್ ಮೊರೆ ಹೋಗಿ ನ್ಯಾಯಾಧಿಕರಣ ಮೂಲಕ ತನ್ನ ಪಾಲಿನ ಹಕ್ಕು ಪಡೆದಿರುವಾಗ, ಮಹಾರಾಷ್ಟ್ರ ಸರ್ಕಾರ 55 ಟಿಎಂಸಿ ನೀರು ಅಕ್ರಮವಾಗಿ ಬಳಸುತ್ತಿದ್ದರೂ ಕರ್ನಾಟಕ ಸರ್ಕಾರ ಕಿಂಚಿತ್ತೂ ದನಿ ಎತ್ತದಿರುವುದು ಅಚ್ಚರಿ ಮೂಡಿಸಿದೆ.

> ರಾಜ್ಯಕ್ಕೆ ಹಂಚಿಕೆಯಾಗಿರುವ 15 ಟಿಎಂಸಿ ನೀರು ಮಹಾರಾಷ್ಟ್ರ ನಿಯಮಿತ ಹರಿಸದ್ದರಿಂದ ವಿಜಯಪುರ, ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ತೀವ್ರ ತೊಂದರೆ ಎದುರಾಗಿದೆ. ಹೀಗಾಗಿ ರಾಜ್ಯದ ಪಾಲಿನ ನೀರು ಸಕಾಲಕ್ಕೆ ಹರಿಬಿಡುವಂತೆ ಮಹಾರಾಷ್ಟ್ರ ಸಿಎಂ ಜತೆ ಚರ್ಚಿಸಲಾಗುವುದು.
> – ಡಿ.ಕೆ.ಶಿವಕುಮಾರ್– ಮುಖ್ಯಮಂತ್ರಿ

ರಾಜ್ಯದ ವಿಜಯಪುರ, ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಗಳಲ್ಲಿ 186 ಕಿಮೀ ಹರಿಯುವ ಭೀಮಾ ನದಿ ಹಕ್ಕಿನ ನೀರು ಬಳಕೆಗೆ ಸಂಬಂಧಿಸಿದಂತೆ 2002ರಲ್ಲಿ ರೈತರೇ ಸುಪ್ರೀಂಕೋರ್ಟ್?ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಆಗ 15 ಟಿಎಂಸಿ ನೀರು ಬಳಕೆಗೆ ಸ್ಪಷ್ಟ ನಿರ್ದೇಶನ ನೀಡಿ ಎರಡು ದಶಕವಾದರೂ ಗೆಜೆಟ್ ನೋಟಿಫಿಕೇಶನ್ ಹೊರಡಿಸಿಲ್ಲ.



ಇನ್ನು ಕಾವೇರಿ ನೀರು ಬಳಕೆಗೆ ಬೀದಿಗಿಳಿಯುವ ವಿವಿಧ ಕನ್ನಡಪರ ಸಂಟನೆಗಳು ಭೀಮೆಗಾಗಿಯೂ ಹೋರಾಟದ ಮೂಲಕ ಸ್ವಾಭಿಮಾನ ತೋರಲಿ ಎಂಬುದು ಸಾರ್ವತ್ರಿಕ ಅಭಿಪ್ರಾಯ. ಕಾವೇರಿ ನೀರಿಗಾಗಿ ಆಗಾಗ್ಗೆ ಸುಪ್ರೀಂಕೋರ್ಟ್ ಕದ ತಟ್ಟುವ ಸರ್ಕಾರ ಭೀಮಾ ನೀರು ಬಳಕೆಗೇಕೆ ಕಾನೂನು ಸಮರಕ್ಕೆ ಮುಂದಾಗುತ್ತಿಲ್ಲ ಎಂಬ ಬಗ್ಗೆ ಮುಖ್ಯಮಂತ್ರಿ, ಜಲಸಂಪನ್ಮೂಲ ಸಚಿವರೇ ಉತ್ತರ ನೀಡಬೇಕಿದೆ.

ಮಹಾ ಅಕ್ರಮ ಯೋಜನೆ: ಭೀಮಾ ನದಿ ಹಕ್ಕಿನ 15 ಟಿಎಂಸಿ ನೀರು ಬಳಕೆಗೆ ಕರ್ನಾಟಕ ಸರ್ಕಾರ ಯೋಜನೆ ರೂಪಿಸಿಲ್ಲ. ಆದರೆ ಮಹಾರಾಷ್ಟ್ರ ಭೀಮಾ ನೀರು ಅಕ್ರಮ ಬಳಕೆಗೆ ಯೋಜನೆ ರೂಪಿಸಿದೆ. 1990ರ ನಂತರ ಮಹಾರಾಷ್ಟ್ರ ಭೀಮಾ ನದಿಗೆ ಅಡ್ಡಲಾಗಿ ಅಕ್ರಮ ಬ್ಯಾರೇಜ್ ನಿರ್ಮಾಣ ಜತೆ ಸೀನಾ ನದಿಗೆ ಸುರಂಗ ಮಾರ್ಗ ನಿರ್ಮಿಸಿ ಜೀವಜಲ ಅಕ್ರಮ ಬಳಕೆಯೊಂದಿಗೆ ಸಂಗ್ರಹ ಮಾಡುತ್ತಿರುವುದರಿಂದ ಭೀಮೆ ಒಡಲಿಗೆ ಹನಿ ನೀರು ಹರಿದು ಬರುತ್ತಿಲ್ಲ. ವರ್ಷವಿಡೀ ನೀರು ಹಿಡಿದಿಡುವ ಮಹಾರಾಷ್ಟ್ರ ಮಳೆ ಬಂದು ಪ್ರವಾಹ ಎದುರಾದಾಗ ಮಾತ್ರ ಸಂಗ್ರಹಿಸಿಟ್ಟ ನೀರು ಹರಿಬಿಡುತ್ತಿದೆ. ಭೀಮೆಯಲ್ಲಿ ನೀರು ಅಭಾವ ಮತ್ತು ಪ್ರವಾಹ ಎರಡಕ್ಕೂ ನೇರವಾಗಿ ಮಹಾರಾಷ್ಟ್ರ ಹೊಣೆ ಎಂಬುದು ಕರ್ನಾಟಕ ಸರ್ಕಾರಕ್ಕೂ ಗೊತ್ತಿದೆ. ಆದರೆ ಯಾರೊಬ್ಬರೂ ಚಕಾರ ಎತ್ತದಿರುವುದು ವಿಚಿತ್ರ.

ಕಾವೇರಿ ಕಾಳಜಿ ಭೀಮೆಗೂ ಇರಲಿ: ಹಂಚಿಕೆಯಂತೆ ರಾಜ್ಯದಲ್ಲಿ 15 ಟಿಎಂಸಿ ಭೀಮಾ ನದಿ ನೀರು ಸಮರ್ಪಕ ಬಳಸುವಂತಾಗಬೇಕು. ವಿಜಯಪುರ ಜಿಲ್ಲೆಯ ಇಂಡಿ, ಸಿಂದಗಿ, ಕಲಬುರಗಿ ಜಿಲ್ಲೆಯ ಅಫಜಲಪುರ, ಆಳಂದ, ಜೇವರ್ಗಿ, ಚಿತ್ತಾಪುರ, ಯಾದಗಿರಿ ಜಿಲ್ಲೆ ಹಾಗೂ ಭೀಮಾ ಹರಿಯುವ ಇತರ ಕ್ಷೇತ್ರದ ಶಾಸಕರು ಮಹಾರಾಷ್ಟ್ರ ಅಕ್ರಮ ಯೋಜನೆಗಳ ಕುರಿತು ಸಮಗ್ರ ಅಧ್ಯಯನ ನಡೆಸಿ ಸುಪ್ರೀಂಕೋರ್ಟ್‌ಗೆ ತಕರಾರು (ದೂರು) ಅರ್ಜಿ ಸಲ್ಲಿಸಲು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರುವುದು ಅನಿವಾರ್ಯ. ಪಭೇದ ಮರೆತು ಕಾವೇರಿ ನೀರು ಬಳಕೆಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳು ಒಂದಾಗಿ ಸರ್ಕಾರದ ಮೇಲೆ ಒತ್ತಡ ಹಾಕುತ್ತಾರೋ ಅದೇ ರೀತಿ ಭೀಮಾ ತೀರದ ಶಾಸಕ&ಸಂಸದರಲ್ಲೂ ಸ್ವಾಭಿಮಾನ ಬರಲಿ. ಕಾವೇರಿಗೆ ತೋರುವ ಕಾಳಜಿ ಸರ್ಕಾರ ಭೀಮೆಗೂ ತೋರಲಿ ಎಂಬುದು ಈ ಭಾಗದ ಅನ್ನದಾತರ ಒತ್ತಾಸೆಯಾಗಿದೆ.

> ಭೀಮಾ ನದಿಯ 15 ಟಿಎಂಸಿ ನೀರು ಬಳಕೆ ಮತ್ತು ಅಕ್ರಮ ಯೋಜನೆಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ಜತೆ ಮಾತುಕತೆ ಮುಗಿದ ಅಧ್ಯಾಯ. ಈಗೇನಿದ್ದರೂ ಕೇಂದ್ರ ಇಲ್ಲವೇ ಸುಪ್ರೀಂಕೋರ್ಟ್?ನಲ್ಲಿ ತಕರಾರು ಅರ್ಜಿ ಸಲ್ಲಿಸಿ ಕಾನೂನು ಸಮರ ಸಾರಿದರೆ ಮಾತ್ರ ನ್ಯಾಯ ದೊರಕಲಿದೆ.
> – ಪಂಚಪ್ಪ ಕಲಬುರಗಿ,ಅಧ್ಯಕ್ಷರು, ಭೀಮಾ ರೈತ ಹೋರಾಟಸಮಿತಿ.



ಭಾರತೀಯ ವಾಯುಪಡೆಯ ಪ್ರತಿಷ್ಠಿತ 'ಸೂರ್ಯ ಕಿರಣ್ ಏರೋಬ್ಯಾಟಿಕ್ ತಂಡ'ವು (SKAT), ಶನಿವಾರ ಮೈಸೂರಿನ ಬನ್ನಿಮಂಟಪದಲ್ಲಿರುವ ಟಾರ್ಚ್‌ಲೈಟ್ ಪರೇಡ್ ಮೈದಾನದಲ್ಲಿ ಪ್ರಾಥಮಿಕ ತಾಲೀಮು ಮತ್ತು ಪರಿಶೀಲನಾ ಕಾರ್ಯವನ್ನು ಯಶಸ್ವಿಯಾಗಿ ನಡೆಸಿತು.

# ಕರೇಜ್ ಅಭಿವೃದ್ಧಿಗೆ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ ಮುಂದಾಗಲಿ

**ಬೀದರ್, ಅ. 17:** ನಿರಂತರ ಅಂತರ್ ಜಲ ಕಾಯ್ದುಕೊಳ್ಳುವ ಅಂತರ್ ಜಲಾಶಯದ ಐತಿಹಾಸಿಕ ಕರೇಜ್ ಜಲವ್ಯವಸ್ಥೆಯನ್ನು ಸಂರಕ್ಷಿಸಿ, ಅಂತರ್ಜಲ ಮರುಪೂರಣ ಹಾಗೂ ನಗರದಲ್ಲಿ ನೀರಿನ ಲಭ್ಯತೆ ಹೆಚ್ಚಿಸುವ ನಿಟ್ಟಿನಲ್ಲಿ ಸಮಗ್ರ ಅಭಿವೃದ್ಧಿ ಯೋಜನೆ ರೂಪಿಸಲು ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮುಂದಾಗಬೇಕು ಎಂದು ಟೀಮ್ ಯುವಾ ಸಹಸಂಸ್ಥಾಪಕ ವಿನಯ್ ಕುಮಾರ್ ಮಾಳಗೆ ಮನವಿ ಮಾಡಿದರು.

ಬಿಡಿಎ ನೂತನ ಅಧ್ಯಕ್ಷ ವಿನೋದ್ ಕುಮಾರ್ ಅಪ್ಪೆ ಅವರನ್ನು ಅವರ ಕಚೇರಿಯಲ್ಲಿ ಮಂಗಳವಾರ ಭೇಟಿ ಮಾಡಿ, ಅಲಿಯಾಬಾದ್ ಕರೇಜ್ ಜಲಮಾರ್ಗದ ಕುರಿತು ಮಾಹಿತಿ ಹಂಚಿಕೊಂಡರು. ಕರೇಜ್‌ನ ಐತಿಹಾಸಿಕ ಮಹತ್ವ, ಪ್ರಸ್ತುತ ಸ್ಥಿತಿ, ಜಲಸಂಗ್ರಹಣೆ, ಅಂತರ್ಜಲ ಮರುಪೂರಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಪರಿಸರ ಸಂರಕ್ಷಣೆಯ ಸಾಧ್ಯತೆಗಳ ಕುರಿತು ಸಭೆಯಲ್ಲಿ ಮಾಹಿತಿ ಹಂಚಿಕೊಂಡರು.



ಬೀದರ್ ನಗರ ಪ್ರದೇಶದಲ್ಲಿರುವ ಅಂತರ್ ಜಲಾಶಯ ಕರೇಜ್ ಅಭಿವೃದ್ಧಿ ಕುರಿತು ಪರಿಶೀಲನೆ ನಡೆಸುತ್ತಿರುವ ಅಧಿಕಾರಿಗಳು.

ಕರೇಜ್ ಅಭಿವೃದ್ಧಿಯನ್ನು ಕೇವಲ ಸೌಂದರ್ಯೀಕರಣ ಅಥವಾ ಪ್ರವಾಸೋದ್ಯಮಕ್ಕೆ ಸೀಮಿತಗೊಳಿಸದೆ, ವೈಜ್ಞಾನಿಕ ಅಧ್ಯಯನ, ಮಳೆನೀರು ಸಂಗ್ರಹಣೆ, ಅಂತರ್ಜಲ ಮರುಪೂರಣ ಮತ್ತು ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದರು.

ಬಿಡಿಎ ಅಧ್ಯಕ್ಷರು, ಸದಸ್ಯರು, ಆಯುಕ್ತರು ಮತ್ತು ನಗರ ಹಾಗೂ ಪಟ್ಟಣ ಯೋಜನಾ ಇಲಾಖೆಯ ಅಧಿಕಾರಿಗಳೊಂದಿಗೆ ಕರೇಜ್ ಪ್ರದೇಶಕ್ಕೆ ಭೇಟಿ ಕೊಟ್ಟು, ಜಂಟಿ ಸ್ಥಳ ಪರಿಶೀಲನೆ ನಡೆಸಲು ಕೋರಿದರು.

# ಪ್ರಜೆಗಳು ಮಾಡುವ ಪಾಪದಲ್ಲಿ ರಾಜನಿಗೂ ಪಾಲಿದೆ: ರಾಘವೇಶ್ವರ ಶ್ರೀ

* ಇಂದ್ರನಂತೆ ಇಂದಿನ ರಾಜಕಾರಣಿಗಳಿಗೂ ಸದಾ ಕುರ್ಚಿ ಉಳಿಸಿಕೊಳ್ಳುವ ಆತಂಕವಿದೆ
* 'ನನಗೇ ಏಕೆ ಹೀಗೇ?' ಎನ್ನುವ ಬದಲು 'ನಾನೇಕೆ ಹೀಗೆ?' ಎಂದು ಪ್ರಶ್ನಿಸಿಕೊಳ್ಳಿ
* ಸಿದ್ಧಾಂತಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಾರ್ಥಕತೆ



**ಬೆಂಗಳೂರು, ಅ.17:** ಪ್ರಜೆಗಳು ಮಾಡುವ ಪಾಪದಲ್ಲಿ ಒಂದು ಪಾಲು ರಾಜನಿಗಿದೆ. ಪ್ರಜೆಗಳು ತಮ್ಮ ಸಂಪಾದನೆಯ ಪಾಲಿನಲ್ಲಿ ಕರವನ್ನು ರಾಜನಿಗೆ ಸಲ್ಲಿಸುವುದರಿಂದ, ಅವರ ಪಾಪಗಳಲ್ಲಿ ರಾಜನೂ ಪಾಲನ್ನು ಹೊಂದುತ್ತಾನೆ ಎಂದು ಶ್ರೀರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದರು.

ಬೆಂಗಳೂರಿನ ಗಿರಿನಗರದಲ್ಲಿರುವ ಶ್ರೀರಾಮಚಂದ್ರಾಪುರ ಮಠದ ಶಾಖೆಯಲ್ಲಿ ನಡೆಯುತ್ತಿರುವ 'ನವರಾತ್ರ ನಮಸ್ಯಾ' ಕಾರ್ಯಕ್ರಮದಲ್ಲಿ ಶನಿವಾರ ಲಲಿತೋಪಾಖ್ಯಾನ ಪ್ರವಚನವನ್ನು ಅನುಗ್ರಹಿಸಿದ ಶ್ರೀಗಳು, ತ್ರಿಲೋಕದ ಅಧಿಪತಿಯಾದ ಇಂದ್ರನಿಗೂ ಇಂದಿನ ರಾಜಕಾರಣಿಗಳು ಹೋಲಿಕೆಯನ್ನು ಕಾಣಬಹುದು. ಇಬ್ಬರೂ ಕೂಡ ಸದಾ ತಮ್ಮ ಕುರ್ಚಿಯ ರಕ್ಷಣೆಯ ಚಿಂತೆಯಲ್ಲಿಯೇ ಇರುತ್ತಾರೆ. ಇಂದ್ರನಿಗೆ ತಪಸ್ಸನ್ನಾಚರಿಸುವವರ ಹಾಗೂ ರಾಕ್ಷಸರ ಕುರಿತಾದ ಭಯವಾದರೆ, ಇಂದಿನ ರಾಜಕಾರಣಿಗಳಿಗೆ ಸ್ವಪಕ್ಷ ಹಾಗೂ ವಿಪಕ್ಷದವರ ಕುರಿತಾದ ಭಯವಿದೆ. ಹಾಗಾಗಿ ದೇವರು ನಮಗೆ ವರವನ್ನು ಕೊಟ್ಟರೆ, ನಾವು ಪದವಿಗಳ ಹಿಂದೆ ಹೋಗದೆ ಅದನ್ನು ಮೀರಿದ ಮೋಕ್ಷವನ್ನು ಪ್ರಾರ್ಥಿಸಬೇಕೆಂದು ಕಿವಿಮಾತು ಹೇಳಿದರು.

ಕರ್ಮದ ಫಲ ಇಂದ್ರನಿಗೂ ತಪ್ಪಿದ್ದಲ್ಲ. ಆದರೆ ನಾವು ಕರ್ಮ ಫಲ ನಮಗೆ ಬಾಧಿಸುವುದಿಲ್ಲ ಎಂಬಂತೆ ವರ್ತಿಸುತ್ತೇವೆ. ನಾವು ಮಾಡುವ ತಪ್ಪು ಕಾರ್ಯಗಳಿಗೆ ಪೊಳ್ಳು ಸಮರ್ಥನೆಗಳನ್ನು ಕೊಡುತ್ತಾ ಇರುತ್ತೇವೆ. ಸಮಸ್ಯೆಗಳು ಬಂದಾಗ ನನಗೇ ಏಕೆ ಹೀಗೇ? ಎಂದು ಎಲ್ಲರಲ್ಲಿ ಹೇಳುತ್ತೇವೆ. ಆದರೆ ನಾನೇಕೆ ಹೀಗೆ?ಎಂದು ಪ್ರಶ್ನಿಸಿಕೊಳ್ಳುವುದಿಲ್ಲ. ನಮ್ಮನ್ನು ನಾವು ಪ್ರಶ್ನಿಸಿಕೊಂಡಾದ ಉತ್ತಮ ಜೀವನವನ್ನು ಕಟ್ಟಿಕೊಳ್ಳಲು ಸಾಧ್ಯ. ಸಿದ್ಧಾಂತಗಳನ್ನು ಕೇಳಿದ ನಂತರ ಅವುಗಳನ್ನು ಜೀವನಕ್ಕೆ ಅಳವಡಿಸಿಕೊಳ್ಳಬೇಕು. ಪುಸ್ತಕದಲ್ಲಿ ಓದುವುದರಿಂದ, ಪ್ರವಚನ ಕೇಳುವುದರಿಂದ ಪ್ರಯೋಜನವಿಲ್ಲ. ಅಲ್ಲಿನ ವಿಚಾರಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಅದು ಸಾರ್ಥಕ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಮುದ್ರ ಮಥನಕ್ಕೆ ಶ್ರೀಮನ್ನಾರಾಯಣನು ದೇವತೆಗಳಿಗೆ ನೀಡಿದ ಮಾರ್ಗದರ್ಶನವನ್ನು ಪ್ರಸ್ತಾಪಿಸಿದ ಶ್ರೀಗಳು, ಸಂಸ್ಕೃತದಲ್ಲಿ ಶಠಂ ಪ್ರತಿಶಠ್ಯಂ ಎಂಬ ಮಾತಿದ್ದು ಮೋಸಗಾರನಿಗೆ ಮೋಸದಿಂದಲೇ ಉತ್ತರಿಸಬೇಕು. ದುಷ್ಟರಿಗೆ ಸಜ್ಜನ ಭಾವದ ಭಾಷೆ ಅರ್ಥವಾಗುವುದಿಲ್ಲ. ದುಷ್ಟರಿಗೆ ಅವರದೇ ಭಾಷೆಯಲ್ಲಿ ಉತ್ತರಿಸಬೇಕಾಗುತ್ತದೆ ಎಂದರು.

# ರಾಜಕೀಯವಾಗಿ ಎದುರಿಸಲು ಸಾಧ್ಯವಾಗದೆ ಕೆಲವರಿಂದ ಸ್ಟಿಂಗ್ ಮೂಲಕ ಗೊಂದಲ ಸೃಷ್ಟಿ: ಬಸವರಾಜ ಬೊಮ್ಮಾಯಿ

**ಹುಬ್ಬಳ್ಳಿ, ಅ.17:** ರಾಜಕೀಯವಾಗಿ ಎದುರಿಸಲು ಸಾಧ್ಯವಾಗದೆ ಕೆಲವರು ಸ್ಟಿಂಗ್ ಆಪರೇಷನ್‌ನಂತಹ ಗೊಂದಲಗಳನ್ನು ಸೃಷ್ಟಿಸುತ್ತಿದ್ದಾರೆ. ಇದು ನೈತಿಕತೆಯ ಅಧಃಪತನವಾಗಿದೆ. ಒಬ್ಬ ವ್ಯಕ್ತಿಯನ್ನು ರಾಜಕೀಯವಾಗಿ ಎದುರಿಸಬೇಕು ಹೊರತಾಗಿ ಸ್ಟಿಂಗ್ ಮೂಲಕ ರಾಜಕೀಯ ಮೊಟಕುಗೊಳಿಸುವುದು ಬಹಳ ಆತಂಕಕಾರಿ ಇದಕ್ಕೆ ಇತಿಶ್ರೀ ಹಾಡಬೇಕು ಎಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಮಾಧ್ಯಮದೊಂದಿಗೆ, ಮುಖ್ಯಮಂತ್ರಿಗಳು ಇದನ್ನು ಪ್ರಾರಂಭ ಮಾಡಿ ಈಗ ಯಾವುದೊ ಒಂದು ಸಣ್ಣ ತನಿಖೆ ಮಾಡಿದರೆ ಆಗುವುದಿಲ್ಲ. ಅವರು ಐವರು ಸಚಿವರ ಮೇಲೆ ಅನುಮಾನ ಇದೆ ಅಂತ ಹೇಳಿದ್ದರು.





ಆ ಐವರು ಸಚಿವರಿಗೆ ಸಂಬಂಧಿಸಿದಂತೆ ಸೂಕ್ತ ತನಿಖೆಯಾಗಬೇಕು ಹೊರತು, ಕೇವಲ ಸಿದ್ದರಾಮಯ್ಯ ಅವರು ಕೊಟ್ಟ ದೂರಿನ ಆಧಾರದ ಮೇಲೆ ತನಿಖೆ ನಡೆಸಿದರೆ ಅದು ಸೀಮಿತವಾದ ತನಿಖೆಯಾಗಲಿದೆ. ಸಂಪೂರ್ಣ ಸತ್ಯ ಬರಲು ಸಾಧ್ಯವಿಲ್ಲ. ಸಚಿವರ ಮೇಲಿನ ಸ್ಟಿಂಗ್ ಆಪರೇಷನ್ ಹಾಗೇ ಉಳಿದು ಬಿಡುತ್ತದೆ. ಹೀಗಾಗಿ ಸಮಗ್ರ ತನಿಖೆ ಆಗಬೇಕು. ರಾಜ್ಯ ಸರ್ಕಾರದ ಅಧಿಕಾರಿಗಳು ಸಚಿವರ ಮೇಲಿನ ತನಿಖೆ ಮಾಡುವುದು ಎಷ್ಟು ಸಮಂಜಸ ಹೀಗಾಗಿ ಇದನ್ನು ಸಿಬಿಐಗೆ ಕೊಡಬೇಕೆಂದು ನಮ್ಮ ಆಗ್ರಹ ಎಂದು ಹೇಳಿದರು.

ತನಿಖೆ ಪ್ರಾರಂಭವಾಗಿ ಒಂದು ವಾರ ಕಳೆಯಿತು. ತನಿಖೆ ಆಮೆಗತಿಯಲ್ಲಿ ನಡೆಯುತ್ತಿದೆ. ಯಾರು ಪ್ರಸಾರ ಮಾಡುತ್ತಿದ್ದಾರೆ ಅವರನ್ನು ಹಿಡಿಯುತ್ತಿದ್ದಾರೆ. ಯಾರು ತಯಾರು ಮಾಡಿದ್ದಾರೆ. ಯಾರು ಹಣ ಒದಗಿಸಿದ್ದಾರೆ. ಇದರ ಹಿಂದೆ ಯಾರಿದ್ದಾರೆ ಎನ್ನುವುದನ್ನು ಪತ್ತೆ ಹಚ್ಚಬೇಕು. ಇದು ರಾಜ್ಯದಲ್ಲಿ ಸಣ್ಣ ಪ್ರಮಾಣದಲ್ಲಿ ಆರಂಭವಾಗಿ ಈಗ ವ್ಯವಸ್ಥಿತವಾಗಿ ಮಾಡುವ ಮಟ್ಟಕ್ಕೆ ಬೆಳೆದಿದ್ದು ತಾವು ಏನು ಮಾಡಿದರೂ ಯಾರೂ ಏನೂ ಮಾಡುವುದಿಲ್ಲ ಎನ್ನುವ ಧೈರ್ಯ ಬಂದಿದೆ ಅದು ಹೋಗಬೇಕಿದೆ ಎಂದು ಹೇಳಿದರು.

# ಶಿಕ್ಷಕರಿಗೆ ಅತ್ಯುನ್ನತ ಗೌರವ, ಹಕ್ಕು ನೀಡಿದ್ದೇ ಕಾಂಗ್ರೆಸ್: ಈಶ್ವರ ಖಂಡ್ರೆ



ಬೀದರ್, ಅ. 17: ಸ್ವಾತಂತ್ರ್ಯೋತ್ತರ ದಲ್ಲಿ ಶಿಕ್ಷಕರಿಗೆ ಅತ್ಯುನ್ನತ ಗೌರವ ಮತ್ತು ಸ್ಥಾನಮಾನವನ್ನು ಕಲ್ಪಿಸಿದ ಕಾಂಗ್ರೆಸ್ ಸರ್ಕಾರ, ನಿರಂತರ ಅವರ ಹಕ್ಕುಗಳು ಹಾಗೂ ಹಿತ ಕಾಯುತ್ತಿದೆ ಇದೇ 23ರಂದು ವಿಧಾನ ಪರಿಷತ್ತಿಗೆ ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರ್ ಪರ ಬೀದರ್ ನಲ್ಲಿಂದು ಪ್ರಚಾರ ನಡೆಸಿದ ಅವರು, ಶ್ರೇಷ್ಠ ಶಿಕ್ಷಕ ಡಾ. ಸರ್ವಪಲ್ಲಿ ರಾಧಾ ಕೃಷ್ಣನ್ ಅವರನ್ನು ದೇಶದ ರಾಷ್ಟ್ರಪತಿ ಯನ್ನಾಗಿ ಮಾಡಿದ ಕಾಂಗ್ರೆಸ್ ಸರ್ಕಾರ, ಶಿಕ್ಷಕ ವೃತ್ತಿಯ ಘನತೆಯನ್ನು ಎತ್ತಿಹಿಡಿಯಿತು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಹೇಳಿದರು.

**17 ಸಾವಿರ ಶಿಕ್ಷಕರ ನೇಮಕಾತಿ;** ಕಲ್ಯಾಣ ಕರ್ನಾಟಕಕ್ಕೆ 7 ಸಾವಿರ ಹುದ್ದೆಗಳು: ಶಿಕ್ಷಕರ ಮೇಲಿನ ಒತ್ತಡ ತಗ್ಗಿಸಲು ಮತ್ತು ಗುಣಮಟ್ಟದ ಶಿಕ್ಷಣ ನೀಡಲು, 17 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗಿದೆ. ಈ ಪೈಕಿ ಕಲ್ಯಾಣ ಕರ್ನಾಟಕ ಭಾಗದಲ್ಲೇ 7 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಹೆಚ್ಚುವರಿ ಯಾಗಿ 5 ಸಾವಿರ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವಂತೆ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಲಾಗಿದೆ ಎಂದರು.

# ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ: ಅರ್ಜಿಆಹ್ವಾನ

**ವಿಜಯಪುರಅ.17–**2026ನೇ ಸಾಲಿನ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನ.1ರಂದು ನಗರದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸನ್ಮಾನಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಅರ್ಜಿ ಆಹ್ವಾನಿಸಿದೆ.

ಕಲೆ, ಸಾಹಿತ್ಯ, ಶಾಸ್ತ್ರೀಯ ಮತ್ತು ಸುಗಮ ಸಂಗೀತ, ಜನಪದ, ರಂಗಭೂಮಿ, ಶಿಲ್ಪಕಲೆ, ಚಿತ್ರಕಲೆ, ನೃತ್ಯ, ಸಮಾಜಸೇವೆ, ಕೃಷಿ, ವೈದ್ಯಕೀಯ, ಪತ್ರಿಕೋದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರು ತಮ್ಮ ಸ್ವ–ಪರಿಚಯ, ಸಾಧನೆಯ ವಿವರ ಹಾಗೂ ಪೂರಕ ದಾಖಲೆ ಗಳೊಂದಿಗೆ ಅ.27ರ ಸಂಜೆ 5 ಗಂಟೆಯೊಳಗೆ ಅರ್ಜಿ ಸಲ್ಲಿಸ ಬಹುದಾಗಿದೆ. ಅರ್ಜಿಯನ್ನು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಂದಗಲ್ ಹನುಮಂತರಾಯ ರಂಗಮಂದಿರ, ಸ್ಟೇಷನ್ ರಸ್ತೆ, ವಿಜಯಪುರ ಕಚೇರಿಗೆ ಸಲ್ಲಿಸಬೇಕು. ಗಡುವಿನ ನಂತರ ಸಲ್ಲಿಸುವ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗೆ 08352–251261 ಸಂಪರ್ಕಿಸಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಣೆ ತಿಳಿಸಿದೆ.

# ಆರೋಗ್ಯ ಕೇಂದ್ರದ ಔಷಧಿಗಳು ತಿಪ್ಪೆ ಪಾಲು

**ರಾಯಚೂರು, ಅ. 17:** ಬಡ ರೋಗಿಗಳಿಗೆ ಉಚಿತವಾಗಿ ವಿತರಿಸಬೇಕಾದ ಔಷಧವನ್ನು ನಗರದ ಬಸವೇಶ್ವರ ವೃತ್ತದ ಬಳಿ ತಿಪ್ಪೆಗೆ ಎಸೆದಿರುವ ಘಟನೆ ಬೆಳಕಿಗೆ ಬಂದಿದೆ. ತಿಪ್ಪೆಗೆ ಎಸೆದಿರುವ ಔಷಧದಲ್ಲಿ ರಕ್ತ ದೊತ್ತಡ ಮತ್ತು ಮಧುಮೇಹದಂತಹ ಕಾಯಿಲೆಗಳಿಗೆ ಬಳಸುವ ಮಾತ್ರೆಗಳೂ ಪತ್ತೆಯಾಗಿವೆ. ಆರೋಗ್ಯ ಇಲಾಖೆಯ ಆರೋಗ್ಯ ಕೇಂದ್ರಗಳಿಗೆ ಸರಬರಾಜು ಮಾಡಿದ್ದ ಈ ಔಷಧಗಳನ್ನು ರೋಗಿಗಳಿಗೆ ವಿತರಿಸದೆ ಅವಧಿ ಮುಗಿದ ಬಳಿಕ ತಿಪ್ಪೆಗೆ ಎಸೆಯಲಾಗಿದೆ.

ಅವಧಿ ಮೀರಿದ ಔಷಧವನ್ನು ನಿಯ ಮಾನುಸಾರ ಸುರಕ್ಷಿತವಾಗಿ ವಿಲೇವಾರಿ ಮಾಡಬೇಕು. ಆದರೆ, ಜನರು ಮತ್ತು ಜಾನುವಾರುಗಳು ಓಡಾಡುವ ಸ್ಥಳದಲ್ಲಿ ಎಸೆದಿರುವುದು ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಆತಂಕಕಾರಿ ಸಂಗತಿಯಾಗಿದೆ. ಈ ಪ್ರಕರಣದ ಕುರಿತು ಆರೋಗ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಔಷಧ ಯಾವ ಆರೋಗ್ಯ ಕೇಂದ್ರಕ್ಕೆ ಸರಬರಾಜು ಆಗಿತ್ತು. ಅದಕ್ಕೆ ಯಾರು ಜವಾಬ್ದಾರರು ಎಂಬುದನ್ನು ಪತ್ತೆಹಚ್ಚಬೇಕು. ನಿರ್ಲಕ್ಷ್ಯ ತೋರಿದವರ ವಿರುದ್ಧ ಕ್ರಮ ಕೈಗೊಂಡು, ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



# ಅಗ್ನಿ ಅವಘಡ; ಅಣಕು ಕಾರ್ಯಾಚರಣೆಗೆ ಚಿಣ್ಣರು ಪುಳಕ

ಬೀದರ್, ಅ. 17: ಅಗ್ನಿ ಅನಾಹುತ ಸಂಭವಿಸಿದಾಗ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಕುರಿತ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಅಣಕು ಕಾರ್ಯಾಚರಣೆಯೂ ನಗರದ ನೆಹರೂ ಕ್ರೀಡಾಂಗಣ ಸಮೀಪದ ಗುರುನಾನಕ್ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳನ್ನು ಪುಳಕಿತರಾಗಿಸಿತು.



ಅಗ್ನಿ ಅವಘಡ ಸಂಭವಿಸಿದ ಸಂದರ್ಭದಲ್ಲಿ ತುರ್ತು ಸೇವೆಗಳನ್ನು ಸಂಪರ್ಕಿಸುವ ವಿಧಾನ, ಸುರಕ್ಷಿತವಾಗಿ ಸ್ಥಳಾಂತರಗೊಳ್ಳುವ ಕ್ರಮಗಳು ಮತ್ತು ಅಗ್ನಿಶಾಮಕ ಉಪಕರಣಗಳ ಬಳಕೆ ಕುರಿತು ಪ್ರಾತ್ಯಕ್ಷಿಕೆ ಮೂಲಕ ಅರಿವು ಮೂಡಿಸಲಾಯಿತು.

ವಿವಿಧ ರೀತಿಯ ಬೆಂಕಿ ಅವಘಡಗಳಿಗೆ ಅನುಗುಣವಾಗಿ ಅಗ್ನಿಶಾಮಕ ಉಪಕರಣಗಳನ್ನು ಹೇಗೆ ಬಳಸಬೇಕು, ವಿದ್ಯುತ್ ಶಾರ್ಟ್ ಸರ್ಕ್ಯೂಟ್, ಗ್ಯಾಸ್ ಸಿಲಿಂಡರ್ ಹಾಗೂ ಇತರ ಕಾರಣಗಳಿಂದ ಬೆಂಕಿ ಹೊತ್ತಿಕೊಂಡಾಗ ಯಾವ ರೀತಿ ಮುನ್ನೆಚ್ಚರಿಕೆ ವಹಿಸಬೇಕೆಂದು ವಿವರಿಸಲಾಯಿತು.

ಅಗ್ನಿ ಶಾಮಕ ಅಧಿಕಾರಿ ಪ್ರವೀಣ ಮಾತನಾಡಿ, ಬೆಂಕಿ ಕಾಣಿಸಿಕೊಂಡಾಗ ಗಾಬರಿಯಾಗ ಬಾರದು. ಸಂಯಮ ದಿಂದ ವರ್ತಿಸಬೇಕು. ಲಿಫ್ಟ್ ಬಳಸದೆ ಸುರಕ್ಷಿತ ಮಾರ್ಗದ ಮೂಲಕ ಹೊರಬರಬೇಕು. ಶಾಲೆಯ ತುರ್ತು ನಿರ್ಗಮನ ದ್ವಾರಗಳನ್ನು ಬಳಸಬೇಕು. ಇತರರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಬೇಕು ಎಂದು ಸಲಹೆ ಮಾಡಿದರು. ಶಾಲೆಯಲ್ಲಿ ತುರ್ತು ಪರಿಸ್ಥಿತಿ ಎದುರಾದಾಗ ಶಿಕ್ಷಕರು ಮತ್ತು ಸಿಬ್ಬಂದಿಯ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ತಿಳಿಸಿದರು.



# ಗೋಕರ್ಣದಲ್ಲಿ ನವರಾತ್ರಿ ವೈಭವ

**ಗೋಕರ್ಣ, ಅ.17–** ಕೋಟಿ ತೀರ್ಥದ ಪಕ್ಕದಲ್ಲಿರುವ ಪಟ್ಟೆ ಗಣಪತಿಗೆ ನವರಾತ್ರಿ ನಿಮಿತ್ತ ವಿಶೇಷ ಅಲಂಕಾರ ಮತ್ತು ತಿಂಗಳ ಬೈಲಿನ ಶಾಂತಿಕಾ ಪರಮೇಶ್ವರಿ ದೇವಿಗೆ ನವರಾತ್ರಿಯ ನಿಮಿತ್ತ ವಿಶೇಷ ಪೂಜೆ ಸಲ್ಲಿಸಲಾಯಿತು.



## ಲೌಕಿಕ ಲಾಭಗಳಿಗಾಗಿ ಗಾಯತ್ರಿ ಮಂತ್ರ ಪಠಿಸದಿರಿ: ಸದ್ಗುರು ಶ್ರೀ ಮಧುಸೂದನ ಸಾಯಿ

# ಸತ್ಯಸಾಯಿ ಗ್ರಾಮದಲ್ಲಿ ನವರಾತ್ರಿ ಸಂಭ್ರಮ, ಲೋಕ ಕಲ್ಯಾಣಾರ್ಥವಾಗಿ ಲಕ್ಷ್ಮೀ ನರಸಿಂಹ ಹೋಮ

**ಚಿಕ್ಕಬಳ್ಳಾಪುರ, ಅ.17:** ಮುದ್ದೇನ ಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ನಡೆಯುತ್ತಿರುವ ನವರಾತ್ರಿ ಮಹೋ ತ್ಸವದ ಏಳನೇ ದಿನದಂದು ಕಾಳರಾತ್ರಿ ದೇವಿಯನ್ನು ಶ್ರದ್ಧಾಭಕ್ತಿಯಿಂದ ಆರಾಧಿಸಲಾಯಿತು. ಲೋಕ ಕಲ್ಯಾಣಾರ್ಥವಾಗಿ 'ಲಕ್ಷ್ಮಿ ನರಸಿಂಹ ಹೋಮ' ಹಾಗೂ 'ಗಾಯತ್ರಿ ಹೋಮ'ಗಳನ್ನು ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಸದ್ಗುರು ಶ್ರೀ ಮಧುಸೂದನ ಸಾಯಿ, ಗಾಯತ್ರಿ ಮಂತ್ರದ ಅರ್ಥ ಮತ್ತು ಮಹತ್ವವನ್ನು ವಿವರಿಸಿದರು. "ಗಾಯತ್ರಿ ಮಂತ್ರವನ್ನು ಕೇವಲ ಲೌಕಿಕ ಲಾಭಗಳಿಗಾಗಿ, ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆಯುವುದಕ್ಕಾಗಿ ಅಥವಾ ಐಷಾರಾಮಿ ಜೀವನಕ್ಕಾಗಿ ಪಠಿಸಬಾರದು. ಗಾಯತ್ರಿ ಮಂತ್ರವನ್ನು ಧ್ಯಾನಿಸುವುದರಿಂದ ನಮ್ಮೊಳಗಿನ ಅಹಂಕಾರ ಅಳಿಯುತ್ತದೆ. ಆತ್ಮಜ್ಞಾನ (ಪ್ರಜ್ಞಾನ) ಜಾಗೃತಗೊಳ್ಳುತ್ತದೆ" ಎಂದು ವಿವರಿಸಿದರು.

ಇದೇ ವೇಳೆ ಸಮಯದ ಮಹತ್ವವನ್ನು ಒತ್ತಿಹೇಳಿದ ಅವರು, "ಸಮಯಕ್ಕೆ ದಯೆ ಎಂಬು ದಿಲ್ಲ, ಅದು ಯಾರಿಗಾಗಿಯೂ ಕಾಯುವು ದಿಲ್ಲ. ನೀವು ಸಮಯವನ್ನು ವ್ಯರ್ಥ ಮಾಡಿದರೆ, ಸಮಯ ನಿಮ್ಮನ್ನು ವ್ಯರ್ಥ ಮಾಡುತ್ತದೆ. ಪ್ರತಿಯೊಂದು ಕ್ಷಣವೂ ಪವಿತ್ರವಾಗಿದ್ದು, ಅದನ್ನು ಸದುಪಯೋಗಪಡಿಸಿಕೊಳ್ಳಿ, ದೇವಿಯನ್ನು ಕಾಳರಾತ್ರಿಯ ರೂಪದಲ್ಲಿ ಆರಾಧಿಸುವುದರಿಂದ ಕಾಲವು ಸದುಪಯೋಗವಾಗುತ್ತದೆ" ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ತಮಿಳುನಾಡಿನ ರಾಧಾಪುರಂ ಕ್ಷೇತ್ರದ ಶಾಸಕ ಹಾಗೂ ವೈದ್ಯ ಡಾ ಸತೀಶ್ ಕ್ರಿಸ್ಟೋಫರ್ ಮಾತನಾಡಿ, "ಜಾತಿ, ಧರ್ಮ, ಭಾಷೆಯ ಭೇದವಿಲ್ಲದೆ ಕಷ್ಟದಲ್ಲಿರುವವರಿಗೆ ವಿಶ್ವದರ್ಜೆಯ ವೈದ್ಯಕೀಯ ಚಿಕಿತ್ಸೆ, ಊಟ ಮತ್ತು ಶಿಕ್ಷಣವನ್ನು ಸಂಪೂರ್ಣ ಉಚಿತವಾಗಿ ನೀಡುತ್ತಿರುವ ಸದ್ಗುರು ಶ್ರೀ ಮಧುಸೂದನ ಸಾಯಿ ಅವರ ಕಾರ್ಯ ನಿಜಕ್ಕೂ ಸ್ಫೂರ್ತಿದಾಯಕ. ನಾಯಕತ್ವವೆಂದರೆ ಕೇವಲ ಅಧಿಕಾರವಲ್ಲ, ಜನರ ಜೀವನದಲ್ಲಿ ತರುವ ಸಕಾರಾತ್ಮಕ ಬದಲಾವಣೆಯ ಶಕ್ತಿ ಎಂಬುದನ್ನು ಈ ಸಂಸ್ಥೆ ಸಾಬೀತುಪಡಿಸಿದೆ" ಎಂದರು.

"ಆರೋಗ್ಯ ಸಮಸ್ಯೆಗಳು ಬಡವ–ಶ್ರೀಮಂತ ಎಂಬ ಭೇದಭಾವ ಮಾಡುವುದಿಲ್ಲ. ಹೀಗಾಗಿ, ರೋಗಿಗಳ ಆರೈಕೆ ಮತ್ತು ಚಿಕಿತ್ಸೆಯಲ್ಲಿಯೂ ಯಾವುದೇ ತಾರತಮ್ಯ ಇರಬಾರದು. ಪ್ರತಿಯೊಬ್ಬರಿಗೂ ಸಮಾನ ಗುಣಮಟ್ಟದ ವೈದ್ಯಕೀಯ ಸೇವೆ ದೊರೆಯಬೇಕು" ಎಂದು ಆಶಿಸಿದರು.

ಕಲಬುರಗಿ ಗ್ರಾಮೀಣ ಕ್ಷೇತ್ರದ ಶಾಸಕ ಬಸವರಾಜ್ ಮತ್ತಿಮೂಡ್ ಮಾತನಾಡಿ, "ಇಂದಿನ ದಿನಗಳಲ್ಲಿ ಡೊನೇಷನ್ ಕೊಟ್ಟರೂ ಉತ್ತಮ ವಿದ್ಯಾಸಂಸ್ಥೆಗಳಿಗೆ ಅಡ್ಮಿಷನ್ ಸಿಗುವುದು ಕಷ್ಟ. ಆದರೆ ಸದ್ಗುರುಗಳು ಖುದ್ದಾಗಿ ಹಳ್ಳಿಗಳಿಗೆ ತೆರಳಿ, ಬಡ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಂದ ಬಿಡಿಗಾಸನ್ನೂ ಪಡೆಯದೆ ಉಚಿತ ಶಿಕ್ಷಣ ನೀಡಿ ವೈದ್ಯರನ್ನಾಗಿ, ಇಂಜಿನಿಯರ್ಗಳನ್ನಾಗಿ ಮಾಡುತ್ತಿದ್ದಾರೆ. ಕಲಬುರಗಿಯಲ್ಲಿ ಶ್ರೀ ಸತ್ಯಸಾಯಿ ಮಾನವೀಯ ವಿಶ್ವವಿದ್ಯಾಲಯ ಸ್ಥಾಪನೆಯಾಗಿರುವುದು ನಮ್ಮ ಭಾಗ್ಯ," ಎಂದು ಕೃತಜ್ಞತೆ ಸಲ್ಲಿಸಿದರು.

"ನನ್ನ ಕ್ಷೇತ್ರದಲ್ಲಿ ಸದ್ಗುರುಗಳು ವಿಶ್ವವಿದ್ಯಾಲಯ ಸ್ಥಾಪಿಸಿದ್ದಾರೆ. ಅವರ ನೇತೃತ್ವದಲ್ಲಿ ನಡೆಯುತ್ತಿರುವ ಈ ನಿಸ್ವಾರ್ಥ ಸೇವಾ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು, ಸಾಧ್ಯವಾದ ಎಲ್ಲ ರೀತಿಯ ಸಹಕಾರ ನೀಡಲು ಬದ್ಧನಾಗಿದ್ದೇನೆ" ಎಂದು ಭರವಸೆ ನೀಡಿದರು.

ಕಾರ್ಯಕ್ರಮದ ಆರಂಭದಲ್ಲಿ ವಿದ್ವಾನ್ ಶ್ರೀ ಸುಬ್ರಹ್ಮಣ್ಯ ಭಟ್ ಅವರು ಹೋಮಗಳ ಮಹತ್ವವನ್ನು ವಿವರಿಸಿದರು. "ನವರಾತ್ರಿಯ 7ನೇ ದಿನದಂದು ಪೂಜಿಸಲ್ಪಡುವ 'ಕಾಳರಾತ್ರಿ' ದೇವಿಯು ಮನುಷ್ಯನ ಅಂತರಂಗದಲ್ಲಿರುವ ಕಾಮ, ಕ್ರೋಧಗಳೆಂಬ ಅಂಧಕಾರವನ್ನು ಕಳೆದು ಮಂಗಳವನ್ನು ಕರುಣಿಸುವ ತಾಯಿ. 24 ಅಕ್ಷರಗಳ ಗಾಯತ್ರಿ ಮಂತ್ರವನ್ನು ದಿನಕ್ಕೆ 3,000 ಬಾರಿ ಪಠಿಸಿದರೆ, ಅದು ನಮ್ಮ ದೇಹದಲ್ಲಿರುವ 72,000 ನರತಂತುಗಳನ್ನು ಶುದ್ಧೀಕರಿಸಿ ಜ್ಞಾನದ ಬೆಳಕನ್ನು ನೀಡುತ್ತದೆ" ಎಂದು ತಿಳಿಸಿದರು.

ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಹಾಗೂ ಮಾಜಿ ಶಾಸಕ ಶ್ರೀ ವೀರಣ್ಣ ಚರಂತಿಮಠ್ ಉಪಸ್ಥಿತರಿದ್ದರು. ಪ್ರಶಾಂತಿ ಬಾಲಮಂದಿರ ಟ್ರಸ್ಟ್ ಅಧ್ಯಕ್ಷ ಡಾ ಬಿ.ಎನ್.ನರಸಿಂಹಮೂರ್ತಿ ಉಪಸ್ಥಿತರಿದ್ದರು.



**ಅನುಭವ ಮಂಟಪ:** ವಚನ ಗಾಯನ ಭಾನುವಾರ ಸಂಜೆ ಸತ್ಯ ಸಾಯಿ ಗ್ರಾಮದಲ್ಲಿ ಅನುಭವ ಮಂಟಪ ವಿಶೇಷ ವಚನ ಗಾಯನ ಕಾರ್ಯಕ್ರಮ ನಡೆಯಲಿದೆ.

ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯದ ನಾದಗುರುಕುಲದ ವಿದ್ಯಾರ್ಥಿಗಳು ಈ ಕಾರ್ಯಕ್ರಮ ನಡೆಸಿ ಕೊಡಲಿದ್ದಾರೆ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಆಯ್ದಕ್ಕಿ ಲಕ್ಕಮ್ಮ, ಹಡಪದ ಅಪ್ಪಣ್ಣ, ಸಿದ್ದರಾಮೇಶ್ವರ, ಜೇಡರ ದಾಸಿಮಯ್ಯ, ಚೆನ್ನಬಸವಣ್ಣ ಈ 10 ಜನ ಶಿವಶರಣರ ತಲಾ ಒಂದೊಂದು ವಚನವನ್ನು ಆಯ್ದುಕೊಳ್ಳಲಾಗಿದೆ. ಹಡಪದ ಅಪ್ಪಣ್ಣನ ಅಂಗವ ಮರೆದು ಲಿಂಗವ ಕೂಡಿ ವಚನವು ಮಾಂಡ್ ರಾಗದಲ್ಲಿದ್ದರೆ, ಆಯ್ದಕ್ಕಿ ಲಕ್ಕಮ್ಮನ ಗರ್ವದಿಂದ ಮಾಡುವ ಭಕ್ತಿ ವಚನವು ಶುದ್ಧ ಸಾರಂಗ ರಾಗದಲ್ಲಿ ಸಂಯೋಜಿಸಲ್ಪಟ್ಟಿದೆ. ಹೀಗೆ 10 ರಾಗಗಳಲ್ಲಿ 10 ವಚನಗಳು ಅರ್ಥ ವಿವರಣೆ ಯೊಂದಿಗೆ ಪ್ರಸ್ತುತಪಡಿಸಲ್ಪಡುತ್ತವೆ.

# ರಾಹುಲ್‌ಗಾಂಧಿ ನಾಯಕತ್ವದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲ: ಜಗದೀಶ್ ಶೆಟ್ಟರ್

**ಕಲಬುರಗಿ, ಅ. 17:** ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನಾಯಕತ್ವ ಇರುವವರೆಗೆ ಕಾಂಗ್ರೆಸ್ ದೇಶದಲ್ಲಿ ಅಧಿಕಾರಕ್ಕೆ ಬರುವುದು ಸಾಧ್ಯವೇ ಇಲ್ಲ. ರಾಜಕೀಯ ಪ್ರಬುದ್ಧತೆ ಇಲ್ಲ. ತನಗೆ ತಿಳಿಯುವದಿಲ್ಲ, ಮತ್ತೊಬ್ಬರು ಹೇಳಿದ್ದನ್ನು ಕೇಳುವದಿಲ್ಲ. ಇಂಥ ನಾಯಕತ್ವದಲ್ಲಿ ಪಕ್ಷ ಬೆಳೆದು ಅಧಿಕಾರ ಹಿಡಿಯಲು ಸಾಧ್ಯವೇ? ಎಂದು ಬಿಜೆಪಿ ಸಂಸದ ಜಗದೀಶ್ ಶೆಟ್ಟರ್, ರಾಹುಲ್ ಗಾಂಧಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ರಾಹುಲ್ ಗಾಂಧಿಯನ್ನು ಸಮೀಪದಿಂದ ನೋಡಿದ ನಮತರ ಇಂಥ ಹೇಳಿಕೆ ನೀಡುತ್ತಿದ್ದೇನೆ ಎಂದ ಅವರು, ರಾಹುಲ್ ಗಾಂಧಿ ಹುಡುಗಾಟವೂ ಅಲ್ಲ, ಪ್ರಬುದ್ಧತೆಯೂ ಅಲ್ಲದ ಒಂದು ರೀತಿಯ ವಿಕ್ಷಿಪ್ತ ಮನಸ್ಸಿನ ವ್ಯಕ್ತಿ. ಹೀಗಾಗಿ ತಾಹುಲ್ ಗಾಂಧಿ ನಾಯಕತ್ವದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ ಎಂದು ಟೀಕಿಸಿದರು.

ಇವಿಎಂ, ಮತಗಳ್ಳತನ ಮತ್ತು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿಚಾರದಲ್ಲಿ ಕಾಂಗ್ರೆಸ್ ಮಾಡುತ್ತಿರುವ ಆರೋಪಗಳಿಗೆ ಆಧಾರಗಳಿಲ್ಲ. ಆಧಾರಗಳನ್ನು ಕೊಡಲು ರಾಹುಲ್ ಸಿದ್ಧರಿಲ್ಲ. ನಾನು ಹೇಳುತ್ತೇನೆ ನೀವು ಕೇಳಬೇಕು ಎಂಬ ಸರ್ವಾಧಿಕಾರ ಧೋರಣೆ ಅವರದು. ಇದು ಪ್ರಜಾಪ್ರಭುತ್ವದ ರಾಷ್ಟ್ರ. ಇಲ್ಲಿ ಸರ್ವಾಧಿಕರ ನಡೆಯುವದಿಲ್ಲ. ಇವಿಎಂ ಸರಿಯಿಲ್ಲವೆಂದಾದರೆ, ಕರ್ನಾಟಕ, ತೆಲಂಗಾಣ ಮತ್ತು ಹಿಮಚಲ ಪ್ರದೇಶದಲ್ಲಿ ಕಾಂಗ್ರೆಸ್ ಹೇಗೆ ಗೆದ್ದಿತು? ಇದಕ್ಕೆ ರಾಹುಲ್ ಬಳಿ ಉತ್ತರವಿಲ್ಲ ಎಂದು ಟೀಕಿಸಿದರು.

ಇನ್ನು ಎಸ್.ಐ.ಆರ್. ಗೆ ಸಂಬಂಧಿಸಿದಂತೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶಕುಮಾರ ರಾಜಿನಾಮೆ ನೀಡಬೇಕೆನ್ನುತ್ತರೆ. ಎಸ್.ಐ.ಆರ್. ಸರಿಯಾಗಿ ನ'ಡ'ಂ'ು'ು ತ್ತಿ ಲ್ಲ ವ'ಂದಾ ದ'ರ' ಲೋಪದೋಷಗಳೇನು ತಿಳಿಸಿ ಆಯೋಗದ ಗಮನಕ್ಕೆ ಗಮನಕ್ಕೆ ತನ್ನಿ ಎಂದರೆ ಅದಕ್ಕೂ ಸಿದ್ಧರಿಲ್ಲ. ಸರಿಯಿಲ್ಲವೆಂದು ನಾನು ಹೇಳ್ತೆನೆ ಎನ್ನುವ ಮನುಷ್ಯನ ಕೈಯಲ್ಲಿ ಕಾಂಗ್ರೆಸ್ ನಾಯಕತ್ವ ಇರುವುದು ಈ ದೇಶದ ಬಹುದೊಡ್ಡ ದುರಂತ ಎಂದು ಶೆಟ್ಟರ್ ಹೇಳಿದರು.

ಕಾಂಗ್ರೆಸ್ ನಾಯಕರು ಚುನಾವಣಾ ವ್ಯವಸ್ಥೆಯ ವಿರುದ್ಧ ನಿರಂತರವಾಗಿ



ಆರೋಪ ಮಾಡುತ್ತಿದ್ದಾರೆ. ಆದರೆ, ತಮ್ಮ ಆರೋಪಗಳನ್ನು ಸಾಬೀತುಪಡಿಸಲು ಅಗತ್ಯ ದಾಖಲೆಗಳನ್ನು ಯಾರೊಬ್ಬರೂ ನೀಡುತ್ತಿಲ್ಲ. ಇವಿಎಂ ಜಾರಿಗೆ ತಂದದ್ದೇ ಇದೇ ಕಾಂಗ್ರರೆಸ್ ನಾಯಕ ರಾಜೀವ ಗಾಂಧಿ ಎಂಬುದನ್ನೂ ಕಾಂಗ್ರೆಸ್ಸಿಗರು ಮರೆತಂತಿದೆ ಎಂದರು.

ಇವಿಎಂ ಬಳಕೆ 1982ರಲ್ಲೇ ಪ್ರಾಯೋಗಿಕವಾಗಿ ಇಂದಿರಾ ಕಾಲದಲ್ಲಿ ಆರಂಭವಾಗಿದ್ದು, ಈ ವ್ಯವಸ್ಥೆಗೆ ಸಂಬಂಧಿಸಿದ ಕಾನೂನು ರೂಪಿಸುವಲ್ಲಿ ಕಾಂಗ್ರೆಸ್ ಅತ್ಯಂತ ಪ್ರಮುಖ ಪಾತ್ರವಹಿಸಿದೆ. ರಾಜೀವ ಗಾಂಧಿ ಚುನಾವಣೆಯಕಲ್ಲಿ ಆಧುನಿಕ ಪದ್ಧತಿ ಅಗತ್ಯವೆಂದು ಪ್ರತಿಪದಿಸುತ್ತಿದ್ದರು. ಅವರ ಅವಧಿಯಲ್ಲಿ ಹಲವು ಕಡೆ ಇವಿಎಂ ಮೂಲಕವೇ ಮತದಾನ ನಡೆಯಿತು. ಅನಂತರ 2004ರ ಲೋಕಸಭೆ ಚುನಾವಣೆಯಲ್ಲಿ ಇವಿಎಂ ಮೂಲಕವೇ ಕಾಂಗ್ರೆಸ್ ಗೆಲುವು ಸಾಧಿಸಿತ್ತು. ನಂತರವೂ ಹಲವು ಚುನಾವಣೆಗಳಲ್ಲಿ ಕಾಂಗ್ರೆಸ್ ಜಯಗಳಿಸಿದೆ. ಆದರೆ, 2014ರ ಬಳಿಕ ಎನ್‌ಡಿಎ ಗೆಲುವು ಸಾಧಿಸುತ್ತಿರುವುದರಿಂದ ಕಾಂಗ್ರೆಸ್ಸಿಗರಿಗೆ ಇವಿಎಂ ಅಂದರೆ ಆಗುತ್ತಿಲ್ಲ. ಸೋಲು ಸಹಿಸಿಕೊಳ್ಳಲು ಕಾಂಗ್ರೆಸ್ ಸಿದ್ಧವಿಲ್ಲ. ಅಧಿಕಾರ ತಮ್ಮ ಗಾಂಧಿ ಕುಟುಂಬದ ಹಕ್ಕು. ಬೇರೆಯವರು ಅಧಿಕಾರಕ್ಕೆ ಬರಲೇಕೂಡದು ಎಂಬ ಧೋರಣೆಯಿಂದ ಇವಿಎಂ ವಿರುದ್ಧ ಆರೋಪ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ವಿವಿಪ್ಯಾಟ್ ವ್ಯವಸ್ಥೆಯ ಬಗ್ಗೆಯೂ ಸುಪ್ರೀಂ ಕೋರ್ಟ್‌ನಲ್ಲಿ ಪರಿಶೀಲನೆ ನಡೆದಿದೆ. ಇವಿಎಂಗಳಲ್ಲಿ ದೋಷಗಳಿದ್ದರೆ ಅವುಗಳನ್ನು ಸಾಬೀತುಪಡಿಸಲಿ ಎಂದು ಸವಾಲು ಹಾಕಿದರೂ ರಾಹುಲ್ ಗಾಂಧಿ ಮುಂದೆ ಬರುತ್ತಿಲ್ಲ. ಕೇವಲ ವಿರೋಧ ಮಾಡಬೇಕೆಂಬ ಏಕಮಾತ್ರ ಉದ್ದೇಶದಿಂದ ವಿರೋಧಿಸುತ್ತಿದ್ದಾರೆ ಎಂದರು.

ಕರ್ನಾಟಕದಲ್ಲಿಯೂ ಇವಿಎಂ ಮೂಲಕ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ತಮಿಳುನಾಡಿನಲ್ಲಿ ಟಿವಿಕೆ ಗೆಲುವು ಸಾಧಿಸಿದೆ. ಕೇರಳದಲ್ಲಿ ಎಸ್‌ಐಆರ್‌ನಿಂದಲೇ ಕಾಂಗ್ರೆಸ್ ಗೆಲುವು ಸಾಧಿಸಿದೆ ಎಂದು ಅಲ್ಲಿನ ಕಾಂಗ್ರೆಸ್ ನಾಯಕರೇ ಹೇಳುತ್ತಿದ್ದಾರೆ ಎಂದು ಶೆಟ್ಟರ್ ತಿಳಿಸಿದರು.

ಮತದಾರರ ಪಟ್ಟಿಯಲ್ಲಿ ಆಕ್ಷೇಪಗಳಿದ್ದರೆ ಫಾರಂ ನಂಬರ್ 7 ಮೂಲಕ ದೂರು ಸಲ್ಲಿಸಲು ಅವಕಾಶವಿದೆ. ಆದರೆ, ಆಕ್ಷೇಪ ಸಲ್ಲಿಸಿದ ಮಾತ್ರಕ್ಕೆ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಲಾಗುವುದಿಲ್ಲ. ಪಾರದರ್ಶಕ ಚುನಾವಣಾ ವ್ಯವಸ್ಥೆ ಇದ್ದರೂ ಕಾಂಗ್ರೆಸ್ ಅದನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ ಎಂದು ಅವರು ಆರೋಪಿಸಿದರು.

## ಕುಡಿಯುವ ನೀರು, ಮೇವಿಗೆ ಕೊರತೆಯಾಗದಂತೆ ಎಚ್ಚರ ವಹಿಸಿ: ಡಾ.ತ್ರಿಲೋಕಚಂದ್ರ ಕೆ.ವಿ ಸೂಚನೆ

**ಬಳ್ಳಾರಿ,ಅ.17.**ಕುಡಿಯುವ ನೀರು, ಮೇವು ಸೇರಿದಂತೆ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಅಧಿಕಾರಿಗಳು ನಿರಂತರ ನಿಗಾ ವಹಿಸಿ, ಜನ-ಜಾನುವಾರುಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ತ್ರಿಲೋಕ ಚಂದ್ರ ಕೆ.ವಿ ಅವರು ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ವಿಡಿಯೋ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜಿಲ್ಲೆಯ ?ಬರ ಪರಿಸ್ಥಿತಿ ನಿರ್ವಹಣೆ? ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

***ಶೇ.49ರಷ್ಟು ಮಳೆ ಕೊರತೆ:***

ಬಳ್ಳಾರಿ ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದು, ಬರ ಪರಿಸ್ಥಿತಿ ತೀವ್ರಗೊಂಡಿದೆ. ನೈರುತ್ಯ ಮುಂಗಾರು ಅವಧಿಯಲ್ಲಿ (ಜೂನ್ 1 ರಿಂದ ಸೆಪ್ಟೆಂಬರ್ 30 ರವರೆಗೆ) ಜಿಲ್ಲೆಯಲ್ಲಿ ವಾಡಿಕೆಯಂತೆ 365.6 ಮಿ.ಮೀ. ಮಳೆಯಾಗಬೇಕಿತ್ತು, ಆದರೆ ಕೇವಲ 186.3 ಮಿ.ಮೀ. ಮಳೆಯಾಗಿದ್ದು, ಶೇಕಡಾ 49 ರಷ್ಟು ಕೊರತೆ ಕಂಡುಬಂದಿದೆ. ಅದರಲ್ಲೂ ಸಂಡೂರು ತಾಲೂಕಿನಲ್ಲಿ ಶೇ. 68 ಹಾಗೂ ಕಂಪ್ಲಿ ತಾಲೂಕಿನಲ್ಲಿ ಶೇ. 65 ರಷ್ಟು ಗಣನೀಯ ಮಳೆ ಕೊರತೆ ದಾಖಲಾಗಿದೆ. ಪರಿಣಾಮವಾಗಿ ಅಂತರ್ಜಲ ಮಟ್ಟವು ತೀವ್ರವಾಗಿ ಕುಸಿದಿದ್ದು, ಸಂಡೂರಿನಲ್ಲಿ ಗರಿಷ್ಠ 8.26 ಮೀಟರ್‌ಗಳಷ್ಟು ಅಂತರ್ಜಲ ಕುಸಿತ ಕಂಡಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ತಿಳಿಸಿದರು.



***71,756 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟ:*:** ಜಿಲ್ಲೆಯಲ್ಲಿ ನಡೆಸಲಾದ ಕ್ಷೇತ್ರ ಪರಿಶೀಲನೆ ವರದಿಯ ಪ್ರಕಾರ ಶೇ. 96.87 ರಷ್ಟು ಪ್ಲಾಟ್‌ಗಳಲ್ಲಿ ಶೇಕಡಾ 50 ಕ್ಕಿಂತಲೂ ಹೆಚ್ಚಿನ ಬೆಳೆ ಹಾನಿಯಾಗಿದೆ. ಒಟ್ಟು 71,756.5 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, ಇದರಲ್ಲಿ 67,236.5 ಹೆಕ್ಟೇರ್ ಕೃಷಿ ಹಾಗೂ 4,520 ಹೆಕ್ಟೇರ್ ತೋಟಗಾರಿಕೆ ಬೆಳೆಗಳು ಸೇರಿವೆ. ಸಿರುಗುಪ್ಪ ತಾಲೂಕಿನಲ್ಲಿ ಗರಿಷ್ಠ 44,231.6 ಹೆಕ್ಟೇರ್ ಹಾಗೂ ಸಂಡೂರಿನಲ್ಲಿ 20,278 ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಎನ್‌ಡಿಆರ್‌ಎಫ್ ನಿಯಮಾವಳಿಗಳ ಪ್ರಕಾರ ಅಂದಾಜು ರೂ. 79.91 ಕೋಟಿ ನೆರವು ಕೋರಲಾಗಿದ್ದು, ?ಪರಿಹಾರ' ತಂತ್ರಾಂಶದಲ್ಲಿ ರೈತರ ವಿವರಗಳನ್ನು ದಾಖಲಿಸುವ ಪ್ರಕ್ರಿಯೆ ಈಗಾಗಲೇ ಚಾಲ್ತಿಯಲ್ಲಿದೆ. ಬೆಳೆ ವಿಮೆ ಯೋಜನೆಯಡಿ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯ 50,828 ರೈತರು ನೋಂದಾಯಿಸಿ ಕೊಂಡಿದ್ದಾರೆ ಎಂದು ತಿಳಿಸಿದರು.

ಗ್ರಾಮೀಣ ಭಾಗದಲ್ಲಿ ಒಟ್ಟು 1,874 ಬೋರ್‌ವೆಲ್‌ಗಳಿದ್ದು, ನೀರಿನ ಇಳುವರಿ ಕಡಿಮೆಯಾದ ಕಾರಣ ಪ್ರಸ್ತುತ 204 ಬೋರ್‌ವೆಲ್‌ಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡಿವೆ. ಮಳೆಯಾದ ಬಳಿಕ ಇವು ಮರುಪೂರಣಗೊಳ್ಳುವ ನಿರೀಕ್ಷೆಯಿದೆ. ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸಲು ವಿಬಿ-ಜಿ ರಾಮ್ ಜಿ ಯೋಜನೆಯಡಿ 53,167 ಕುಟುಂಬಗಳಿಗೆ ಕೆಲಸ ನೀಡಲಾಗಿದ್ದು, 11.20 ಲಕ್ಷ ಮಾನವ ದಿನಗಳನ್ನು ಸೃಜಿಸಿ, ಕೂಲಿ ಪಾವತಿಗಾಗಿ ರೂ. 2,735.24 ಲಕ್ಷ ವೆಚ್ಚ ಮಾಡಲಾಗಿದೆ ಎಂದು ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಅವರು ಸಭೆಗೆ ತಿಳಿಸಿದರು.

ಜಿಲ್ಲೆಯ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಮುನ್ನೆಚ್ಚರಿಕೆ ವಹಿಸಬೇಕು. ಜಾನುವಾರುಗಳಿಗೆ ಮುಂದಿನ 23 ವಾರಗಳಿಗೆ ಸಾಕಾಗುವಷ್ಟು (ಸುಮಾರು 2.20 ಲಕ್ಷ ಟನ್) ಮೇವು ಲಭ್ಯವಿದ್ದು, ಕೊರತೆ ನೀಗಿಸಲು ಈಗಾಗಲೇ ಜಿಲ್ಲೆಯಾದ್ಯಂತ 3,334 ಮೇವಿನ ಕಿರುಪೊಟ್ಟಣಗಳನ್ನು ರೈತರಿಗೆ ವಿತರಿಸಲಾಗಿದೆ ಎಂದು ಪಶು ಸಂಗೋಪನಾ ಇಲಾಖಾಧಿಕಾರಿಗಳು ಸಭೆಗೆ ತಿಳಿಸಿದರು.

***ನೀರು ನಿರ್ವಹಣಾ ಕಾರ್ಯತಂತ್ರ ಅನುಸರಿಸಿ:** ನೀರಿನ ಕೊರತೆ ಕಂಡುಬಂದಾಗ ಮೊದಲು ಹಳೆಯ ಕೊಳವೆಬಾವಿಗಳನ್ನು ಫ್ಲಶಿಂಗ್ ಮಾಡುವುದು, ಅದು ವಿಫಲವಾದರೆ ಖಾಸಗಿ ಬೋರ್‌ವೆಲ್ ಬಾಡಿಗೆಗೆ ಪಡೆಯುವುದು, ನಂತರ ಟ್ಯಾಂಕರ್ ಮೂಲಕ ಪೂರೈಸುವುದು ಮತ್ತು ಕೊನೆಯ ಆಯ್ಕೆಯಾಗಿ ಮಾತ್ರ ಹೊಸ ಬೋರ್‌ವೆಲ್ ಕೊರೆಯುವ ಕಟ್ಟುನಿಟ್ಟಿನ ನಿಯಮ ಅನುಸರಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

ನವೆಂಬರ್ 10?11ರ ಸುಮಾರಿಗೆ ಹೆಚ್.ಎಲ್.ಸಿ/ಎಲ್.ಎಲ್.ಸಿ ಕಾಲುವೆಗಳ ನೀರು ಸ್ಥಗಿತಗೊಳ್ಳುವ ಸಾಧ್ಯತೆಯಿದೆ. ನೀರಾವರಿ ಸಲಹಾ ಸಮಿತಿ ಸಭೆಯ ಮೂಲಕ ನವೆಂಬರ್ ಅಂತ್ಯದವರೆಗೆ ನೀರು ಹರಿಸಲು ಆನ್-ಅಂಡ್-ಆಫ್ ಮಾದರಿಯ ನಿರ್ವಹಣೆಗೆ ಪ್ರಯತ್ನಿಸಲಾಗುತ್ತಿದೆ ಎಂದು ನೀರಾವರಿ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಬಳ್ಳಾರಿ ನಗರ ಪ್ರದೇಶಗಳ ಕುಡಿಯುವ ನೀರಿನ ಸಂಗ್ರಹಣಾಗಾರಗಳಲ್ಲಿ (ಇಂಪೌಂಡಿಂಗ್ ರಿಸರ್ವಾಯರ್) 12,000 ಎಂ.ಎಲ್ ಒಟ್ಟು ಸಾಮರ್ಥ್ಯವಿದ್ದು, ಈಗಾಗಲೇ 8,500 ಎಂ.ಎಲ್ ನೀರು ಸಂಗ್ರಹವಾಗಿದೆ.

ನವೆಂಬರ್ 11ರ ವೇಳೆಗೆ ಇದು 11,000 ಎಂ.ಎಲ್.ಡಿ ತಲುಪಲಿದ್ದು, ಕನಿಷ್ಠ 100 ದಿನಗಳ ಬೇಡಿಕೆಗೆ ಸಾಕಾಗಲಿದೆ. ಮುಂದಿನ ವರ್ಷದ ಮಾರ್ಚ್ ಮತ್ತು ಮೇ ತಿಂಗಳಲ್ಲಿ ಹೆಚ್ಚುವರಿ ನೀರು ಪಡೆಯುವ ಮೂಲಕ ಜೂನ್ ಅಂತ್ಯದವರೆಗೂ ಸುಲಭವಾಗಿ ನಿರ್ವಹಿಸಲು ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದು ಮಹಾನಗರ ಪಾಲಿಕೆಯ ಇಂಜಿನಿಯರ್ ಸಭೆಗೆ ತಿಳಿಸಿದರು.



ಕಬ್ಬು ಬೆಳೆಗಾರರು ಆಯೋಜಿಸಿದ್ದ 'ಹುಬ್ಬಳ್ಳಿ ಚಲೋ' ಪಾದಯಾತ್ರೆಯು ಶನಿವಾರ ನಾಲ್ಕನೇ ದಿನಕ್ಕೆ ಕಾಲಿರಿಸಿದ್ದು, ಬೆಳಗಾವಿ ಜಿಲ್ಲೆಯ ಕಿತ್ತೂರು ಚನ್ನಮ್ಮ ತಲುಪಿದೆ. ಪ್ರತಿಭಟನಾ ನಿರತ ರೈತ ಮುಖಂಡರೊಂದಿಗೆ ನೇರ ಮಾತುಕತೆ ನಡೆಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಿತ್ತೂರಿಗೆ ಭೇಟಿನೀಡಿದರು.

## ಡೆಂಗ್ಯೂ ರೋಗ ನಿಯಂತ್ರಣಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ: ಡಾ. ಆರ್. ಅಬ್ದುಲ್ಲಾ ಕರೆ



**ಬಳ್ಳಾರಿ,ಅ.17.**ಡೆಂಗ್ಯೂ ರೋಗ ನಿಯಂತ್ರಣಕ್ಕೆ ಸಾರ್ವಜನಿಕರ ಸಹಕಾರ ಅತ್ಯಂತ ಅಗತ್ಯವಾಗಿದೆ ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಆರ್. ಅಬ್ದುಲ್ಲಾ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಡಿವಿಬಿಸಿಡಿಸಿ ವಿಭಾಗ ಹಾಗೂ ಬ್ರೂಸ್‌ಪೇಟೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಕೊಳಗೇರಿ ಬಡಾವಣೆಯಲ್ಲಿ ಡೆಂಗ್ಯೂ ಜ್ವರ ತಡೆ ಕುರಿತು ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮ ಹಾಗೂ ಲಾರ್ವಾ ಸಮೀಕ್ಷಾ ಕಾರ್ಯದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಡೆಂಗ್ಯೂ ಜ್ವರವು ಈಡಿಸ್ ಸೋಂಕಿತ ಸೊಳ್ಳೆ ಕಡಿತದಿಂದ ಹರಡುವ ವೈರಲ್ ಸೋಂಕಾಗಿದೆ. ಹಠಾತ್ ಜ್ವರ, ತೀವ್ರ ತಲೆನೋವು, ಕಣ್ಣಿನ ಹಿಂಭಾಗದಲ್ಲಿ ನೋವು, ಕೀಲು ಹಾಗೂ ಸ್ನಾಯು ನೋವು, ವಾಕರಿಕೆ, ವಾಂತಿ ಮತ್ತು ಚರ್ಮದ ಮೇಲೆ ಕೆಂಪು ದದ್ದುಗಳು ಕಂಡು ಬರುವುದು ಇದರ ಪ್ರಮುಖ ಲಕ್ಷಣಗಳಾಗಿವೆ.

ಸಾರ್ವಜನಿಕರು ಮನೆಯ ಸುತ್ತಮುತ್ತ ತ್ಯಾಜ್ಯ ವಸ್ತುಗಳಲ್ಲಿ ನೀರು ನಿಲ್ಲದಂತೆ ಸ್ವಚ್ಛತೆ ಕಾಪಾಡಬೇಕು. ನೀರು ಸಂಗ್ರಹಿಸುವ ಪಾತ್ರೆಗಳಿಗೆ ಮುಚ್ಚಳ ಹಾಕಬೇಕು, ವಾರಕ್ಕೊಮ್ಮೆ ನೀರಿನ ತೊಟ್ಟಿಗಳನ್ನು ಖಾಲಿ ಮಾಡಿ ಸ್ವಚ್ಛಗೊಳಿಸಿ ಬಿಸಿಲಿನಲ್ಲಿ ಒಣಗಿಸಬೇಕು. ಮೈತುಂಬ ಬಟ್ಟೆ ಧರಿಸುವುದು, ಸೊಳ್ಳೆ ಪರದೆಗಳನ್ನು ಬಳಸುವುದು ಹಾಗೂ ಸಂಜೆ ವೇಳೆ ಬೇವಿನ ಸೊಪ್ಪಿನ ಹೊಗೆ ಹಾಕುವ ಮೂಲಕ ಸೊಳ್ಳೆಗಳಿಂದ ರಕ್ಷಣೆ ಪಡೆಯಬೇಕು ಎಂದು ಸಲಹೆ ನೀಡಿದರು.

## ವಿಕಸಿತ ಭಾರತ ಸಂಕಲ್ಪ ನಮ್ಮದಾಗಲಿ: ಡಾ ಸದಾನಂದ ಪೆರ್ಲ

**ಕಲಬುರಗಿ, ಅ.17:** ಭಾರತದ ಸ್ವಾತಂತ್ರ್ಯದ 100ನೇ ವರ್ಷ 2047 ಕ್ಕೆ ಭಾರತ ಅಭಿವೃದ್ಧಿ ಹೊಂದಿದ ದೇಶವಾಗಿ ಕಟ್ಟುವ ಸಂಕಲ್ಪ ಈಡೇರಿಕೆಗೆ ಎಲ್ಲರೂ ಒಗ್ಗೂಡೋಣ ಎಂದು ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥರಾದ ಡಾ. ಸದಾನಂದ ಪೆರ್ಲ ಹೇಳಿದರು.

ಕಲಬುರಗಿ ರೋಟರಿ ಕ್ಲಬ್‌ನಲ್ಲಿ "ಭಾರತದ ವಿಕಸಿತ ನಡೆ" ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿ ಮಾತನಾಡಿ ಭಾರತ ಆರ್ಥಿಕ ಸೇರ್ಪಡೆಯ ಬೆಳವಣಿಗೆಯಲ್ಲಿ ವಿಶ್ವದಲ್ಲೇ ಈಗ 5ನೇ ಸ್ಥಾನ ಪಡೆದಿದೆ. ದೇಶ ಆರ್ಥಿಕವಾಗಿ 3ನೇ ಸ್ಥಾನ ಪಡೆಯಲು ಎಲ್ಲ ರಂಗಗಳಲ್ಲಿ ಸಿದ್ಧತೆ ಭರದಿಂದ ನಡೆದಿದೆ. ಕಳೆದ ಒಂದು ದಶಕದಲ್ಲಿ ಪ್ರಗತಿಗೆ ತೀವ್ರ ವೇಗ ಪಡೆದಿದ್ದು ಈಗ ದೇಶದಲ್ಲಿ 23 ಐಐಟಿ, 600 ವೈದ್ಯಕೀಯ ಕಾಲೇಜುಗಳು, 165 ಇಎಸ್‌ಐ ಆಸ್ಪತ್ರೆ, 26 ಏಮ್ಸ್, 450 ವಿಮಾನ ನಿಲ್ದಾಣಗಳು,14 ಬಂದರುಗಳು, ಉಡಾನ್ ಯೋಜನೆಯ 95 ವಿಮಾನ ನಿಲ್ದಾಣಗಳು ಹಾಗೂ ವಂದೇ





ಭಾರತ್, ಪಿಎಂ ಮಿತ್ರ ಜವಳಿ ಪಾರ್ಕ್, ಗತಿಶಕ್ತಿ, ವಿಬಿಜಿ ರಾಮ್ ಜಿ ಯೋಜನೆ, ಸ್ಕಿಲ್ ಇಂಡಿಯಾ, ಡಿಜಿಟಲ್ ಇಂಡಿಯಾ, ಬೇಟಿ ಪಡಾವೋ ಬೇಟಿ ಭೇಟಿ ಪಬಚಾವೋ, ಲಕ್ ಪತಿ ದೀದಿ, ಮಹಿಳಾ ಸನ್ಮಾನ್ ಯೋಜನೆ,ಮುದ್ರಾ, ಸಾರ್ಟ್ ಆಫ್ ಇಂಡಿಯಾ ಮುಂತಾದ ಯೋಜನೆಗಳು ಭಾರತವನ್ನು ವಿಕಾಸದತ್ತ ಕೊಂಡೊಯ್ಯಲು ಮಹತ್ವದ ಯೋಜನೆಗಳಾಗಿವೆ ಎಂದು ಹೇಳಿದರು. ರೋಟರಿ, ಲಯನ್ಸ್ ಮುಂತಾದ ಸ್ವಯಂ ಸೇವಾ ಸಂಸ್ಥೆಗಳು ವಿಕಸಿತ ಭಾರತದ ಸಂಕಲ್ಪ ಈಡೇರಿಕೆಗೆ ಕಾಯಾ ವಾಚಾ ಮನಸಾ ಕೈಜೋಡಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರೋಟರಿಯ ಅಧ್ಯಕ್ಷ ರಮೇಶ್ ಜಿ ತಿಪ್ಪನೂರು(ಬಂಧು )ಅಧ್ಯಕ್ಷತೆ ವಹಿಸಿದ್ದರು . ರವಿಕುಮಾರ್ ಜಗರ್ ಕಲ್ ಉಪಸ್ಥಿತರಿದ್ದರು. ಬಸವರಾಜ್ ಇಟಗಿ ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯ ಕೋರಲಾಯಿತು. ಕಾರ್ಯದರ್ಶಿ ಡಾ ಬಿ.ಎಸ್ ದೇಸಾಯಿ ಸ್ವಾಗತಿಸಿ ವಂದಿಸಿದರು.

## ರಾಜ್ಯ ಸರ್ಕಾರಕ್ಕೆ ವಿಪ್ರ ಸಮಾಜದಿಂದ ಅಭಿನಂದನೆ

# ಜಗದ್ಗುರು ಮಧ್ವಾಚಾರ್ಯ ಜಯಂತಿ ಸರ್ಕಾರದಿಂದಲೇ ಆಚರಣೆ ಆದೇಶ



ಕಲಬುರಗಿ ಪತ್ರಿಕಾ ಭವನದಲ್ಲಿ ಮಧ್ವಮತದ ಅನುಯಯಿಗಳಾದ ಗುರುಮಧ್ವ ನವಲಿ, ರಾಮಾಚಾರ್ಯ ಗಂಟಿ, ಶ್ರೀನಿವಾಸ ದೇಸಾಯಿ ಮುಂತಾದವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

**ಕಲಬುರಗಿ, ಅ. 17:** ಕರ್ನಾಟಕ ರಾಜ್ಯ ಸರ್ಕಾರವು ನಾಡಿನ ಮಹನೀಯರ ಜಯಂತಿಗಳನ್ನು ಆಚರಿಸುವ ಮೂಲಕ ಅವರ ಆದರ್ಶಗಳು ಹಾಗೂ ತತ್ವಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಮಹತ್ವದ ಕಾರ್ಯ ಮಾಡುತ್ತಿದೆ. ಈ ಬಾರಿ ಜಗದ್ಗುರು ಶ್ರೀ ಮಧ್ವಾಚಾರ್ಯರ ಜಯಂತಿಯನ್ನು ರಾಜ್ಯ ಸರ್ಕಾರದ ವತಿಯಿಂದಲೇ ಆಚರಿಸಲು ರಾಜ್ಯ ಸರಕಾರ ಆದೇಶಿಸಿರುವುದು ಮಧ್ವಾಚಾರ್ಯರ ಅನುಯಾಯಿಗಳಲ್ಲಿ ಸಂತಸ ತಂದಿದೆ ಸಂಗತಿ ಎಂದು ಗುರುಮಧ್ವಾಚಾರ್ಯ ನವಲಿ ಅವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ, ಕಳೆದ ತಿಂಗಳು ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ ಅಂಗವಾಗಿ ನಗರಕ್ಕೆ ಆಗಮಿಸಿದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ನಮ್ಮ ಬ್ರಾಹ್ಮಣ ಸಮಾಜದ ನಿಯೋಗದಿಂದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿಗಳಿಗೆ ನಮ್ಮ ಬೇಡಿಕೆಯ ಬಗ್ಗೆ ಮನವಿ ಸಲ್ಲಿಸಲು ಅನುವು ಮಾಡಿಕೊಟ್ಟ ಹಿನ್ನೆಲೆಯಲ್ಲಿ ರಾಜ್ಯ ಸರಕಾರವು ತ್ವರಿತವಾಗಿ ಜಗದ್ಗುರು ಶ್ರೀ ಮಧ್ವಾಚಾರ್ಯರ ಜಯಂತಿ ಸರ್ಕಾರದಿಂದ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಅಚರಿಸಲು ಆದೇಶ ಹೊರಡಿದ್ದನ್ನು ಅವರು ಮುಕ್ತಕಂಠದಿಂದ ಹರ್ಷ ವ್ಯಕ್ತಪಡಿಸಿದರು.

ಕರ್ನಾಟಕವು ಶ್ರೀ ಮಧ್ವಾಚಾರ್ಯರ ತತ್ವಸಿದ್ಧಾಂತಗಳಿಗೆ ಮಹತ್ವದ ನೆಲೆಯಾಗಿದೆ. ದ್ವೈತ ಸಿದ್ಧಾಂತದ ಪ್ರತಿಪಾದಕರಾದ ಮಧ್ವಾಚಾರ್ಯರು ಭಕ್ತಿ, ಈಶ್ವರನ ಮೇಲಿನ ದಾಸಭಾವ ಹಾಗೂ ಕರ್ತವ್ಯನಿಷ್ಠೆಯ ಮಹತ್ವವನ್ನು ಜಗತ್ತಿಗೆ ಸಾರಿದರು. ಅವರ ತತ್ವಗಳು ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳ ಮೇಲೆ ಮಹತ್ತರ ಪ್ರಭಾವ ಬೀರಿವೆ ಎಂದು ತಿಳಿಸಿದರು.

ಶ್ರೀ ಮಧ್ವಾಚಾರ್ಯರ ದ್ವೈತ ತತ್ವಸಿದ್ಧಾಂತವನ್ನು ಮತ್ತಷ್ಟು ವಿಸ್ತರಿಸಿ ಪ್ರಸಾರ ಮಾಡುವಲ್ಲಿ ಮಲಖೇಡದ ಶ್ರೀಮದ್ ಜಯತೀರ್ಥರ ಕೊಡುಗೆ ಅಪಾರವಾಗಿದೆ. ಜಯತೀರ್ಥರು ತಮ್ಮ ಶಾಸ್ತ್ರೀಯ ಗ್ರಂಥಗಳ ಮೂಲಕ ದ್ವೈತ ಸಿದ್ಧಾಂತಕ್ಕೆ ಭದ್ರವಾದ ತಾತ್ವಿಕ ನೆಲೆ ಕಲ್ಪಿಸಿದರು. ಅವರ ಪರಂಪರೆಯ ಮೂಲಕ ಹರಿದಾಸ ಸಾಹಿತ್ಯವೂ ಸಮೃದ್ಧವಾಗಿ ಬೆಳೆಯಿತು. ವಿಜಯ ದಾಸರು, ಗೋಪಾಲದಾಸರು ಹಾಗೂ ಪುರಂದರದಾಸರು ಸೇರಿದಂತೆ ದಾಸಶ್ರೇಷ್ಠರು ಭಕ್ತಿ ಪರಂಪರೆಯನ್ನು ಜನಸಾಮಾನ್ಯರಿಗೆ ತಲುಪಿಸಿದರು.

# ಸರ್ಕಾರಿ ಕಾಲೇಜಿಗೆ ಪ್ರಯೋಗಾಲಯ ಉಪಕರಣಗಳ ಕೊಡುಗೆ



ರಾಯಚೂರು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿಜ್ಞಾನ ವಿದ್ಯಾರ್ಥಿಗಳ ಶೈಕ್ಷಣಿಕ ಹಾಘೂ ಪ್ರಾಯೋಗಿಕ ಜ್ಞಾನ ವೃದ್ಧಿಗಾಗಿ ಶಿಲ್ಪಾ ಫೌಂಡೇಶನ್ ವತಿಯಿಂದ ಪ್ರಯೋಗಾಲಯ ಕೊಡುಗೆ ನೀಡಲಾಗಿದ್ದು, ವಿಷ್ಣುಕಾಂತ್ ಭುತಡಾ ಚಾಲನೆ ನೀಡಿದರು.

**ರಾಯಚೂರು, ಅ. 17:** ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿಜ್ಞಾನ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಪ್ರಾಯೋಗಿಕ ಜ್ಞಾನ ವೃದ್ಧಿಸುವ ಉದ್ದೇಶದಿಂದ ಶಿಲ್ಪಾ ಫೌಂಡೇಶನ್ ವತಿಯಿಂದ ಶಿಲ್ಪಾ ಮೆಡಿಕೇರ್ ಲಿಮಿಟೆಡ್ 9,19,616 ಮೌಲ್ಯದ ಪ್ರಯೋಗಾಲಯ ಉಪಕರಣಗಳನ್ನು ಕೊಡುಗೆಯಾಗಿ ನೀಡಿದೆ.

ಶಿಲ್ಪಾ ಮೆಡಿಕೇರ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ವಿಷ್ಣುಕಾಂತ್ ಭೂತಡಾ ಮಾತನಾಡಿ, ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ ಉದ್ಯಮಿಗಳು ಕೈಜೋಡಿಸಿದಾಗ ಗುಣಮಟ್ಟದ ಶಿಕ್ಷಣ ಒದಗಿಸಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಯಂಕಣ್ಣ ಮಾತನಾಡಿ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಣದ ಜತೆಗೆ ಉತ್ತಮ ಪ್ರಯೋಗಾಲಯ ಸೌಲಭ್ಯಗಳೂ ನಿರ್ಣಾಯಕ ಪಾತ್ರ ವಹಿಸುತ್ತವೆ. ವಿಷ್ಣುಕಾಂತ್ ಭೂತಡಾ ಅವರ ಕೊಡುಗೆಯು ವಿಜ್ಞಾನ ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆಗೆ ಬಲ ನೀಡುವುದರ ಜತೆಗೆ ಸಮಾಜಮುಖಿ ಉದ್ಯಮಶೀಲತೆಗೆ ಸ್ಫೂರ್ತಿದಾಯಕ ಉದಾಹರಣೆಯಾಗಿದೆ ಎಂದರು.

ಐಕ್ಯೂಎಸಿ ಸಂಯೋಜಕ ಮಹಾಂತೇಶ ಅಂಗಡಿ, ವಿಜ್ಞಾನ ವಿಭಾಗದ ಡೀನ್ ಸೋಮನಾಥ ರೆಡ್ಡಿ ಸಿ. ಪಾಟೀಲ ಹಾಗೂ ಭೌತವಿಜ್ಞಾನ ವಿಭಾಗದ ಮುಖ್ಯಸ್ಥೆ ವಿಜಯಶ್ರೀ ಪಾಟೀಲ ಉಪಸ್ಥಿತರಿದ್ದರು.

ಇಂಗ್ಲಿಷ್ ವಿಭಾಗದ ಮುಖ್ಯಸ್ಥ ರಾಘವೇಂದ್ರ ನಾಯಕ ನಿರೂಪಿಸಿದರು. ಬಿ.ಎಸ್‌ಸಿ ಐದನೇ ಸೆಮಿಸ್ಟರ್ ವಿದ್ಯಾರ್ಥಿನಿ ಸಿಂಧು ಹಲ್ಲೋರ್ ಪ್ರಾರ್ಥನಾ ಗೀತೆ ಹಾಡಿದರು. ರಸಾಯನಶಾಸ್ತ್ರ ವಿಭಾಗದ ಹನುಮೇಶ ಸ್ವಾಗತಿಸಿದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಶಿವರಾಜ ಕೊಪ್ಪರ ಅತಿಥಿಗಳನ್ನು ಪರಿಚಯಿಸಿದರು.

# ಸಕ್ಕರೆ ಕಾರ್ಖನೆ-ಕಬ್ಬು ಬೆಳೆಗಾರರ ಸಭೆ: ದರ ನಿಗದಿಮಾಡಿಕೊಂಡೇ ಕಬ್ಬು ಕಟಾವು ಆರಂಭಿಸಿ- ಡಿ.ಸಿ.ಇಕ್ರಮ್ ಶರೀಫ್ ಸೂಚನೆ

**ಕಲಬುರಗಿ, ಅ. 17:** ಪ್ರಸಕ್ತ 2026-27ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಬೆಳೆದಿರುವ ಕಬ್ಬು ಕಟಾವು ಪ್ರಕ್ರಿಯೆಗೆ ಬಂದಿದ್ದು, ರೈತರಿಂದ ಕಬ್ಬು ಖರೀದಿ ಮುನ್ನ ಪ್ರತಿ ಟನ್‌ಗೆ ನೀಡಲಾಗುವ ದರ, ಸಾಗಾಣಿಕೆ ವೆಚ್ಚ ಸೇರಿದಂತೆ ಇನ್ನಿತರ ವಿಷಯಗಳ ಕುರಿತು ಮುಂದಿನ ಒಂದು ವಾರದಲ್ಲಿ ಸೂಕ್ತವಾದ ನಿರ್ಧಾರಕ್ಕೆ ಬಂದ ನಂತವೇ ಕಬ್ಬು ಕಟಾವು ಪ್ರಕ್ರಿಯೆ ಆಂಭಿಸುವಂತೆ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಿಗೆ ಡಿ.ಸಿ. ಇಕ್ರಮ್ ಶರೀಫ್ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆ ಪ್ರತಿನಿಧಿಗಳ ಸಭೆಯಲ್ಲಿ ಕಬ್ಬು ಬೆಳೆಗಾರರು ಮತ್ತು ರೈತ ಸಂಘದ ಮುಖಂಡರುಗಳ ಅಹವಾಲು ಆಲಿಸಿ ಮಾತನಾಡಿದ ಅವರು, ಕಬ್ಬು ಕಟಾವಿಗೆ ಬಂದಿರುವುದಯಿರಿಂದ ವಿಳಂಬ ಮಾಡದೆ ಕಳೆದ ವರ್ಷದಂತೆ ಈ ವರ್ಷ ಸಹ ಜಿಲ್ಲೆಯ ಎಲ್ಲಾ ಐದು ಕಾರ್ಖಾನೆಗಳು ಪರಸ್ಪರ ಸಮಾಲೋಚನೆ ನಡೆಸಿ ರೈತರಿಗೆ ನ್ಯಾಯಯುತ ದರ ನೀಡುವ ನಿಟ್ಟಿನಲ್ಲಿ ಶೀಘ್ರದಲ್ಲಿಯೇ ಒಮ್ಮತ್ತದ ನಿರ್ಧಾರ ತೆಗೆದುಕೊಳ್ಳಬೇಕು ಎಂದರು.

ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಭೀಕರ ಬರಗಾಲದಿಂದ ರೈತರು ತತ್ತರಿಸಿದ್ದು, ಸಕ್ಕರೆ ಕಾರ್ಖಾನೆಗಳು ಜಿಪುಣತನ ಬಿಟ್ಟು ಉದಾರ ಮನಸ್ಸಿನಿಂದ ಪ್ರತಿ ಟನ್ ಕಬ್ಬಿಗೆ ದರ ನಿಗದಿ ಮಾಡಬೇಕು. ಎಥನಾಯಿಲ್, ಸಕ್ಕರೆ ಬೆಲೆ ಹೆಚ್ಚಾಗಿದೆ. ದಿನದಿಂದ ದಿನಕ್ಕೆ ಬೆಲೆ ಏರಿಕೆಯಿಂದ ಕಾರ್ಖಾನೆಗಳಿಗೆ ಲಾಭವಿದ್ದು, ಲಾಭದ ಅಂಶ ರೈತರಿಗೂ ಹಂಚಿ ಎಂದು ಕಾರ್ಖಾನೆ ಪ್ರತಿನಿಧಿಗಳಿಗೆ ಡಿ.ಸಿ. ಸಲಹೆ ನೀಡಿದರು.

ಕಬ್ಬು ಕಟಾವಿನಲ್ಲಿ ತಾರತಮ್ಯ, ಪ್ರತಿ ಕಂಪನಿಯ ಪ್ರತ್ಯೇಕ ದರ, ತೂಕದಲ್ಲಿ ಮೋಸ, ತಡವಾಗಿ ಪಾವತಿ, ಹಳೇ ಪಾವತಿ



ಬಾಕಿ ಕುರಿತು ಕಾರ್ಖಾನೆಗಳ ನಡೆಗೆ ಅಸಮಾಧಾನ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಗಳು, ರೈತರಿಗೆ ಕಾಲಮಿತಿಯಲ್ಲಿ ಹಣ ಪಾವತಿ ಮಾಡಬೇಕು. ಕಬ್ಬು ಕಟಾವು, ಕಬ್ಬಿನ ತೂಕ, ಹಣ ಪಾವತಿ ಹೀಗೆ ಪ್ರತಿ ಹಂತದಲ್ಲಿ ರೈತರಿಗೆ ಎಸ್.ಎಂ.ಎಸ್. ಮೂಲಕ ಮಾಹಿತಿ ನೀಡುವ ವ್ಯವಸ್ಥೆ ಎಲ್ಲಾ ಕಾರ್ಖಾನೆಗಳು ಜಾರಿಗೆ ತರಬೇಕು ಎಂದ ಅವರು, ಕಬ್ಬು ತೂಕದಲ್ಲಿ ಕಾರ್ಖಾನೆಯಿಂದ ಮೋಸವಾಗುತ್ತಿದೆ ಎಂಬ ರೈತ ಮುಖಂಡರ ಅಭಿಪ್ರಾಯದ ಹಿನ್ನೆಲೆಯಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿಗಳು ಆಗಾಗ ಸಕ್ಕರೆ ಕಾರ್ಖಾನೆಗಳಿಗೆ ಹಠಾತ್ ಭೇಟಿ ನೀಡಿ ತಪಾಸಣೆ ಮಾಡಬೇಕು ಎಂದರು.

ರೇಣುಕಾ ಶುಗರ್ಸ್‌ಗೆ ನೋಟಿಸ್: ಸಭೆಯಲ್ಲಿ ಭಾಗವಹಿಸಿದ ರೈತ ಮುಖಂಡ ರಮೇಶ ಪಾಟೀಲ ಮಾತನಾಡಿ, ರೇಣಿಕಾ ಶುರ್ಸ್ ಕಾರ್ಖಾನೆಯಿಂದ ಹೊರಸೂಸುವ ಬೂದಿಯಿಂದ ಕಾರ್ಖಾನೆ ಸುತ್ತ ಬೆಳೆಯುತ್ತಿರುವ ಬೆಳೆಗಳು ಹಾನಿಯಾಗಿವೆ. ಇದರಿಂದ ರೈತರು ಕಂಗೆಟ್ಟಿದ್ದು ಕಾರ್ಖಾನೆಯಿಂದಲೆ ಪರಿಹಾರ ಒದಗಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. ಇದಕ್ಕೆ ತೀವ್ರ ಗರಂ ಆದ ಡಿ.ಸಿ. ಇಕ್ರಂ ಶರೀಫ್ ಅವರು, ಇಷ್ಟೊಂದು ತಂತ್ರಜ್ಞಾನ ಇದ್ದರು ಸಂಸ್ಕರಿಸದ ಕಲುಷಿತ ಹೊಗೆ ಹೊರಗೇಕೆ? ಎಂದು ಕಾರ್ಖಾನೆ ಅಧಿಕಾರಿಗಳನ್ನು ಪ್ರಶ್ನಿಸಿದ ಅವರು ಪರಿಸರ ಮಾಲಿನ್ಯ ತಡೆಗಟ್ಟಲು ವಿಫಲವಾಗಿದ್ದಕ್ಕೆ ಕೂಡಲೆ ಕಾರ್ಖಾನೆಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡುವಂತೆ ಪರಿಸರ ಅಧಿಕಾರಿ ವೆಂಕಟೇಶ ಅವಯಿರಿಗೆ ನಿರ್ದೇಶನ ನೀಡಿದ ಜಿಲ್ಲಾಧಿಕಾರಿಗಳು, ಇನ್ನೇನು ಕಬ್ಬು ನುರಿಸುವ ಕಾರ್ಯ ಆರಂಭವಾಗಲಿರುವ ಕಾರಣ ಎಲ್ಲಾ ಕಾರ್ಖಾನೆಗಳಿಗೆ ಭೇಟಿ ನೀಡಿ ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಕುರಿತು ಸಹ ಪರಿಶೀಲಿಸುವಂತೆ ಸೂಚಿಸಿದರು.

ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ಮಾರುತಿ ಬ್ಯಾಕೋಡ್ ಪ್ರಸ್ತಾವಿಕವಾಗಿ ಮಾತನಾಡಿ, ಪ್ರಸಕ್ತ 2026-27ನೇ ಸಾಲಿಗೆ ಜಿಲ್ಲೆಯಲ್ಲಿ 40,124 ಹೆಕ್ಟೇರ್ ಪ್ರದೇಶದಲಿ ಕಬ್ಬು ಬೆಳೆಯಲಾಗಿದ್ದು, ಕಳೆದ ವರ್ಷದ ನುರಿಸಿದ ಕಬ್ಬಿನಿಂದ ಉತ್ಪಾದಿಸಿದ ಸಕ್ಕರೆ ಪ್ರಮಾಣದ ಆಧಾರದ ಮೇಲೆ ಈ ವರ್ಷ ಜಿಲ್ಲೆಯಲ್ಲಿ ಪ್ರತಿ ಟನ್ ಕಬ್ಬಿಗೆ ಕೆ.ಪಿ.ಆರ್ ಶುರ್ಸ್ & ಅಪ್ಪಾರೆಲ್ಸ್ ಲಿ. ಕಾರ್ಖಾನೆಗೆ 3,846 ರೂ., ಎನ್.ಎಸ್.ಎಲ್. ಶುಗರ್ ಕಾರ್ಖಾನೆಗೆ 3,703 ರೂ., ಶ್ರೀ ರೇಣುಕಾ ಶುಗರ್ಸ್ ಕಾರ್ಖಾನೆಗೆ 3,760 ರೂ., ದಿ. ಉಗಾರ್ ಶುಗರ್ ವರ್ಕ್ಸ್ ಲಿ. ಕಾರ್ಖಾನೆಗೆ 3,803 ರೂ. ಹಾಗೂ ಸಿದ್ದಸಿರಿ ಸೌಹಾರ್ದ ಸಹಕಾರಿ ನಿ. ಕಾರ್ಖಾನೆಗೆ 3,419 ರೂ. ಎಫ್.ಆರ್.ಪಿ. ನಿಗದಿ ಮಾಡಿದೆ ಎಂದರಲ್ಲದೆ ಕಳದ ವರ್ಷದಂತೆ ಈ ವರ್ಷ ಸಹ ರೈತರು-ಕಾರ್ಖಾನೆಗಳೊಂದಿಗೆ ಸಮಾಲೋಚಿಸಿ ಒಪ್ಪಂದದ ನ್ಯಾಯಯುತ ದರ ನಿಗದಿ ಮಾಡಬೇಕಿದೆ ಎಂದು ತಿಳಿಸಿದರು.

ಚರ್ಚೆಯಲ್ಲಿ ರೈತ ಸಂಘದ ಮುಖಂಡರುಗಳಾದ ರಮೇಶ ಹೂಗಾರ, ಶರಣಬಸಪ್ಪ ಮಮಶೆಟ್ಟಿ, ಧರ್ಮರಾಜ ಸಾಹು, ಶ್ರೀಮಂತ ಬಿರಾದಾರ, ರಮೇಶ ಪಾಟೀಲ ಅವರು ಮಾತನಾಡಿ ಕಬ್ಬು ಬೆಳೆಗಾರರ ಸಮಸ್ಯೆ ಮತ್ತು ಬೇಡಿಕೆಗಳನ್ನು ಡಿ.ಸಿ. ಮುಂದಿಟ್ಟರು.

# ಎಸ್‌ಐಆರ್: ಅಮೆರಿಕದ ಸಂಸದರ ಕಳವಳ

ವಾಷಿಂಗ್ಟನ್, ಅ. 17: ದೆಹಲಿ ಸೇರಿದಂತೆ ಭಾರತದ ವಿವಿಧ ಭಾಗಗಳಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆಗಳ ವೇಳೆ ಅತಿಯಾದ ಬಲಪ್ರಯೋಗ ನಡೆಸಲಾಗಿದೆ ಎಂಬ ಆರೋಪಗಳ ಕುರಿತು ಭಾರತದ ನಾಯಕರೊಂದಿಗೆ ಚರ್ಚಿಸುವಂತೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರಿಗೆ 6 ಮಂದಿ ಡೆಮಾಕ್ರಟಿಕ್ ಸಂಸದರು ಮನವಿ ಮಾಡಿದ್ದಾರೆ.

ಪ್ರಮೀಳಾ ಜಯಪಾಲ್, ಇಲ್ಹಾನ್ ಓಮರ್, ಜಿಮ್ ಮೆಕ್‌ಗವರ್ನ್, ರಶೀದಾ ತ್ಲೈಬ್, ಎಲಿನಾರ್ ಹೋಮ್ಸ್ ನಾರ್ಟನ್ ಮತ್ತು ಜೀಸಸ್ ಗಾರ್ಸಿಯಾ ಅವರು ಶುಕ್ರವಾರ ರೂಬಿಯೊ ಅವರಿಗೆ ಬರೆದ ಪತ್ರದಲ್ಲಿ, ವಿದ್ಯಾರ್ಥಿಗಳ ಪ್ರತಿಭಟನೆಗಳ ಸಂದರ್ಭದಲ್ಲಿ ದಮನಕಾರಿ ಕ್ರಮಗಳು, ಅಕ್ರಮ ಬಂಧನಗಳು ಮತ್ತು ಭದ್ರತಾ ಪಡೆಗಳ ಅತಿಯಾದ ಬಲಪ್ರಯೋಗ ನಡೆದಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಮುಂದಿನ ವಾರ ಭಾರತಕ್ಕೆ ಭೇಟಿ ನೀಡಲಿರುವ ರೂಬಿಯೊ, ಮುಂಬೈನಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರನ್ನು ಭೇಟಿಯಾಗಲಿದ್ದಾರೆ. ಈ ಭೇಟಿಯ ಸಂದರ್ಭದಲ್ಲಿ ಎರಡೂ ದೇಶಗಳ ಜನರಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸುವಂತೆ ಸಂಸದರು ಒತ್ತಾಯಿಸಿದ್ದಾರೆ.

ಮಾಜಿ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ವಿರುದ್ಧ ನಡೆದಿದ್ದ ಸಿಜೆಪಿ ಪ್ರತಿಭಟನೆಗಳು ಹಾಗೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ನಡೆಯುತ್ತಿರುವ ಪ್ರತಿಭಟನೆಗಳನ್ನು ಸಂಸದರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಈ ಪ್ರತಿಭಟನೆಗಳ ಸಂದರ್ಭದಲ್ಲಿ ಪ್ರತಿಭಟನಾಕಾರರ ವಿರುದ್ಧ ಅತಿಯಾದ ಬಲಪ್ರಯೋಗ ನಡೆದಿದೆ ಎಂಬ ಆರೋಪಗಳ ಕುರಿತು ತನಿಖೆ ನಡೆಸಬೇಕೆಂದು ಅವರು ಆಗ್ರಹಿಸಿದ್ದಾರೆ.

ಅಮೆರಿಕದಲ್ಲಿರುವ ಭಾರತೀಯ ರಾಯಭಾರ ಕಚೇರಿ ಮತ್ತು ಇತರ ನಗರಗಳಲ್ಲಿನ ಭಾರತೀಯ ದೂತಾವಾಸಗಳು ಸಿಜೆಪಿ ಪರ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ನಿಗಾ ಇಡಲು ಛಾಯಾಗ್ರಾಹಕರನ್ನು ನಿಯೋಜಿಸಿದ್ದವು ಎಂದೂ ಸಂಸದರು ಆರೋಪಿಸಿದ್ದಾರೆ. ಅಮೆರಿಕದಲ್ಲಿರುವ ಭಾರತೀಯ ರಾಜತಾಂತ್ರಿಕ ಕಚೇರಿಗಳು ಪ್ರತಿಭಟನಾಕಾರರ ಮೇಲೆ ನಿಗಾ ಇರಿಸಿ ಬೆದರಿಕೆ ಹಾಕಿದೆಯೇ ಎಂಬ ವರದಿಗಳ ಬಗ್ಗೆ ಸಮಗ್ರ ತನಿಖೆ ನಡೆಸುವಂತೆಯೂ ಅವರು ಮನವಿ ಮಾಡಿದ್ದಾರೆ.

ಭಾರತದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯ ಬಗ್ಗೆಯೂ ಪ್ರಮೀಳಾ ಜಯಪಾಲ್ ಕಳವಳ ವ್ಯಕ್ತಪಡಿಸಿದ್ದಾರೆ. ಕರಡು ಮತದಾರರ ಪಟ್ಟಿಯಿಂದ 13 ಕೋಟಿ ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ ಎಂದು ಅವರು ಆರೋಪಿಸಿದ್ದು, ಈ ವಿಚಾರದಲ್ಲಿ ಸಿಜೆಪಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಮೂಲಭೂತ ಸ್ವಾತಂತ್ರ್ಯಗಳ ಮುಕ್ತ ಬಳಕೆ ಮತ್ತು ಮತದಾನದ ಹಕ್ಕು ಅಮೆರಿಕ ಹಾಗೂ ಭಾರತದ ಪ್ರಜಾಸತ್ತಾತ್ಮಕ ಗುರುತಿನ ಪ್ರಮುಖ ಭಾಗಗಳಾಗಿವೆ ಎಂದು ಸಂಸದರು ಪತ್ರದಲ್ಲಿ ತಿಳಿಸಿದ್ದಾರೆ.

ಪ್ರತಿಭಟನೆಗಳ ಸಂದರ್ಭದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂಬ ಆರೋಪಗಳ ಕುರಿತು ಸಮಗ್ರ, ಪಾರದರ್ಶಕ ಮತ್ತು ಸ್ವತಂತ್ರ ತನಿಖೆ ನಡೆಸುವಂತೆ ಭಾರತೀಯ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಶಾಂತಿಯುತವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಭೆ ಸೇರುವ ಹಕ್ಕುಗಳನ್ನು ಚಲಾಯಿಸಿದ್ದಕ್ಕಾಗಿ ಭಾರತೀಯ ಹಾಗೂ ಅಂತಾರಾಷ್ಟ್ರೀಯ ಕಾನೂನುಗಳ ಉಲ್ಲಂಘನೆಯಡಿ ಬಂಧಿತರಾಗಿರು ವವರನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಬೇಕು ಎಂದು ಅವರು ರೂಬಿಯೊ ಅವರನ್ನು ಒತ್ತಾಯಿಸಿದ್ದಾರೆ.

ಅಮೆರಿಕದಲ್ಲಿನ ಭಾರತದ ರಾಯಭಾರಿ ವಿನಯ್ ಮೋಹನ್ ಕ್ವಾತ್ರಾ ಅವರು ಈ ಹಿಂದೆ ಪ್ರಮೀಳಾ ಜಯಪಾಲ್ ಅವರ ಹೇಳಿಕೆಗಳನ್ನು ಖಂಡಿಸಿ, ಅವುಗಳನ್ನು ಭಾರತದ ಆಂತರಿಕ ವ್ಯವಹಾರಗಳಲ್ಲಿ ಸ್ವೀಕಾರಾರ್ಹವಲ್ಲದ ಹಸ್ತಕ್ಷೇಪ ಎಂದಿದ್ದರು. ಇನ್ನೊಂದೆಡೆ, ಅಮೆರಿಕದ ಡೆಮಾಕ್ರಟಿಕ್ ನಾಯಕ ಹಾಗೂ ಮಾಜಿ ಅಧ್ಯಕ್ಷ ಜೋ ಬೈಡನ್ ಅವರ ಆಡಳಿತದಲ್ಲಿ ಶ್ವೇತಭವನದ ಸಲಹೆಗಾರರಾಗಿದ್ದ ಅಜಯ್ ಜೈನ್ ಭುಟೋರಿಯಾ ಅವರು ಜಯಪಾಲ್ ಅವರ ಪತ್ರವನ್ನು ಟೀಕಿಸಿದ್ದಾರೆ.

# ರಷ್ಯಾ ವಸ್ತುಗಳ ಸುಂಕಗಳಿಗೆ ಡೊನಾಲ್ಡ್ ಟ್ರಂಪ್ ವಿನಾಯಿತಿ ತೈಲ ಆಮದಿಗೆ ಭಾರತ ನಿಟ್ಟುಸಿರು




ವಾಷಿಂಗ್ಟನ್, ಅ.17: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ವರ್ಷ ಸೆಪ್ಟೆಂಬರ್‌ನಲ್ಲಿ ಜಾರಿಗೆ ಬಂದಿದ್ದ ಲಿಂಡ್ಸೆ ಒ. ಗ್ರಹಾಂ ಸ್ಯಾಂಕ್ಷನಿಂಗ್ ರಷ್ಯಾ ಆಂಡ್ ಇರಾನ್ ಆಕ್ಟ್ ಅಡಿಯಲ್ಲಿ ಪ್ರಮುಖ ನಿರ್ಬಂಧಗಳು, ವ್ಯಾಪಾರ ನಿರ್ಬಂಧಗಳು ಮತ್ತು ಸುಂಕ ನಿಯಮಗಳಿಗೆ ವಿನಾಯಿತಿ ನೀಡಿ ಆದೇಶ ಹೊರಡಿಸಿದ್ದಾರೆ. ಈ ಮೂಲಕ ರಷ್ಯಾದ ಇಂಧನವನ್ನು ದೊಡ್ಡ ಪ್ರಮಾಣದಲ್ಲಿ ಖರೀದಿಸುವ ದೇಶಗಳ ಮೇಲೆ ವಿಧಿಸಬಹುದಾಗಿದ್ದ ಶೇ. 100ರವರೆಗಿನ ಸುಂಕ ಸೇರಿದಂತೆ ದಂಡನಾತ್ಮಕ ಕ್ರಮಗಳನ್ನು ತಾತ್ಕಾಲಿಕವಾಗಿ ರದ್ದುಪಡಿಸಿದ್ದಾರೆ.

ಈ ಕ್ರಮಗಳು ಜಾರಿಗೆ ಬರಲು ಕೆಲವೇ ದಿನಗಳು ಬಾಕಿ ಇರುವಾಗ ಟ್ರಂಪ್ ಈ ನಿರ್ಧಾರ ಕೈಗೊಂಡಿದ್ದಾರೆ. ರಷ್ಯಾದಿಂದ ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ ಆಮದು ಮಾಡಿಕೊಳ್ಳುತ್ತಿರುವ ಭಾರತ ಮತ್ತು ಚೀನಾದಂತಹ ದೇಶಗಳಿಗೆ ಇದರಿಂದ ಗಮನಾರ್ಹ ಆರ್ಥಿಕ ಪರಿಹಾರ ದೊರೆಯುವ ಸಾಧ್ಯತೆಯಿದೆ.

ಉಕ್ರೇನ್ ವಿರುದ್ಧ ರಷ್ಯಾ ನಡೆಸುತ್ತಿರುವ ಯುದ್ಧದ ಹಿನ್ನೆಲೆಯಲ್ಲಿ ಆ ದೇಶದ ಮೇಲೆ ಆರ್ಥಿಕ ಒತ್ತಡ ಹೆಚ್ಚಿಸುವ ಉದ್ದೇಶದಿಂದ ಈ ಕಾಯ್ದೆಯನ್ನು ರೂಪಿಸಲಾಗಿತ್ತು. ರಷ್ಯಾದ ಇಂಧನವನ್ನು ಅತಿ ಹೆಚ್ಚು ಆಮದು ಮಾಡಿಕೊಳ್ಳುವ ದೇಶಗಳು ಹಾಗೂ ನಿರ್ಬಂಧಗಳನ್ನು ತಪ್ಪಿಸಿಕೊಳ್ಳಲು ನೆರವಾಗುತ್ತಿವೆ ಎಂದು ಆರೋಪಿಸಲಾದ ರಾಷ್ಟ್ರಗಳನ್ನು ಈ ಕಾಯ್ದೆ ಗುರಿಯಾಗಿಸಿಕೊಂಡಿತ್ತು.

ಕಾಯ್ದೆಯಲ್ಲಿರುವ ರಾಷ್ಟ್ರೀಯ ಹಿತಾಸಕ್ತಿ ಆಧಾರಿತ ವಿನಾಯಿತಿ ನಿಬಂಧನೆಯನ್ನು ಟ್ರಂಪ್ ಬಳಸಿಕೊಂಡಿದ್ದಾರೆ. ನಿರ್ದಿಷ್ಟ ಕ್ರಮಗಳನ್ನು ಅಮಾನತುಗೊಳಿಸುವುದು ಅಮೆರಿಕದ ಆರ್ಥಿಕ ಹಿತಾಸಕ್ತಿಗಳ ರಕ್ಷಣೆಗೆ ಅಗತ್ಯವಾಗಿದೆ ಎಂದು ಅವರು ಕಾಂಗ್ರೆಸ್‌ಗೆ ಪ್ರಮಾಣೀಕರಿಸಿದ್ದಾರೆ.

ನವೆಂಬರ್‌ನಲ್ಲಿ ನಡೆಯಲಿರುವ ಮಧ್ಯಂತರ ಚುನಾವಣೆಗೂ ಮುನ್ನ ಅಮೆರಿಕದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಹೆಚ್ಚಿರುವ ಬಗ್ಗೆ ಆತಂಕ ವ್ಯಕ್ತವಾಗಿತ್ತು. ಬ್ಲೂಮ್‌ಬರ್ಗ್ ಮತ್ತು ರಾಯಿಟರ್ಸ್ ವರದಿಗಳ ಪ್ರಕಾರ, ಇಂಧನ ಮಾರುಕಟ್ಟೆಯ ಮೇಲಿನ ಒತ್ತಡ ಕಡಿಮೆ ಮಾಡುವುದು ಮತ್ತು ಇಂಧನ ವೆಚ್ಚವನ್ನು ನಿಯಂತ್ರಿಸುವ ಪ್ರಯತ್ನದ ಭಾಗವಾಗಿ ಆಡಳಿತ ಈ ನಿರ್ಧಾರ ಕೈಗೊಂಡಿದೆ.

ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಪೂರೈಕೆಯನ್ನು ಸ್ಥಿರಗೊಳಿಸುವ ಉದ್ದೇಶದಿಂದ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಟ್ರಂಪ್ ಒಪ್ಪಂದ ಮಾಡಿಕೊಂಡಿದ್ದಾರೆ ಎಂಬ ವರದಿಗಳೂ ಈ ಬೆಳವಣಿಗೆಯ ಬೆನ್ನಲ್ಲೇ ಬಂದಿವೆ. ಈ ಒಪ್ಪಂದದಡಿ ರಷ್ಯಾ ಲಕ್ಷಾಂತರ ಟನ್ ಡೀಸೆಲನ್ನು ಜಾಗತಿಕ ಮಾರುಕಟ್ಟೆಗಳಿಗೆ ರಫ್ತು ಮಾಡಲು ಅವಕಾಶ ದೊರೆಯಲಿದೆ ಎನ್ನಲಾಗಿದೆ.

ಉಕ್ರೇನ್ ಯುದ್ಧ ಮುಂದುವರಿದಿರುವ ಸಂದರ್ಭದಲ್ಲಿಯೇ ರಷ್ಯಾದ ಮೇಲೆ ಆರ್ಥಿಕ ಒತ್ತಡ ಹೇರುವ ವಿಚಾರದಲ್ಲಿ ವಾಷಿಂಗ್ಟನ್‌ನ ನಿಲುವಿನಲ್ಲಿ ಬದಲಾವಣೆಯಾಗಿರುವುದನ್ನು ಈ ನಿರ್ಧಾರ ಸೂಚಿಸುತ್ತದೆ. ಇದರಿಂದ ರಷ್ಯಾದ ಇಂಧನ ವ್ಯಾಪಾರದ ಮೇಲಿನ ನಿರ್ಬಂಧಗಳು ಸಡಿಲಗೊಳ್ಳುವ ಸಾಧ್ಯತೆಯಿದೆ.

**ಭಾರತ, ಚೀನಾಕ್ಕೆ ಲಾಭವಾಗುವ ಸಾಧ್ಯತೆ**

ರಷ್ಯಾದ ಇಂಧನದ ಪ್ರಮುಖ ಖರೀದಿದಾರ ರಾಷ್ಟ್ರಗಳಾದ ಭಾರತ ಮತ್ತು ಚೀನಾಗಳು, ಇತರ ದೇಶಗಳ ಮೇಲಿನ ವ್ಯಾಪಾರ ದಂಡಾತ್ಮಕ ಕ್ರಮಗಳ ಅಮಾನತಿನಿಂದ ಲಾಭ ಪಡೆಯುವ ಸಾಧ್ಯತೆಯಿದೆ.

ರಷ್ಯಾದೊಂದಿಗೆ ವಾಣಿಜ್ಯ ಸಂಬಂಧ ಮುಂದುವರಿಸುವುದರಿಂದ ಉಂಟಾಗಬಹುದಾಗಿದ್ದ ಹೆಚ್ಚುವರಿ ವೆಚ್ಚವನ್ನು ಏರಿಸುವ ಮತ್ತು ಜಾಗತಿಕ ಇಂಧನ ಪೂರೈಕೆಗೆ ಅಡ್ಡಿಪಡಿಸುವ ಬೆದರಿಕೆಯನ್ನು ಪ್ರಸ್ತಾವಿತ ಸುಂಕಗಳು ಹೊಂದಿದ್ದವು.

ಈ ವಿನಾಯಿತಿಯಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಇಂಧನ ಪೂರೈಕೆಯನ್ನು ಕಾಯ್ದುಕೊಳ್ಳಲು ಮತ್ತು ಹೆಚ್ಚುವರಿ ವ್ಯಾಪಾರ ವೆಚ್ಚದ ಅಪಾಯವನ್ನು ತಗ್ಗಿಸಲು ನೆರವಾಗಬಹುದು. ಆದರೆ, ಅಮೆರಿಕ ಆಡಳಿತವು ಭವಿಷ್ಯದಲ್ಲಿ ಈ ನಿರ್ಬಂಧಗಳನ್ನು ಮತ್ತೆ ಜಾರಿಗೆ ತರುವ ಸಾಧ್ಯತೆಯನ್ನು ತಳ್ಳಿಹಾಕಿಲ್ಲ.

**ನಿರ್ಬಂಧಗಳ ಮೇಲ್ವಿಚಾರಣೆ ಮುಂದುವರಿಕೆ**

ಕಾರ್ಯಕಾರಿ ಆದೇಶದ ಪ್ರಕಾರ, ಅಮೆರಿಕದ ವಿವಿಧ ಇಲಾಖೆಗಳು ವಿದೇಶಿ ರಾಷ್ಟ್ರಗಳು ರಷ್ಯಾದಿಂದ ನಡೆಸುವ ಇಂಧನ ಖರೀದಿಗಳ ಮೇಲೆ ಮೇಲ್ವಿಚಾರಣೆ ಮುಂದುವರಿಸಲಿವೆ. ಆರ್ಥಿಕ ಮತ್ತು ಭೌಗೋಳಿಕ ರಾಜಕೀಯ ಬೆಳವಣಿಗೆಗಳಿಗೆ ಅನುಗುಣವಾಗಿ ಅಮಾನತುಗೊಳಿಸಲಾದ ಸುಂಕ ಹಾಗೂ ನಿರ್ಬಂಧಗಳನ್ನು ಬದಲಾಯಿಸುವ ಅಥವಾ ಮರುಜಾರಿಗೊಳಿಸುವ ಅಧಿಕಾರವನ್ನು ಆಡಳಿತ ಉಳಿಸಿಕೊಂಡಿದೆ.

ಹೀಗಾಗಿ, ಈ ವಿನಾಯಿತಿಯು ಇಂಧನ ಆಮದು ಮಾಡಿಕೊಳ್ಳುವ ದೇಶಗಳಿಗೆ ತಕ್ಷಣದ ಮಟ್ಟದಲ್ಲಿ ಹೆಚ್ಚಿನ ಅನುಕೂಲ ಕಲ್ಪಿಸಿದರೂ, ನಿರ್ಬಂಧಗಳ ಚೌಕಟ್ಟಿನ ಭವಿಷ್ಯದ ಬಗ್ಗೆ ಅನಿಶ್ಚಿತತೆ ಮುಂದುವರಿದಿದೆ.

ದೇಶೀಯ ಇಂಧನ ಬೆಲೆಗಳನ್ನು ನಿಯಂತ್ರಿಸುವುದು, ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಸ್ಥಿರತೆ ಕಾಪಾಡುವುದು ಮತ್ತು ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ರಷ್ಯಾದ ಮೇಲೆ ಆರ್ಥಿಕ ಒತ್ತಡ ಮುಂದುವರಿಸುವುದು?ಈ ಮೂರು ಉದ್ದೇಶಗಳ ನಡುವೆ ಅಮೆರಿಕ ಎದುರಿಸುತ್ತಿರುವ ಸವಾಲನ್ನು ಡೊನಾಲ್ಡ್ ಟ್ರಂಪ್ ಅವರ ಈ ನಿರ್ಧಾರ ಎತ್ತಿ ತೋರಿಸಿದೆ.

# ಅನುಮೋದನೆ ಪಡೆದು ಭಾರತದಲ್ಲಿ ಮೂಲಸೌಕರ್ಯ ನಿರ್ಮಾಣ ಹೈಸ್ಪೀಡ್ ಇಂಟರ್‌ನೆಟ್ ಸೇವೆಗೆ ಸಿದ್ಧ ಎಂದ ಸ್ಟಾರ್‌ಲಿಂಕ್




ವಾಷಿಂಗ್ಟನ್, ಅ.17: ಅಮೆರಿಕ ಮೂಲದ ಖ್ಯಾತ ಉದ್ಯಮಿ ಎಲಾನ್ ಮಸ್ಕ್ ಅವರ ಉಪಗ್ರಹ ಇಂಟರ್ನೆಟ್ ಸಂಸ್ಥೆ ಸ್ಟಾರ್‌ಲಿಂಕ್, ಭಾರತದಲ್ಲಿ ಹೈಸ್ಪೀಡ್ ಇಂಟರ್ನೆಟ್ ಸಂಪರ್ಕ ಒದಗಿಸಲು ಸಿದ್ಧವಿರುವುದಾಗಿ ಘೋಷಿಸಿದೆ. ಭಾರತದಲ್ಲಿ ಅಗತ್ಯ ಮೂಲಸೌಕರ್ಯ ನಿರ್ಮಿಸಲು ಮತ್ತು ನಿಯಂತ್ರಕ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸಲು ಐದು ವರ್ಷಗಳಿಗೂ ಹೆಚ್ಚು ಕಾಲ ವ್ಯಯಿಸಿದ್ದು, ಇದಕ್ಕೆ ಸರ್ಕಾರದ ಅನುಮೋದನೆಗಳನ್ನೂ ಪಡೆದಿರುವುದಾಗಿ ಕಂಪನಿ ಹೇಳಿದೆ.

ಭಾರತದ ಉಪಗ್ರಹ ಸಂವಹನ ಮಾರುಕಟ್ಟೆಯಲ್ಲಿ ಸ್ಪರ್ಧೆಯ ವಿಚಾರವಾಗಿ ಎಲಾನ್ ಮಸ್ಕ್ ಮತ್ತು ಮುಖೇಶ್ ಅಂಬಾನಿ ಅವರ ರಿಲಯನ್ಸ್ ಇಂಡಸ್ಟ್ರೀಸ್ ನಡುವಿನ ಸಂಘರ್ಷ ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ ಈ ಘೋಷಣೆ ಹೊರಬಿದ್ದಿದೆ. ವಾಣಿಜ್ಯ ಸೇವೆ ಆರಂಭಿಸಲು ಅಗತ್ಯವಿರುವ ಅಂತಿಮ ನಿಯಂತ್ರಕ ಅನುಮತಿಗಳಿಗಾಗಿ ಹಲವು ಸಂಸ್ಥೆಗಳು ಕಾಯುತ್ತಿವೆ. ಎಕ್ಸ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಸ್ಟಾರ್‌ಲಿಂಕ್, ಭಾರತದಲ್ಲಿನ ಇಂಟರ್ನೆಟ್ ಸಂಚಾರವನ್ನು ನಿರ್ವಹಿಸಲು ದೇಶದೊಳಗೆ ಪ್ರತ್ಯೇಕ ವ್ಯವಸ್ಥೆಗಳು, ಗೇಟ್‌ವೇಗಳು ಹಾಗೂ ಇತರ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿರುವುದಾಗಿ ತಿಳಿಸಿದೆ.

ನಾವು ಕಳೆದ ಐದು ವರ್ಷಗಳಿಗೂ ಹೆಚ್ಚು ಕಾಲ ಭಾರತದಲ್ಲಿನ ನಿಯಂತ್ರಕ ಸಂಸ್ಥೆಗಳು, ಉದ್ಯಮ ವಲಯ ಮತ್ತು ಆಪರೇಟರ್‌ಗಳೊಂದಿಗೆ ನಿಕಟವಾಗಿ ಕಾರ್ಯ ನಿರ್ವಹಿಸಿದ್ದೇವೆ ಎಂದು ಕಂಪನಿ ಹೇಳಿದೆ. ಅಗತ್ಯ ಸರ್ಕಾರಿ ಅನುಮೋದನೆ ಗಳೊಂದಿಗೆ ಈ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಅದು ಸ್ಪಷ್ಟಪಡಿಸಿದೆ.

ಇದಕ್ಕೂ ಮುನ್ನ ರಿಲಯನ್ಸ್ ಇಂಡಸ್ಟ್ರೀಸ್, ಭಾರತದ ಉಪಗ್ರಹ ಸಂವಹನ ಮಾರುಕಟ್ಟೆಗೆ ಸ್ಟಾರ್‌ಲಿಂಕ್ ಪ್ರವೇಶಿಸುವುದನ್ನು ಬಹಿರಂಗವಾಗಿ ಸ್ವಾಗತಿಸಿತ್ತು. ಆದರೆ, ಪ್ರತಿಯೊಂದು ಸಂಸ್ಥೆಯೂ ಭಾರತೀಯ ಕಾನೂನು ಮತ್ತು ನಿಯಂತ್ರಕ ನಿಯಮಗಳನ್ನು ಪಾಲಿಸಲೇಬೇಕು ಎಂದು ಹೇಳಿತ್ತು.

## ಮಸ್ಕ್ ಆರೋಪಗಳಿಗೆ ರಿಲಯನ್ಸ್ ತಿರುಗೇಟು

ಭಾರತದಲ್ಲಿ ಸ್ಟಾರ್‌ಲಿಂಕ್‌ನ ವಾಣಿಜ್ಯ ಸೇವೆಗಳ ಆರಂಭಕ್ಕೆ ಪ್ರಭಾವಿ ಉದ್ಯಮ ಹಿತಾಸಕ್ತಿಗಳು ಅಡ್ಡಿಪಡಿಸುತ್ತಿವೆ ಎಂದು ಎಲಾನ್ ಮಸ್ಕ್ ಆರೋಪಿಸಿದ ಬಳಿಕ ರಿಲಯನ್ಸ್ ಈ ಹೇಳಿಕೆ ನೀಡಿದೆ. ಭಾರತದ ದೂರಸಂಪರ್ಕ ವಲಯದಲ್ಲಿನ ಸ್ಪರ್ಧಾತ್ಮಕ ವಾತಾವರಣದ ಬಗ್ಗೆಯೂ ಮಸ್ಕ್ ಪ್ರಶ್ನೆಗಳನ್ನು ಎತ್ತಿದ್ದರು.

ಸ್ಪರ್ಧೆಗೆ ಹೆದರುತ್ತಿದೆ ಎಂಬ ಆರೋಪವನ್ನು ರಿಲಯನ್ಸ್ ತಳ್ಳಿಹಾಕಿದ್ದು, ತನ್ನದೇ ಉಪಗ್ರಹ ಸಂವಹನ ವ್ಯವಹಾರಕ್ಕೂ ನಿಯಂತ್ರಕ ಅನುಮತಿಗಳು ಇನ್ನೂ ಬಾಕಿ ಇವೆ ಎಂದು ತಿಳಿಸಿದೆ.

ರಿಲಯನ್ಸ್‌ನಲ್ಲಿ ನಾವು ಎಂದಿಗೂ ಸ್ಪರ್ಧೆಗೆ ಹೆದರಿಲ್ಲ. ಗ್ರಾಹಕರಿಗೆ ಯಾರು ಅತ್ಯುತ್ತಮ ಸೇವೆ ಒದಗಿಸುತ್ತಾರೆ ಎಂಬುದನ್ನು ನಿರ್ಧರಿಸುವ ಅತ್ಯಂತ ನೈಜ ಪರೀಕ್ಷೆಯಾಗಿ ನಾವು ಸ್ಪರ್ಧೆಯನ್ನು ಪರಿಗಣಿಸುತ್ತೇವೆ ಎಂದು ಕಂಪನಿ ಹೇಳಿದೆ. 2016ರಲ್ಲಿ ಭಾರತದ ದೂರಸಂಪರ್ಕ ಮಾರುಕಟ್ಟೆ ಪ್ರವೇಶಿಸಿದ ಜಿಯೋ, ಬಳಿಕ 53 ಕೋಟಿಗೂ ಹೆಚ್ಚು ಗ್ರಾಹಕರನ್ನು ಹೊಂದುವ ಮೂಲಕ ವಿಸ್ತರಿಸಿದೆ ಎಂದು ರಿಲಯನ್ಸ್ ಉಲ್ಲೇಖಿಸಿದೆ.

ಸ್ಟಾರ್‌ಲಿಂಕ್ ಸೇರಿದಂತೆ ಉಪಗ್ರಹ ಸಂವಹನ ಕ್ಷೇತ್ರದಲ್ಲಿನ ಸ್ಪರ್ಧೆಯನ್ನು ನಾವು ಸ್ವಾಗತಿಸುತ್ತೇವೆ ಎಂದು ರಿಲಯನ್ಸ್ ಹೇಳಿದೆ. ಇದೇ ವೇಳೆ, ದೇಶೀಯ ಮತ್ತು ವಿದೇಶಿ ಸಂಸ್ಥೆಗಳು ಒಂದೇ ರೀತಿಯ ನಿಯಮಗಳನ್ನು ಪಾಲಿಸಬೇಕು ಎಂದು ಹೇಳಿದೆ.

ಅರ್ಜಿದಾರರು ಯಾವ ದೇಶದವರಾಗಿದ್ದಾರೆ ಎಂಬುದನ್ನು ಪರಿಗಣಿಸದೆ, ಭಾರತವು ಎಲ್ಲರಿಗೂ ಸಾಮಾನ್ಯ ನಿಯಂತ್ರಕ ಪ್ರಕ್ರಿಯೆಯನ್ನೇ ಅನ್ವಯಿಸುತ್ತದೆ ಎಂದೂ ಕಂಪನಿ ತಿಳಿಸಿದೆ.

**ಭದ್ರತಾ ಅನುಮತಿಗಳು ಕಡ್ಡಾಯ ಎಂದ ಕೇಂದ್ರ ಸರ್ಕಾರ**

ಭಾರತದಲ್ಲಿ ತನ್ನ ಮೂಲಸೌಕರ್ಯ ಸಿದ್ಧವಾಗಿದೆ ಎಂದು ಸ್ಟಾರ್‌ಲಿಂಕ್ ಹೇಳಿದ್ದರೂ, ದೇಶದಲ್ಲಿ ವಾಣಿಜ್ಯ ಸೇವೆಗಳನ್ನು ಆರಂಭಿಸಲು ಅಗತ್ಯವಿರುವ ಎಲ್ಲ ಅನುಮತಿಗಳು ಇನ್ನೂ ದೊರೆತಿಲ್ಲ.

ಸ್ಟಾರ್‌ಲಿಂಕ್, ರಿಲಯನ್ಸ್ ಜಿಯೋ ಮತ್ತು ಯುಟೆಲ್ಸಾಟ್ ಒನ್‌ವೆಬ್ ಸೇರಿದಂತೆ ಮೂರು ಸಂಸ್ಥೆಗಳು ಉಪಗ್ರಹ ಸಂವಹನ ಪರವಾನಗಿಗಳನ್ನು ಪಡೆದಿವೆ. ಆದರೆ, ಅವು ಇನ್ನೂ ಕೆಲವು ನಿಯಂತ್ರಕ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕಿದೆ ಎಂದು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ತಿಳಿಸಿದ್ದಾರೆ.

# ಮುಂಬೈ ತಂಡದ ನಾಯಕತ್ವ ರೋಹಿತ್ ಶರ್ಮಾ ಹೆಗಲಿಗೆ?




ಮುಂಬೈ, ಅ. 17: ಮುಂಬರುವ 2027ರ ಐಪಿಎಲ್‌ಗೂ ಮುನ್ನ ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡದಲ್ಲಿ ಮಹತ್ವದ ಬದಲಾವಣೆಗಳು ನಡೆಯುತ್ತಿವೆ. ತಂಡದ ಯಶಸ್ವಿ ಕೋಚ್‌ಗಳಲ್ಲಿ ಒಬ್ಬರಾದ ಮಹೇಲಾ ಜಯವರ್ಧನೆ ಹಾಗೂ ಮುಂಬೈ ಫ್ರಾಂಚೈಸಿ ಪರಸ್ಪರ ಒಪ್ಪಂದದ ಮೇರೆಗೆ ಬೇರ್ಪಡಲು ನಿರ್ಧರಿಸಿದ್ದು, ಈ ನಿರ್ಗಮನವು ತಂಡದಲ್ಲಿ ದೊಡ್ಡ ಮಟ್ಟದ ಬದಲಾವಣೆಯ ಮುನ್ಸೂಚನೆಯಾಗಿದೆ. ಇದರೊಂದಿಗೆ ತಂಡದ ನಾಯಕತ್ವದ ಕುರಿತಾಗಿಯೂ ಹೊಸ ಚರ್ಚೆಗಳು ಮುನ್ನೆಲೆಗೆ ಬಂದಿದ್ದು, ರೋಹಿತ್ ಶರ್ಮಾ ಅವರು ಮತ್ತೆ ಮುಂಬೈ ತಂಡದ ನಾಯಕನಾಗಿ ಕಣಕ್ಕಿಳಿಯಬಹುದು ಎಂಬ ಊಹಾಪೋಹಗಳು ಜೋರಾಗಿವೆ.

ಮಹೇಲಾ ಜಯವರ್ಧನೆ ನಿರ್ಗಮನದೊಂದಿಗೆ ಮುಂಬೈ ಇಂಡಿಯನ್ಸ್ ಜೊತೆಗಿನ ಅವರ ಸುದೀರ್ಘ ಹಾಗೂ ಯಶಸ್ವಿ ಅಧ್ಯಾಯಕ್ಕೆ ತೆರೆಬಿದ್ದಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಮಹೇಲಾ, ಮುಂಬೈ ಇಂಡಿಯನ್ಸ್ ಕಳೆದ ಒಂದು ದಶಕದಿಂದ ನನ್ನ ಪ್ರಯಾಣದ ಅತ್ಯಂತ ವಿಶೇಷ ಭಾಗವಾಗಿದೆ. ಆಟಗಾರರು, ಕೋಚಿಂಗ್ ಸಿಬ್ಬಂದಿ, ಒನ್ ಫ್ಯಾಮಿಲಿ ಅಭಿಮಾನಿಗಳ ಬೆಂಬಲ ನನ್ನ ಜೀವನದಲ್ಲಿ ಸದಾ ಸ್ಮರಣೀಯ ಎಂದು ಭಾವನಾತ್ಮಕವಾಗಿ ಬರೆದುಕೊಂಡಿದ್ದಾರೆ. ಹಾಗೆಯೇ, ಮುಂಬೈ ಫ್ರಾಂಚೈಸಿ ಮಾಲಿಕರಾದ ನೀತಾ ಅಂಬಾನಿ ಮಾತನಾಡಿ, ತಂಡಕ್ಕೆ ಜಯವರ್ಧನೆ ನೀಡಿದ ಶಾಂತಿಯುತ ನಾಯಕತ್ವ, ಪ್ರಾಮಾಣಿಕತೆ ಮತ್ತು ಅಪಾರ ಕೊಡುಗೆಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಮಹೇಲಾ ಜಯವರ್ಧನೆ ಅವರ ಕೊಡುಗೆ ಕೇವಲ ಕೊನೆಯ ಅವಧಿಯ ಕೋಚಿಂಗ್‌ಗೆ ಮಾತ್ರ ಸೀಮಿತವಾಗಿಲ್ಲ. ಅವರು 2017ರಲ್ಲಿ ಮುಂಬೈ ತಂಡದ ಮುಖ್ಯ ಕೋಚ್ ಆಗಿ ಅಧಿಕಾರ ವಹಿಸಿಕೊಂಡು, 2017, 2019 ಮತ್ತು 2020ರಲ್ಲಿ ಮುಂಬೈ ತಂಡಕ್ಕೆ ಮೂರು ಐಪಿಎಲ್ ಪ್ರಶಸ್ತಿಗಳನ್ನು ತಂದುಕೊಟ್ಟಿದ್ದರು. ಈ ಮೂಲಕ ಐಪಿಎಲ್ ಟೂರ್ನಿಯಲ್ಲಿ ಅತ್ಯಂತ ಯಶಸ್ವಿ ಕೋಚ್‌ಗಳಲ್ಲಿ ಒಬ್ಬರಾಗಿ ಹೊರಹೊಮ್ಮಿದರು. ಪ್ರಸ್ತುತ ಅವರ ನಿರ್ಗಮನದಿಂದಾಗಿ ಮುಂಬೈ ಫ್ರಾಂಚೈಸಿಗೆ ಹೊಸ ಕೋಚಿಂಗ್ ರಚನೆಯನ್ನು ರೂಪಿಸುವುದು ದೊಡ್ಡ ಸವಾಲಾಗಿದೆ.

ಮಹೇಲಾ ನಿರ್ಗಮನದ ಬೆನ್ನಲ್ಲೇ ರೋಹಿತ್ ಶರ್ಮಾ ಅವರ ನಾಯಕತ್ವದ ಬಗೆಗಿನ ಚರ್ಚೆಗಳು ಮತ್ತೆ ಮುನ್ನಲೆಗೆ ಬಂದಿದ್ದು, ಮುಂಬರುವ ಆವೃತಿಗಾಗಿ ಮುಂಬೈ ಇಂಡಿಯನ್ಸ್ ಮ್ಯಾನೇಜ್‌ಮೆಂಟ್ ರೋಹಿತ್ ಅವರನ್ನೇ ಮತ್ತೆ ನಾಯಕನನ್ನಾಗಿ ನೇಮಿಸುವ ಕುರಿತು ಗಂಭೀರವಾಗಿ ಆಲೋಚಿಸುತ್ತಿದೆ ಎಂದು ವರದಿಯಾಗಿದೆ. ರೋಹಿತ್ ಶರ್ಮಾ ತಮ್ಮ ನಾಯಕತ್ವದಲ್ಲಿ ಮುಂಬೈಗೆ 2013, 2015, 2017, 2019 ಮತ್ತು 2020ರಲ್ಲಿ ಐದು ಪ್ರಶಸ್ತಿಗಳನ್ನು ಗೆದ್ದುಕೊಟ್ಟಿದ್ದಾರೆ.

ಐಪಿಎಲ್ 2024ರ ಹರಾಜಿಗೂ ಮುನ್ನ ಗುಜರಾತ್ ಟೈಟಾನ್ಸ್‌ನಿಂದ ಮರಳಿದ ಹಾರ್ದಿಕ್ ಪಾಂಡ್ಯ ಅವರಿಗೆ ನಾಯಕತ್ವದ ಜವಾಬ್ದಾರಿ ನೀಡಲಾಗಿತ್ತು. ಹಾರ್ದಿಕ್ ನೇತೃತ್ವದಲ್ಲಿ ತಂಡವು ಮೊದಲ ಸೀಸನ್‌ನಲ್ಲಿ ಕೊನೆಯ ಸ್ಥಾನ ಪಡೆದರೂ, 2025ರಲ್ಲಿ ಪ್ಲೇಆಫ್ ಹಂತಕ್ಕೇರುವಲ್ಲಿ ಯಶಸ್ವಿಯಾಯಿತು. ಆದರೆ 2020ರ ನಂತರ ಮುಂಬೈಗೆ ಇಲ್ಲಿಯವರೆಗೆ ಮತ್ತೊಮ್ಮೆ ಪ್ರಶಸ್ತಿ ಗೆಲ್ಲಲು ಸಾಧ್ಯವಾಗಿಲ್ಲ. ಸದ್ಯಕ್ಕೆ ಮುಂಬೈ ಇಂಡಿಯನ್ಸ್‌ನ ಪ್ರಮುಖ ಆದ್ಯತೆಯು ಜಯವರ್ಧನೆ ನಿರ್ಗಮನದ ಬಳಿಕ ಸೂಕ್ತ ಕೋಚಿಂಗ್ ವ್ಯವಸ್ಥೆಯನ್ನು ಸಿದ್ಧಪಡಿಸುವುದಾಗಿದೆ. ಇದರೊಂದಿಗೆ ರೋಹಿತ್ ಶರ್ಮಾ ಅವರಿಗೆ ಮತ್ತೆ ನಾಯಕತ್ವ ನೀಡುವ ಕುರಿತು ಫ್ರಾಂಚೈಸಿ ಅಂತಿಮ ನಿರ್ಧಾರ ಕೈಗೊಳ್ಳಲಿದ್ದು, ಇದು ಮುಂಬೈನ ಮುಂದಿನ ಹಾದಿಯನ್ನು ನಿರ್ಣಯಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ.

# ಪಾಕಿಸ್ತಾನಕ್ಕೆ ಐಎಂಎಫ್-ವಿಶ್ವ ಬ್ಯಾಂಕ್ ಮಂಡಳಿ ಅಧ್ಯಕ್ಷ ಸ್ಥಾನ

**ಪಟ್ಟ ಸಿಕ್ಕರೂ ನಿರ್ಣಾಯಕ ಅಧಿಕಾರವಿಲ್ಲ, ಕೇವಲ ಸಾಂಸ್ಥಿಕ ಕಾರ್ಯವಿಧಾನ ಮತ್ತು ವಾರ್ಷಿಕ ಸಭೆಗಳ ಅಧ್ಯಕ್ಷತೆ ವಹಿಸುವುದಕ್ಕಷ್ಟೇ ಸೀಮಿತ**



ಬ್ಯಾಂಕಾಕ್ (ಥೈಲ್ಯಾಂಡ್), ಅ.17: ಆರ್ಥಿಕ ನೆರವಿಗಾಗಿ ಸದಾ ಕಾಲ ಐಎಂಎಫ್ (ಅಂತರರಾಷ್ಟ್ರೀಯ ಹಣಕಾಸು ನಿಧಿ) ಎದುರು ಸಾಲಕ್ಕಾಗಿ ಕೈಚಾಚುವ ಪಾಕಿಸ್ತಾನವೀಗ ಅದೇ ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕ್ ಗ್ರೂಪ್‌ನ ಬೋರ್ಡ್ ಆಫ್ ಗವರ್ನರ್ಸ್‌ನ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದೆ. ಆದರೆ, ತೀವ್ರ ಆರ್ಥಿಕ ಬಿಕ್ಕಟ್ಟಿನಿಂದಾಗಿ ಜಾಗತಿಕ ಮಟ್ಟದಲ್ಲಿ ಸದಾ ಸಾಲಕ್ಕಾಗಿ ಕೈಚಾಚುವ ಪಾಕಿಸ್ತಾನಕ್ಕೆ ಈ ಪ್ರತಿಷ್ಠಿತ ಪಟ್ಟ ಸಿಕ್ಕಿದ್ದರೂ, ಅದರ ಕೈಯಲ್ಲಿ ಯಾವುದೇ ನೈಜ ಅಧಿಕಾರ ಅಥವಾ ಪವರ್ ಇರುವುದಿಲ್ಲ.

ಹೌದು, ತೀವ್ರ ಆರ್ಥಿಕ ಬಿಕ್ಕಟ್ಟಿನಿಂದಾಗಿ ಸಾಲಕ್ಕಾಗಿ ಸದಾ ಜಾಗತಿಕ ಹಣಕಾಸು ಸಂಸ್ಥೆಗಳ ಮುಂದೆ ಕೈಯೊಡ್ಡುವ ಪಾಕಿಸ್ತಾನಕ್ಕೆ, 2027ರ ಸಾಲಿನ ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕ್ ಮಂಡಳಿಗಳ ಅಧ್ಯಕ್ಷ ಸ್ಥಾನ ಸಿಕ್ಕಿರುವುದು ನಿಜ. ಬ್ಯಾಂಕಾಕ್‌ನಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಪಾಕಿಸ್ತಾನದ ಆರ್ಥಿಕ ವ್ಯವಹಾರಗಳ ಸಚಿವ ಅಹದ್ ಖಾನ್ ಚೀಮಾ ಅವರನ್ನು ಮುಂಬರುವ ವರ್ಷದ ಅಧ್ಯಕ್ಷರನ್ನಾಗಿ ಅಧಿಕೃತವಾಗಿ ಘೋಷಿಸಲಾಗಿದೆ. ಸುಮಾರು 74 ವರ್ಷಗಳ ಸುದೀರ್ಘ ಅವಧಿಯ ಬಳಿಕ (1953ರ ನಂತರ) ಪಾಕಿಸ್ತಾನಕ್ಕೆ ಈ ಸ್ಥಾನ ಒಲಿದುಬಂದಿದೆ.

ಪಟ್ಟ ಸಿಕ್ಕರೂ ಪಾಕಿಸ್ತಾನಕ್ಕಿಲ್ಲ ಪವರ್! ಯಾಕೆ?

ಹೆಸರಿಗೆ ಮಾತ್ರ ಪಾಕಿಸ್ತಾನ ಐಎಂಎಫ್ ಬಾಸ್ ಪಟ್ಟಕ್ಕೇರಲಿದೆಯಾದರೂ, ಅದಕ್ಕೆ ಯಾವುದೇ ನಿರ್ಣಾಯಕ ಅಧಿಕಾರ ಇರುವುದಿಲ್ಲ. ಹೌದು, ಈ ಬೋರ್ಡ್ ಆಫ್ ಗವರ್ನರ್ಸ್ ಅಧ್ಯಕ್ಷ ಸ್ಥಾನವು ಕೇವಲ ಸಾಂಸ್ಥಿಕ ಕಾರ್ಯವಿಧಾನಗಳು ಮತ್ತು ವಾರ್ಷಿಕ ಸಭೆಗಳ ಅಧ್ಯಕ್ಷತೆ ವಹಿಸುವುದಕ್ಕಷ್ಟೇ ಸೀಮಿತವಾಗಿರುತ್ತದೆ. ಯಾವ ದೇಶಕ್ಕೆ ಎಷ್ಟು ಸಾಲ ನೀಡಬೇಕು ಅಥವಾ ಯಾರ ಸಾಲ ಮನ್ನಾ ಮಾಡಬೇಕು ಎಂಬ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಯಾವುದೇ ಪವರ್ ಈ ಹುದ್ದೆಗೆ ಇರುವುದಿಲ್ಲ. ಆ ಎಲ್ಲ ಆರ್ಥಿಕ ಮತ್ತು ಸಾಲದ ನಿರ್ಧಾರಗಳನ್ನು ಐಎಂಎಫ್ ಮತ್ತು ವಿಶ್ವಬ್ಯಾಂಕ್‌ನ ಕಾರ್ಯಕಾರಿ ಮಂಡಳಿ ಮತ್ತು ವ್ಯವಸ್ಥಾಪಕ ನಿರ್ದೇಶಕರು ಮಾತ್ರ ತೆಗೆದುಕೊಳ್ಳುತ್ತಾರೆ. ಹಾಗಾಗಿ, ಈ ಸ್ಥಾನವು ಪಾಕಿಸ್ತಾನಕ್ಕೆ ಜಾಗತಿಕ ಆರ್ಥಿಕ ಚರ್ಚೆಗಳಲ್ಲಿ ಭಾಗವಹಿಸಲು ಒಂದು ಪ್ರಮುಖ ವೇದಿಕೆಯನ್ನು ಒದಗಿಸುತ್ತದೆಯೇ ಹೊರತು, ಸ್ವಂತ ಲಾಭಕ್ಕೆ ಬಳಸಿಕೊಳ್ಳುವಂತಹ ರಾಜಕೀಯ ಅಥವಾ ಆರ್ಥಿಕ ಶಕ್ತಿಯನ್ನು ನೀಡುವುದಿಲ್ಲ.

## ಒಂದೆಡೆ ಅಧ್ಯಕ್ಷ ಪಟ್ಟ, ಮತ್ತೊಂದೆಡೆ ಸಾಲದ ಭಿಕ್ಷೆ!

ಒಂದೆಡೆ ಜಾಗತಿಕ ಆರ್ಥಿಕ ಸಂಸ್ಥೆಗಳ ಮುಖಂಡತ್ವ ವಹಿಸಿಕೊಳ್ಳುತ್ತಿರುವ ಪಾಕಿಸ್ತಾನ, ಮತ್ತೊಂದೆಡೆ ಅದೇ ಸಂಸ್ಥೆಗಳ ಮುಂದೆ ಸಾಲಕ್ಕಾಗಿ ಬಿಕ್ಷಾ ಪಾತ್ರೆ ಹಿಡಿದು ನಿಂತಿರುವುದು ದೊಡ್ಡ ವಿಪರ್ಯಾಸವಾಗಿದೆ. ಅದರಂತೆ, ಪ್ರಸ್ತುತ ಪಾಕಿಸ್ತಾನವು ತನ್ನ ಆರ್ಥಿಕ ಕುಸಿತವನ್ನು ತಡೆಯಲು ಐಎಂಎಫ್ ನಿಂದ $7 ಬಿಲಿಯನ್ ಮತ್ತು ಹವಾಮಾನ ಬಿಕ್ಕಟ್ಟು ಎದುರಿಸಲು $1.4 ಬಿಲಿಯನ್ ಸಾಲದ ನೆರವನ್ನು ಅವಲಂಬಿಸಿದೆ. ಇದಲ್ಲದೆ, ಇತ್ತೀಚಿನ ಪರಾಮರ್ಶೆಗಳ ಪ್ರಕಾರ ಹೆಚ್ಚುವರಿಯಾಗಿ $1.2 ಬಿಲಿಯನ್ ಹಣದ ಬಿಡುಗಡೆಗಾಗಿ ಐಎಂಎಫ್ ಕಾರ್ಯಕಾರಿ ಮಂಡಳಿಯ ಅನುಮೋದನೆಗೆ ಚಾತಕ ಪಕ್ಷಿಯಂತೆ ಕಾಯುತ್ತಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಜಾಗತಿಕ ಸಂಸ್ಥೆಗಳ ಅಧ್ಯಕ್ಷ ಸ್ಥಾನ ಸಿಕ್ಕಿರುವುದು ಪಾಕಿಸ್ತಾನಕ್ಕೆ ರಾಜತಾಂತ್ರಿಕವಾಗಿ ಹೆಮ್ಮೆಯ ವಿಷಯವಾಗಿದ್ದರೂ, ದೇಶದ ಆರ್ಥಿಕ ದಿವಾಳಿತನ ಮತ್ತು ಸಾಲದ ಸುಳಿಗೆ ಸಿಲುಕಿರುವ ಅದರ ವಾಸ್ತವ ಸ್ಥಿತಿಯೇನೂ ಬದಲಾಗುವುದಿಲ್ಲ. .

# ಮಳೆಯಿಂದಾಗಿ 5ನೇ ಟಿ20 ಪಂದ್ಯ ರದ್ದು ಎರಡು ತಂಡಕ್ಕೂ ಟ್ರೋಫಿ ಹಂಚಿಕೆ




ಬೆಂಗಳೂರು: ನಿರಂತರ ಮಳೆಯಿಂದಾಗಿ ಬೆಂಗಳೂರಿನಲ್ಲಿ ಶನಿವಾರ ನಡೆಯುತ್ತಿದ್ದ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ 5 ಪಂದ್ಯಗಳ ಟಿ20 ಸರಣಿಯ ಅಂತಿಮ ಪಂದ್ಯ ರದ್ದಾ ಗಿದ್ದು, ಟ್ರೋಫಿಯನ್ನು ಎರಡೂ ತಂಡಗಳಿಗೆ ಹಂಚಿಕೆ ಮಾಡಲಾಗಿದೆ.

ಇಂದು ಬೆಂಗಳೂರಿನ ಚಿನ್ನ ಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಪಂದ್ಯವನ್ನು ಮಳೆಯಿಂದಾಗಿ ತಲಾ 9 ಓವರ್‌ಗಳಿಗೆ ಸೀಮಿತಗೊಳಿಸಲಾಗಿತ್ತು.

ನಿರ್ಣಾಯಕ ಪಂದ್ಯದಲ್ಲಿ ಟಾಸ್ ಗೆದ್ದ ವೆಸ್ಟ್ ಇಂಡೀಸ್ ನಾಯಕ ಶಾಯ್ ಹೋಪ್ ಅವರು ಬೌಲಿಂಗ್ ಆಯ್ಕೆ ಮಾಡಿಕೊಂಡರು. ಹೀಗಾಗಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 7.4 ಓವರ್ ಗಳಲ್ಲಿ ಐದು ವಿಕೆಟ್ ಕಳೆದುಕೊಂಡು 118 ರನ್ ಗಳಿಸಿತ್ತು. 8ನೇ ಓವರ್‌ನಲ್ಲಿ ಮತ್ತೆ ಮಳೆ ಸುರಿಯಲಾರಂಭಿಸಿತು. ಹೀಗಾಗಿ ಪಂದ್ಯವನ್ನು ಅರ್ಧಕ್ಕೆ ಸ್ಥಗಿತಗೊಳಿಸಲಾಗಿತ್ತು. ಆದರೆ ಕ್ರಮೇಣ ಮಳೆ ಜೋರಾದ ಕಾರಣ ಪಂದ್ಯವನ್ನು ರದ್ದುಗೊಳಿಸಲು ತೀರ್ಮಾನಿಸಲಾಗಿದೆ. ಹೀಗಾಗಿ ಸರಣಿ 2–2ರ ಸಮಬಲದೊಂದಿಗೆ ಅಂತ್ಯಗೊಂಡಿದ್ದು, ಉಭಯ ತಂಡಗಳು ಟ್ರೋಫಿಯನ್ನು ಹಂಚಿಕೊಂಡಿವೆ. ಏಕೆಂದರೆ ಸರಣಿಯಲ್ಲಿ ಉಭಯ ತಂಡಗಳು ತಲಾ 2 ಪಂದ್ಯಗಳನ್ನು ಗೆದ್ದು ಸಮಬಲ ಸಾಧಿಸಿವೆ.

# ಕೋಲ್ಕತ್ತಾದಲ್ಲಿ ದುರ್ಗಾಪೂಜಾ ವೇಳೆ ಕಾಲ್ತುಳಿತ! 17 ಭಕ್ತರ ಸಾವು, 35ಕ್ಕೂ ಹೆಚ್ಚು ಜನರ ಸ್ಥಿತಿ ಗಂಭೀರ



ಕೋಲ್ಕತ್ತಾ: ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತಾದ ಚೋರ್ಬಗನ್ ಸಾರ್ವಜನಿಕ ದುರ್ಗಾಪೂಜಾ ವೇಳೆ ಶನಿವಾರ ಸಂಜೆ ಭಾರಿ ಜನದಟ್ಟಣೆಯಿಂದಾಗಿ ನೂಕುನುಗ್ಗಲು ಹೆಚ್ಚಾಗಿದ್ದು, ಕಾಲ್ತುಳಿತ ಸಂಭವಿಸಿದೆ. ದುರ್ಗಾಪೂಜೆಯ ಸಪ್ತಮಿ ಹಬ್ಬದ ಆಚರಣೆಯ ಹಿನ್ನೆಲೆಯಲ್ಲಿ ಉತ್ತರ ಕೋಲ್ಕತ್ತಾದ ಈ ಪೆಂಡಾಲ್‌ಗೆ ಅತಿಯಾದ ಸಂಖ್ಯೆಯಲ್ಲಿ ಭಕ್ತಾದಿಗಳು ಜಮಾಯಿಸಿದ್ದರಿಂದ ಈ ದುರ್ಘಟನೆ ನಡೆದಿದೆ. ವರದಿಗಳ ಪ್ರಕಾರ 17ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ ಎನ್ನಲಾಗುತ್ತಿದೆ. 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇದರಲ್ಲಿ ಹಲವರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದೆ.

**ತೀವ್ರ ಸೆಖೆ ಹಾಗೂ ಜನದಟ್ಟಣೆಯಿಂದ ನೂಕುನುಗ್ಗಲು**

ವರದಿಗಳ ಪ್ರಕಾರ, ಅತಿಯಾದ ಜನದಟ್ಟಣೆ ಮತ್ತು ಕಡು ಸೆಖೆಯ ವಾತಾವರಣದಿಂದಾಗಿ ಭಕ್ತರಲ್ಲಿ ದಿಢೀರ್ ಆತಂಕ ಸೃಷ್ಟಿಯಾಯಿತು. ಇದರ ಮಧ್ಯೆ, ಸಂಜೆ 7:40 ರ ಸುಮಾರಿಗೆ ದಿಢೀರ್ ಮಳೆ ಬಂದಾಗ, ಜನರೆಲ್ಲರೂ ಒಟ್ಟಿಗೆ ಪಂಡಾಲ್‌ನಿಂದ ಹೊರಹೋಗುವ ಗೇಟ್‌ನತ್ತ ಹೋಗಲು ಪ್ರಯತ್ನಿಸಿದರು. ಉಸಿರುಗಟ್ಟುವ ವಾತಾವರಣದಿಂದಾಗಿ ಜನರು ಗಾಬರಿಗೊಂಡು ಓಡಲು ತೊಡಗಿದಾಗ ಈ ಅವಾಂತರ ಸೃಷ್ಟಿಯಾಗಿದೆ, ಇದೇ ನೂಕುನುಗ್ಗಲಿನ ಪರಿಣಾಮ ಪೆಂಡಾಲ್‌ನ ಒಂದು ಭಾಗ ಕುಸಿದು ಬಿದ್ದಿದ್ದರಿಂದ ಕಾಲ್ತುಳಿತ ಸಂಭವಿಸಲು ಕಾರಣವಾಗಿದೆ.

ಅಲ್ಲದೆ ಅತಿಯಾದ ಉಷ್ಣಾಂಶ ಹಾಗೂ ಜನದಟ್ಟಣೆಯಿಂದಾಗಿ ಕೆಲವರು ಸ್ಥಳದಲ್ಲೇ ಅಸ್ವಸ್ಥರಾಗಿದ್ದರು. ಇದರ ಮಧ್ಯೆ ಕಾಲ್ತುಳಿತ ಸಂಭವಿಸಿದೆ ಎಂಬ ವದಂತಿಗಳು ಹರಡಿದ ಕಾರಣ ಜನರಲ್ಲಿದ್ದ ಭಯ ಮತ್ತಷ್ಟು ಹೆಚ್ಚಾಗಿ ಎಲ್ಲರೂ ಒಂದೇ ಸಮಯದಲ್ಲಿ ಹೊರ ಹೋಗಲು ಪ್ರಯತ್ನಿಸಿದ್ದರಿಂದ ದುರಂತ ಸಂಭವಿಸಿದೆ ಎಂದು ತಿಳಿದುಬಂದಿದೆ.

**ಗಾಯಾಳುಗಳು ಆಸ್ಪತ್ರೆಗೆ ದಾಖಲು**

ಘಟನೆಯ ಬಗ್ಗೆ ಮಾಹಿತಿ ಪಡೆದ ನಂತರ, ಪೊಲೀಸ್ ನಿಯಂತ್ರಣ ಕೊಠಡಿ, ಅಗ್ನಿಶಾಮಕ ದಳ, ಕೋಲ್ಕತ್ತಾ ಪೊಲೀಸರ ವಿಪತ್ತು ನಿರ್ವಹಣಾ (ಡಿಎಂಜಿ) ತಂಡ ಮತ್ತು ಹಲವಾರು ಆಂಬ್ಯುಲೆನ್ಸ್‌ಗಳು ಮತ್ತು ವೈದ್ಯಕೀಯ ತಂಡವನ್ನು ಸ್ಥಳಕ್ಕೆ ಆಗಮಿಸಿದೆ. ಪರಿಸ್ಥಿತಿಯನ್ನು ನಿಯಂತ್ರಿಸಲು ಮತ್ತು ಭದ್ರತಾ ಕಾರಣಗಳಿಗಾಗಿ, ಚೋರ್ಬಗನ್ ಪೂಜಾ ಪೆಂಡಲ್ ಮುಚ್ಚಿದ್ದಾರೆ.

**ಸಹಾಯವಾಣಿ ಸಂಖ್ಯೆ ಪ್ರಕಟ**

ಚೋರ್‌ಬಾಗನ್ ದುರ್ಗಾಪೂಜಾ ಪಂಡಾಲ್ ಅಪಘಾತಕ್ಕೆ ಸಂಬಂಧಿಸಿದಂತೆ ಮಾಹಿತಿ ಹಾಗೂ ನೆರವು ಪಡೆಯಲು ಪಶ್ಚಿಮ ಬಂಗಾಳ ಸರ್ಕಾರವು ತಕ್ಷಣವೇ 18003455678 ಎಂಬ ಉಚಿತ ಟೋಲ್–ಫ್ರೀ ಸಹಾಯವಾಣಿ ಸಂಖ್ಯೆಯನ್ನು ಬಿಡುಗಡೆ ಮಾಡಿದೆ.